[illegible]

[illegible]: KUMBKS-00536

[illegible]

[illegible]

[illegible]

[illegible]

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ
ಸಂಶೋಧನಾ ಪ್ರಬಂಧ

“ಅಮೃತಾ ಪ್ರೀತಂ ಅವರ ಕಥನದಲ್ಲಿ ಸ್ತ್ರೀ ಅಸ್ಮಿತೆ”

ಅಶ್ವಿನಿ ಕೆ.ಎಸ್.
ಸಂಶೋಧನಾ ವಿದ್ಯಾರ್ಥಿ
ನೋಂದಣಿ ಸಂಖ್ಯೆ : ಕೆ.ವಿ.ಎಂ.ಬಿ.ಕೆ.ಎಸ್ – ೦೦೫೩೬ – ೨೦೧೨

ಮಾರ್ಗದರ್ಶಕರು
ಡಾ. ಶೀಲಾದೇವಿ ಎಸ್. ಮಳೀಮಠ
ಸಹ ಪ್ರಾಧ್ಯಾಪಕರು
ಬಿ.ಎಂ.ಎಸ್ ಮಹಿಳಾ ಪದವಿ ಕಾಲೇಜು
ಬಸವನಗುಡಿ, ಬೆಂಗಳೂರು – ೫೬೦೦೦೪

ಕಾವ್ಯಮಂಡಲ
ಬೆಂಗಳೂರು
೨೦೧೧-೨೦೧೨

ದೃಢೀಕರಣ ಪತ್ರ

ಅಶ್ವಿನಿ ಕೆ.ಎಸ್. ಅವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ **"ಅಮೃತಾ ಪ್ರೀತಂ ಅವರ ಕಥನದಲ್ಲಿ ಸ್ತ್ರೀ ಅಸ್ಮಿತೆ"** ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ಪರ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 29/6/12

ಸ್ಥಳ: ಬೆಂಗಳೂರು

ಸಹಿ/–

ಶೀ ಮಳೀಮಠ

ಮಾರ್ಗದರ್ಶಕರು

ಡಾ. ಶೀಲಾದೇವಿ ಎಸ್. ಮಳೀಮಠ

ಸಹ ಪ್ರಾಧ್ಯಾಪಕರು

ಬಿ.ಎಂ.ಎಸ್ ಮಹಿಳಾ ಪದವಿ ಕಾಲೇಜು

ಬಸವನಗುಡಿ, ಬೆಂಗಳೂರು – ೫೬೦೦೦೪

ಪ್ರಮಾಣ ಪತ್ರ

"ಅಮೃತಾ ಪ್ರೀತಂ ಅವರ ಕಥನದಲ್ಲಿ ಸ್ತ್ರೀ ಅಸ್ಮಿತೆ" ಎಂಬ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ಡಾ. ಶೀಲಾದೇವಿ ಎಸ್. ಮಳೀಮಠ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ವಿಷಯವಾಗಿ ಇದುವರೆಗೂ ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 7/7/12

ಸ್ಥಳ : ಬೆಂಗಳೂರು

Ashwini K.S.

ಅಶ್ವಿನಿ ಕೆ.ಎಸ್.
ಸಂಶೋಧನಾ ವಿದ್ಯಾರ್ಥಿ
ಬೆಂಗಳೂರು.

ಪರಿವಿಡಿ



ಅಮೃತಾ ಪ್ರೀತಂ

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಸೇದಲು ಸಿಗರೇಟು
ಹದಿನಾಲ್ಕು ನಿಮಿಷ ಪಡೆಯಿತು
ಇದನ್ನು ಬರೆಯಲು ನನಗೆ
ಹದಿನಾಲ್ಕು ವರುಷ ಹಿಡಿಯಿತು
ನನ್ನ ದೇಹ ಹೊತ್ತಿಸಿದ ಸಿಗರೇಟಾಗಿತ್ತು
ನಿನ್ನುಸಿರು ಅದಕ್ಕೆ ಜೀವ ನೀಡಿತ್ತು
ಸತತ ಅದು ಉರಿಯುತ್ತಿರುವುದಕ್ಕೆ ಈ ಭೂಮಿ ಸಾಕ್ಷಿ

– ಸುನೇರಿ, ಅಮೃತಾ ಪ್ರೀತಂ

'ಬೆಂಕಿ ಕಥೆ' ಎಂಬ ಶೀರ್ಷಿಕೆಯಿರುವ ಕಿರು ಕವಿತೆಯಿದು. ನನ್ನ ನೋವು ಉರಿದು, ಉಳಿದ ಬೂದಿಯು ಕವಿತೆಗಳ ರೂಪದಲ್ಲಿದೆ ಎಂದು ಕವಯಿತ್ರಿ ವಿಷಾದದಿಂದ ಬರೆದಿರುವ ಸಾಲುಗಳಿವು. ಅಮೃತಾ ಪ್ರೀತಂರನ್ನು ಓದಲು ಶುರು ಮಾಡಿದಾಗ, ಈ ಸಾಲುಗಳೇ ಅವರ ಜೀವನದ ಬಗ್ಗೆಯೂ ತಿಳಿದುಕೊಳ್ಳುವಂತೆ ನನ್ನನ್ನು ಪ್ರೇರೇಪಿಸಿದವು. ಹೀಗೆ ಅವರ ಕಥೆ, ಕವಿತೆ, ಕಾದಂಬರಿ, ಆತ್ಮಚರಿತ್ರೆ ಓದಿದೆ. ಕತೆಯನ್ನು ಓದಿದ ಮೇಲೆ ಸುಮ್ಮನಿರಲು ಸಾಧ್ಯವಾಗಲಿಲ್ಲ. ಎಂ.ಫಿಲ್‌ನ ಸಂಶೋಧನಾ ವಿಷಯಕ್ಕೆ ಅಮೃತಾ ಪ್ರೀತಂರವರ ಕಥನ ಸಾಹಿತ್ಯವನ್ನೆ ಆಯ್ಕೆ ಮಾಡಿಕೊಳ್ಳಬೇಕೆನಿಸಿತು.

ಅಮೃತಾ ಪ್ರೀತಂ ಅವರ ಕಥನದಲ್ಲಿ ಸ್ತ್ರೀವಾದದ ಪರಿಕಲ್ಪನೆಗಳಿರುವುದನ್ನು, ಉದಾರವಾದಿ ಸ್ತ್ರೀವಾದ, ತೀವ್ರಗಾಮಿ ಸ್ತ್ರೀವಾದ, ಮನೋವಿಶ್ಲೇಷಣಾತ್ಮಕ ಸ್ತ್ರೀವಾದ, ಅಸ್ತಿತ್ವವಾದಿ ಸ್ತ್ರೀವಾದ, ಸಮಾಜ ವಾದಿ ಸ್ತ್ರೀವಾದ, ಆಧುನಿಕೋತ್ತರ ಸ್ತ್ರೀವಾದ – ಹೀಗೆ ಹಲವು ಸ್ತ್ರೀವಾದದ ಪರಿಕಲ್ಪನೆಗಳು ಅವರ ಕಥನದ ಹಲವು ಪಾತ್ರಗಳಿಗೆ ಹೊಂದಾಣಿಕೆ ಆಗುವುದನ್ನು ಮನಗಂಡಿದ್ದೇನೆ. ಅವರ ಪಾತ್ರಗಳು, ಅವುಗಳ ವಿಚಾರಗಳು ಸ್ತ್ರೀಯರ ಅಸ್ಮಿತೆಯನ್ನು ಗುರುತಿಸುವಲ್ಲಿ ಸಹಾಯಕವಾಗಿಯೂ, ಪೂರಕ ವಾಗಿಯೂ ನಿಲ್ಲುತ್ತವೆ. ಕೊನೆಯವರೆಗೂ ತನ್ನ ಉಳಿವಿಗಾಗಿ ಹೋರಾಡುವ ಪಾತ್ರಗಳಾಗಿ ಹಮೀದಾ, ತಾರೋ, ವೀರೋ, ಮೂರ್ತಿ, ಧನ್ನೋ ಗೋಚರಿಸುತ್ತಾರೆ.

ಈ ಅಧ್ಯಯನದಲ್ಲಿ ಕೆಲವು ಸ್ತ್ರೀವಾದದ ಪರಿಕಲ್ಪನೆಗಳನ್ನು ಅಮೃತಾ ಪ್ರೀತಂ ಕಥನದಲ್ಲಿ ಬರುವ ಕೆಲವು ಪಾತ್ರಗಳಿಗೆ ಸಮೀಕರಿಸಿ, ಹೆಣ್ಣು, ದೇಹ, ಮನಸ್ಸುಗಳು ಬೇರೆ ಬೇರೆಯಾಗಿವೆಯೆ ಎಂಬಂತಹ ಸ್ತ್ರೀ ಅಸ್ಮಿತೆಯ ಪ್ರಶ್ನೆಗಳನ್ನು ಚರ್ಚಿಸಲಾಗುತ್ತದೆ. ಹೆಣ್ಣಿಗೆ ತನ್ನ ದೇಹದ ಮೇಲೆಯೇ ಅಧಿಕಾರ

ವಿರುವುದಿಲ್ಲ. ತನ್ನ ದೇಹ ಯಾತಕ್ಕಾಗಿ, ಯಾರಿಂದ ಬಳಸಲ್ಪಡಬೇಕು ಎಂದು ನಿರ್ಧರಿಸುವಲ್ಲಿ ಅವಳಿಗೆ ಯಾವುದೇ ಸ್ವಾತಂತ್ರ್ಯವಿಲ್ಲ. ಹಾಗೆಯೇ, ಅವಳ ದೇಹ ಒಂದನ್ನು ಬಯಸಿದರೆ, ಮನಸ್ಸು ಮತ್ತೊಂದನ್ನು ಬಯಸುತ್ತದೆ. ಹಾಗಾಗಿ ಇವುಗಳೆಲ್ಲ ಬೇರೆ ಬೇರೆ. ಹಮೀದಾ ತಾರೋಳ ಪಾತ್ರವನ್ನು ನೋಡಿದಾಗ ಈ ವಿಷಯ ಇನ್ನಷ್ಟು ಸ್ಪಷ್ಟಗೊಳ್ಳುತ್ತದೆ. ಇದನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗುತ್ತದೆ.

ಸ್ತ್ರೀ ಶಿಕ್ಷಣದ ಪ್ರಾಮುಖ್ಯತೆಯನ್ನು ಸಾರುವ, ಪ್ರೀತಿಯನ್ನು ಹುಡುಕುವ ಹಲವು ಪಾತ್ರಗಳ ಜೊತೆಗೆ ಭಿನ್ನ ಪುರುಷ ಪಾತ್ರಗಳನ್ನು, ಸ್ತ್ರೀ – ಪುರುಷ ಮುಖಾಮುಖಿಯ ಪ್ರಮುಖ ಸಂದರ್ಭಗಳನ್ನು ಅಮೃತಾರ ಕಥನದಲ್ಲಿ ನೋಡಬಹುದಾಗಿದೆ. ದೇಶ ವಿಭಜನೆಯ ಸಂದರ್ಭ ದಲ್ಲಿ ನಡೆದ ಮುಸ್ಲಿಂ – ಹಿಂದೂಗಳ ಸಂಘರ್ಷ, ಹಿಂದೂ – ಮುಸ್ಲಿಂ ಮಹಿಳೆಯರ ಮೇಲಿನ ದೌರ್ಜನ್ಯ, ಶೋಷಣೆ, ಹಿಂಸೆ, ಬಲಿ, ಅತ್ಯಾಚಾರಗಳನ್ನೆಲ್ಲಾ ಅಮೃತಾರವರ 'ಪಿಂಜರ್' ಕಾದಂಬರಿ ಚಿತ್ರಿಸುತ್ತದೆ.

ಅಮೃತಾರವರ 'ಬದುಕು' ಅವರ ಸಾಹಿತ್ಯಕ್ಕೂ ಘನತೆಯನ್ನು ತಂದಿದೆ. ಬರಹ ಅವರ ನಿಜವಾದ ಸಂಗಾತಿ. 'ಬದುಕಿನ ಏರಿಳಿತಗಳಲ್ಲಿ ನನ್ನ ಒಡನಾಡಿ ಯಾರಾದರೂ ಇದ್ದರೆ, ಅದು ನನ್ನ ಲೇಖನಿ' (ರಸೀದಿ ಟಿಕೆಟ್ ಪುಟ:೧೪೭). 'ನನ್ನ ಶವದ ಬಳಿ ನನ್ನ ಲೇಖನಿ ಇಡಬೇಕೆಂದು ಬಯಸು ತ್ತೇನೆ' (ರಸೀದಿ ಟಿಕೆಟ್ ಪುಟ:೧೪೯). ಹೀಗೆ ತಮ್ಮ ನೋವಿಗೆ ಲೇಖನಿಯಿಂದ ಸಾಂತ್ವನ ಸಿಗುತ್ತದೆಂದು ಅವರು ಹೇಳುತ್ತಾರೆ. ಅವರ ಬದುಕು ಹಾಗೂ ಕೃತಿಗಳು ಹಲವಾರು ಹೆಣ್ಣು ಮಕ್ಕಳು ದಿಟ್ಟತನದಿಂದ ಬದುಕಲು ಸ್ಫೂರ್ತಿಯಾಗಿವೆ. ಅವರ ದಿಟ್ಟತನದ ಬದುಕು, ಅವರ ಕೃತಿಗಳಲ್ಲಿ ಸಾಕಾರ ರೂಪವನ್ನು ಪಡೆದಿದೆ. ದಿಟ್ಟತನವಾಗಿ ಅವರು ಯಾವುದೇ ಸಮಸ್ಯೆಯನ್ನು ಎದುರಿಸುತ್ತಾರೆ. ಸಿಗರೇಟಿನ ರೂಪಕ ವಿರುವ 'ಅಮೃತಾ ಪ್ರೀತಂ' ಎಂಬ ಒಂದು ಚಿಕ್ಕ ಪದ್ಯವನ್ನು ಗಮನಿಸಿದರೆ ಈ ಮಾತು ಇನ್ನಷ್ಟು ಸ್ಪಷ್ಟವಾಗುತ್ತದೆ.

ಒಂದು ನೋವಿತ್ತು
ಮೌನವಾಗಿ
ನಾನು ಅದನ್ನು ಸಿಗರೇಟಿನಂತೆ
ಸೇದಿದ್ದೇನೆ
ಕೆಲವು ಹಾಡುಗಳಿವೆ
ಸಿಗರೇಟಿನಿಂದ
ಬೂದಿ – ಕೆಡವಿದ ಹಾಗೆ
ಕೊಡವಿದ್ದೇನೆ

– ಅಮೃತಾ ಪ್ರೀತಂ ಸುನೇರಿ

ಹೆಣ್ಣು ಮಕ್ಕಳ ಚಲನಶೀಲತೆಗೆ ಅಮೃತಾ ಪ್ರೀತಂ ಅವರ ಬದುಕು ಹಾಗೂ ಸಾಹಿತ್ಯ ಚೈತನ್ಯದಾಯಕವಾಗಬೇಕು. ಈ ನಿಟ್ಟಿನಲ್ಲಿ ನನ್ನ ಸಂಶೋಧನೆಯು ಅದಕ್ಕೆ ಪೂರಕವಾಗುತ್ತದೆಂದು ಹಾರೈಸುತ್ತೇನೆ.

ಅಧ್ಯಾಯ – ೨
ಅಮೃತಾ ಪ್ರೀತಂ

ಅಮೃತಾ ಪ್ರೀತಂ ಪಂಜಾಬಿಯ ಪ್ರಸಿದ್ಧ ಲೇಖಕಿ, ಕವಯಿತ್ರಿ, ಕತೆಗಾರ್ತಿ, ಕಾದಂಬರಿಕಾರ್ತಿ, ಪ್ರಬಂಧಕಾರ್ತಿ, ಸಾಹಿತ್ಯಿಕ ಪತ್ರಿಕೋದ್ಯೋಗಿ, ಜನಪದ ಸಾಹಿತ್ಯ ಸಂಗ್ರಾಹಕಿ. ಅವರು ಭಾರತ – ಪಾಕಿಸ್ತಾನಗಳೆರಡರ ಗಡಿಗಳ ಬಗ್ಗೆ ಸಮಾನ ಒಲವು ಹೊಂದಿದ್ದರು. ಸುಮಾರು ಆರು ದಶಕಗಳ ಅವರ ವೃತ್ತಿ ಜೀವನದಲ್ಲಿ ಸುಮಾರು ೧೦೦ ಕ್ಕಿಂತ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಅವರು ಸುಮಾರು ೨೦ ಕವನ ಸಂಕಲನಗಳನ್ನು, ೨೪ ಕಾದಂಬರಿಗಳನ್ನು, ೧೫ ಕಥಾ ಸಂಕಲನಗಳನ್ನು, ೨೩ ಸಂಪುಟಗಳ ಗದ್ಯ ಸಾಹಿತ್ಯವನ್ನು ಪ್ರಕಟಿಸಿದ್ದಾರೆ. ಡಾಕ್ಟರ್ ದೇವ್, ಕೋರೆ ಕಾಗಜ್ ಉಂಚಾಸ್ ದಿನ್, ಸಾಗರ್ ಐರ್ ಸೀಪಿಯನ್, ರಂಗ್ ಕಾ ಪತ್ತಾ, ದಿಲ್ಲಿ ಕಿ ಗಾಲಿಯನ್, ತೆರೆವ್ಹಾನ್ ಸೂರಜ್, ಯಾತ್ರಿ, ಜಿಲಾವತನ್ ಕೃತಿಗಳು ಹಲವು ಭಾಷೆಗಳಿಗೆ ಭಾಷಾಂತರಗೊಂಡಿವೆ. ರಸೀದಿ ಟಿಕೆಟ್, ಶಾಡೋಸ್ ಆಫ್ ವರ್ಡ್ಸ್ ಎಂಬ ಎರಡು ಆತ್ಮಕಥೆಗಳನ್ನು ಬರೆದಿದ್ದಾರೆ. ಕಹಾನಿಯಾ ಜೋ ಕಹಾನಿಯಾ ನಹಿ, ಕಹಾನಿಯೊಂಕಿ ಆಂಗನ್ ಮೆ, ಸ್ಟೆಂಚ್ ಆಫ್ ಕೆರೊಸಿನ್ ಅವರ ಸಣ್ಣಕಥೆಗಳು. ಅಮೃತ್ ಲೆಹರ್, ಜಿಯುನ್ದಾ ಜೀವನ್, ತ್ರೆಲ್ ಧೊತೆ ಫೌಲ್, ಗೀತನ್ ವ್ಯಾಲಿಯಾ, ಬದ್ಲಾಮ್ ದೆ ಲಾಲಿ, ಸಾಂಜ್ ದೆ ಲಾಲಿ, ಲೋಕ್ ಪೀರಾ, ಪಥರ್ ಗೀತೆಯ್, ಪಂಜಾಬಿ ದಿ ಆವಾಜ್, ಸುನಹರೆ, ಅಶೋಕ್ ಚೆಟಿ, ಕಸ್ತೂರಿ, ನಾಗಮಣಿ, ಏಕ್ ತಿ ಅನಿತಾ, ಚಕ್ ನಂಬರ್ ಛಟ್ಟಿ, ಯುನಿಂಜಾ ದಿನ್, ಕಾಗಜ್ ಕೆ ಕ್ಯಾನ್ವಾಸ್, ಚುನಿ ಹುವೀ ಕವಿತಾಯೆ ಕವನ ಸಂಕಲನಗಳು.

೧೯೪೭ರಲ್ಲಿ ಭಾರತ ಇಭ್ಭಾಗವಾದ ನಂತರ ಸುಮಾರು ಒಂದು ದಶಲಕ್ಷದಷ್ಟು ಮುಸ್ಲಿಮರು, ಹಿಂದುಗಳು ಮತ್ತು ಸಿಖ್ಖರು ಕೋಮುಗಲಭೆಗಳಲ್ಲಿ ಮೃತಪಟ್ಟರು. ಆಗ ೨೮ ವರ್ಷ ವಯಸ್ಸಿನ ಅಮೃತಾ ಪ್ರೀತಮ್ ಲಾಹೊರ್‌ನಲ್ಲಿನ ಪಂಜಾಬೀ ನಿರಾಶ್ರಿತರ ತಾಣದಿಂದ ನವದೆಹಲಿಗೆ ತೆರಳಿದರು. ನಂತರ ೧೯೪೮ ರಲ್ಲಿ ಅವರು ತಮ್ಮ ಪುತ್ರನನ್ನು ಒಡಲಲ್ಲಿ ಹೊತ್ತು, ಡೆಹರಾಡೂನ್‌ನಿಂದ ದೆಹಲಿಗೆ ಪ್ರಯಾಣಿಸುವ ಸಂದರ್ಭದಲ್ಲಿ ತಮ್ಮ ಆಕ್ರೋಶವನ್ನು ತುಂಡು ಕಾಗದವೊಂದರ ಮೇಲೆ ಕಾಣಿಸಿ, ಅದಕ್ಕೆ ಉಗ್ರ ಕವನದ ರೂಪ ಕೊಟ್ಟರು. ಆ ಕವಿತೆ 'ಆಜ್ ಅಖಾನ್ ವಾರಿಸ್ ಶಾಹ್' ಭಾರತ ಇಭ್ಭಾಗದ ಅತ್ಯಂತ ಭಯಾನಕ ಕರಾಳ ನೆನಪಾಗಿ ಕಾಡುತ್ತದೆ. ಚಾರಣ ಕವಿ ವಾರಿಸ್ ಶಾಹ್‌ನ 'ಹೀರ್ ರಾಂಜ್' ಕವಿತೆಯ ನೆನಪಾಗಿ ಈ ಕವನವನ್ನು ಬರೆಯಲಾಗಿದೆ. 'ನಾನಿಂದು, ವಾರಿಸ್ ಶಾ ಅವರು ತಮ್ಮ ಸಮಾಧಿಯಿಂದೆದ್ದು, ಮಾತನಾಡುವಂತೆ ಕರೆ ನೀಡುತ್ತೇನೆ. ಅದಲ್ಲದೇ ಪ್ರೇಮ ಪುಸ್ತಕದ ವಾತ್ಸಲ್ಯದ ಮತ್ತೊಂದು ಪುಟದತ್ತ ವಾಲುತ್ತೇನೆ. ಒಮ್ಮೆ ಈ ಪಂಜಾಬಿನ ಪುತ್ರಿ ಅತ್ತಾಗ ನೀವು ಆ ಕರಣಾಜನಕ

ಹಾಡನ್ನು ಬರೆದಿದ್ದೀರಿ. ಇಂದು ದಶಲಕ್ಷದಷ್ಟು ನಿನ್ನ ಪುತ್ರಿಯರು ರೋದಿಸುತ್ತಿದ್ದಾರೆ. ವಾರಿಸ್ ಶಾರಿಗೆ ಅವರು ಪ್ರಾರ್ಥಿಸುತ್ತಿದ್ದಾರೆ. ಓ ಜಗದ ದುಃಖ ಪರಿಹಾರಕನೇ ಏಳು ಎದ್ದೇಳು! ನೋಡು ನಿನ್ನ ಪಂಜಾಬದೆಡೆಗೆ. ಇಂದು ಎಲ್ಲೆಡೆಗೂ ಮೈದಾನದಲ್ಲಿ ಶವಗಳ ರಾಶಿ ಬಿದ್ದಿದೆ. ರಕ್ತ ಚೆನಾಬ್‌ನ ಸರೋವರವಾಗಿದೆ' ಎಂದು ವಾರಿಸ್ ಶಾ ನನ್ನು ನೆನೆಯುತ್ತಾರೆ.

ಅಮೃತಾ ಪ್ರೀತಮ್ ಅವರು ಸಿದ್ಧ ಉಡುಪು ಮಾರಾಟದ ಮುಂಚೂಣಿಯಲ್ಲಿದ್ದ ಲಾಹೋರ್‌ದ ಅನಾರಕಲಿ ಬಜಾರ್‌ನ ವ್ಯಾಪಾರಿಯ ಪುತ್ರ ಪ್ರೀತಂ ಸಿಂಗ್ ಅವರನ್ನು ವಿವಾಹವಾದರು. ತಮ್ಮ ಗಂಡನ ಮೇಲಿನ ಗೌರವದಿಂದ ಅಮೃತಾ ತಮ್ಮ ಹೆಸರಿನ ಒಂದು ಭಾಗ 'ಕೌರ್' ಅನ್ನು ಬಿಟ್ಟುಕೊಟ್ಟು, 'ಪ್ರೀತಮ್' ಎಂಬುದನ್ನು ಸೇರಿಸಿ, ಅಮೃತಾ ಪ್ರೀತಂ ಆದರು. ಈ ದಾಂಪತ್ಯದಿಂದ ಅವರಿಗೆ ಇಬ್ಬರು ಮಕ್ಕಳಾದರು. ಪುತ್ರಿ ಕೂಡ್ಲಾ, ಪುತ್ರ ನವರಾಜ್. ಆದರೆ ಈ ದಾಂಪತ್ಯ ಬಹಳ ಕಾಲ ಕೂಡಿ ಬರಲಿಲ್ಲ. ಅಮೃತಾ ಪ್ರೀತಂ ಅವರು ತಮ್ಮ ಪತಿಯನ್ನು ಬಿಟ್ಟು ಕವಿ ಸಾಹಿರ್ ಲುಧಿಯಾನ್ವಿ ಅವರೊಂದಿಗೆ ಬಾಳ ಪಥದಲ್ಲಿ ಸಾಗುವ ನಿರ್ಧಾರ ಮಾಡಿದರು. ಈ ಪ್ರೇಮ ಕಥಾನಕವನ್ನು ಅವರು ತಮ್ಮ ಆತ್ಮಚರಿತ್ರೆ ರಸೀದಿ ಟಿಕೇಟ್‌ನಲ್ಲಿ ಚಿತ್ರಿಸಿದ್ದಾರೆ. ಯಾವಾಗ ಇನ್ನೊಬ್ಬ ಮಹಿಳೆ ಸಾಹಿರ್ ಅವರ ಜೀವನ ಪ್ರವೇಶಿದಳೋ ಆಗ ಅವರು ಹೆಸರಾಂತ ಕಲಾವಿದ ಇಮ್ರೋಜ್ ಅವರ ಸಂಗಾತಿಯಾದರು. ಅವರು ತಮ್ಮ ಕೊನೆಯ ನಲವತ್ತು ವರ್ಷಗಳನ್ನು ಇಮ್ರೋಜ್‌ರೊಂದಿಗೆ ಕಳೆದರು. ಅವರ ಬಹುತೇಕ ಪುಸ್ತಕಗಳ ಮುಖ ಚಿತ್ರಗಳನ್ನು ಇಮ್ರೋಜ್ ರಚಿಸಿದ್ದಾರೆ.

ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದ ಪಂಜಾಬಿ ಲೇಖಕರಲ್ಲಿ ಅಮೃತಾ ಪ್ರೀತಮ್ ಎರಡನೆಯವರು. ೧೯೫೬ ರಲ್ಲಿ ಅವರು ಆ ಪ್ರಶಸ್ತಿ ಪಡೆದಾಗ ಭಾರತೀಯ ಲೇಖಕರಲ್ಲಿಯೇ ಆ ಗೌರವಕ್ಕೆ ಪಾತ್ರರಾದ ಮೊದಲ ಮಹಿಳೆಯಾಗಿದ್ದರು ಮತ್ತು ಅತ್ಯಂತ ಚಿಕ್ಕ ವಯಸ್ಸಿನವರಾಗಿದ್ದರು.

ಪಂಜಾಬಿನ 'ರತನ್ ಅವಾರ್ಡ್' ಪಡೆಯುವಲ್ಲಿ ಇವರು ಮೊದಲಿಗರಾಗಿದ್ದಾರೆ. ಭಾರತ ಸಾಹಿತ್ಯ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಯಾದ 'ಭಾರತೀಯ ಜ್ಞಾನಪೀಠ'ದ ಗೌರವಕ್ಕೂ ಪಾತ್ರರಾಗಿದ್ದಾರೆ. ೧೯೮೨ರಲ್ಲಿ 'ಕಾಗಜ್ ಕೆ ಕ್ಯಾನ್ವಾಸ್' ಕೃತಿಗೆ ಈ ಪ್ರಶಸ್ತಿಯನ್ನು ಕೊಡಲಾಗಿದೆ. ಜೊತೆಗೆ 'ಪದ್ಮಶ್ರೀ', 'ಪದ್ಮವಿಭೂಷಣ' ಪ್ರಶಸ್ತಿಯನ್ನು, ಭಾರತದ ಅತಿದೊಡ್ಡ ಸಾಹಿತ್ಯ ಪ್ರಶಸ್ತಿ ಎನಿಸಿದ 'ಸಾಹಿತ್ಯ ಅಕಾಡೆಮಿ ಫೆಲೋಶಿಪ್'ನ್ನು ಪಡೆದಿದ್ದಾರೆ. ದೆಹಲಿ ಯೂನಿವರ್ಸಿಟಿ, ಜಬಲಪುರ ಯೂನಿವರ್ಸಿಟಿ, ವಿಶ್ವಭಾರತಿಗಳನ್ನು ಒಳಗೊಂಡಂತೆ ಹಲವು ವಿಶ್ವವಿದ್ಯಾಲಯಗಳಿಂದ ಡಿ.ಲಿಟ್ ಪದವಿಗಳ ಗೌರವಕ್ಕೂ ಪಾತ್ರರಾಗಿದ್ದಾರೆ. ಅಷ್ಟೆ ಅಲ್ಲದೆ ಅವರು 'ಇಂಟರ್ ನ್ಯಾಷನಲ್ ವಾಪ್ತ್ ಸರೊವ್ ಅವಾರ್ಡ್'ನ್ನು, ರಿಪಬ್ಲಿಕ್ ಆಫ್ ಬಲ್ಗೇರಿಯಾದಿಂದ ಮತ್ತು 'ಡಿಗ್ರೀ ಆಫ್ ಆಫೀಸರ್ ಡೆನ್ಸ್ ಆರ್ಡರ್ ದೆಸ್ ಆರ್ಟ್ಸ್ ವಿತ್ ದೆಸ್

ಲೆಟ್ಟರ್ಸ್'ನ್ನು ಫ್ರೆಂಚ್ ಸರ್ಕಾರದಿಂದ ಪಡೆದಿದ್ದಾರೆ. ಅವರ ಕಡೆಯ ದಿನಗಳಲ್ಲಿ ಪಾಕಿಸ್ತಾನದ ಪಂಜಾಬಿ ಅಕಾಡೆಮಿಯು ಅವರನ್ನು ಗುರುತಿಸಿ, ಪ್ರಶಸ್ತಿಯ ಗೌರವ ಸಲ್ಲಿಸಿತು. ಅದಕ್ಕೆ ಅವರು ಪ್ರತಿಕ್ರಿಯಿಸಿದ್ದು ಹೀಗೆ, 'ಬಡೆ ದಿನೊ ಬಾದ್ ಮೇರೆ ಯ್ಯಕೆ ಕೊ ಮೇರಿ ಯಾದ್ ಆಯೀ.' ಇದಲ್ಲದೇ ಪಾಕಿಸ್ತಾನದ ಪಂಜಾಬಿ ಕವಿಗಳು ಅಮೃತಾ ಅವರಿಗೆ ಚದ್ದರ್‌ವೊಂದನ್ನು ಗೌರವ ಸೂಚಕವಾಗಿ ನೀಡಿದರು.

ಲೇಖಕಿಯ ಜೀವನ ಅನುಭವದೊಂದಿಗೆ ಅವರ ಕೃತಿಗಳು ಸಾಕಾರಗೊಂಡಿವೆ. ಅವರ ಅನುಭವದಲ್ಲಿಯೇ ಈ ಮಾತುಗಳನ್ನು ನೋಡಿದಾಗ ಇದು ಸ್ಪಷ್ಟವಾಗುತ್ತದೆ. ತಮ್ಮ ಬರವಣಿಗೆಯ ಕುರಿತು ಹೇಳುತ್ತಾ, 'ನನಗೆ ಜೀವನ, ಒಂದು ಸುದೀರ್ಘ ಯಾತ್ರೆಯ ಹೆಸರು, ಜಡದಿಂದ ಹಿಡಿದು ಚೇತನದವರೆಗಿನ ಯಾತ್ರೆಯ ಹೆಸರು, ಅಕ್ಷರದಿಂದ ಆರಂಭಿಸಿ, ಅರ್ಥದವರೆಗಿನ ಯಾತ್ರೆಯ ಹೆಸರು, ಯಾವುದು ವಾಸ್ತವವಾಗಿದೆಯೋ ಅಲ್ಲಿಂದ ಹಿಡಿದು, ಯಾವುದು ವಾಸ್ತವವಾಗಬೇಕೋ ಅದರ ಕಲ್ಪನೆ ಮತ್ತು ಅದರಲ್ಲಿಯ ಏಕತೆ ಪಡೆವ ಯಾತ್ರೆಯ ಹೆಸರು ಅಂತೆಯೇ ಹೇಳ ಬಯಸುತ್ತೇನೆ. ನನ್ನ ಕತೆಗಳಲ್ಲಿಯ ಆ ಎಲ್ಲ ಪಾತ್ರಗಳನ್ನು ಬದುಕಿನಿಂದಲೇ ಎತ್ತಿಕೊಂಡಿದ್ದೇನೆ' ಎಂದು ರಸೀದಿ ಟಿಕೆಟ್‌ನಲ್ಲಿ ಹೇಳಿದ್ದಾರೆ. ಅಮೃತಾರ ಬದುಕು ಅವರ ಕೃತಿಗಳಂತೆ ಹಲವು ವಿಸ್ಮಯಗಳನ್ನು ಒಳಗೊಂಡಿದೆ. ತಮ್ಮ ಆಯುಷ್ಯದಲ್ಲಿ ನಿರಂತರ ಪ್ರೀತಿಗಾಗಿ ಹುಡುಕಾಡಿದ ವ್ಯಕ್ತಿತ್ವವಾಗಿ ಅವರು ನಮಗೆ ಕಾಣಿಸುತ್ತಾರೆ. ಅವರು ಹೇಳುವ ಹಾಗೆ ಒಮ್ಮೆ ಸಿಕ್ಕಿತ್ತು ಒಂದು ಹನಿ ಪ್ರೀತಿ ಇದರಲ್ಲಿ.

ಅದಕ್ಕಾಗಿ ನಾನು ಇಡೀ ಆಯುಷ್ಯದ ಕಹಿಯನ್ನು ಕಂಡಿರುವೆ. ಮೂರು ವ್ಯಕ್ತಿಗಳು ಅವರ ಜೀವನದಲ್ಲಿ ಬಂದು ಹೋಗಿದ್ದಾರೆ. ಪ್ರೀತಂ ಸಿಂಗ್‌ರಿಂದ ವಿಚ್ಛೇದನ ಪಡೆದ ಮೇಲೆ ತಮ್ಮ ಳಳನೇ ವಯಸ್ಸಿನಲ್ಲಿ ಕಲಾವಿದ ಇಮ್ರೋಜ್ ಜೊತೆ ಅವರು ಸಹಜೀವನ ನಡೆಸುತ್ತಾರೆ. ಅವರು ರಸೀದಿ ಟಿಕೆಟ್‌ನಲ್ಲಿ ಹೀಗೆ ಹೇಳಿದ್ದಾರೆ, "ಇಮ್ರೋಜ್ ಜೊತೆ ಕಳೆದ ಬದುಕು, ಭಾವಸಮಾಧಿಯ ಹಂತ ತಲುಪಿದೆ. ಈ ಅವಸ್ಥೆಯನ್ನು ಈಗ ನೆನಪಾಗುತ್ತಿರುವ ಒಂದು ಪ್ರಸಂಗದ ಮೂಲಕ ಗ್ರಹಿಸಬಹುದು. ಒಂದು ದಿನ ಮನೆಗೆ ಬಂದಿದ್ದ ಒಬ್ಬ ಅತಿಥಿ ನನ್ನ ಹಾಗೂ ಇಮ್ರೋಜ್‌ರ ಕೈಗಳನ್ನು ನೋಡಿದ. 'ನಿಮ್ಮ ಕೈಯಲ್ಲಿ ಧನರೇಖೆ ತುಂಬ ಗಾಢವಾಗಿದೆ, ದೀರ್ಘವಾಗಿದೆ. ನಿಮಗೆ ಜೀವನದಲ್ಲಿ ಎಂದೂ ಹಣದ ಕೊರತೆಯಾಗಲಾರದು. ಆದರೆ ನಿಮ್ಮ ಕೈಯಲ್ಲಿ ಹಣ ಎಂದೂ ಕೂಡಿ ಬೀಳಲಾರದು. ಕೈಯಲ್ಲಿ ಧನರೇಖೆ ಅಲ್ಲಲ್ಲಿ ಬಿರುಕು ಬಿಟ್ಟಿದೆ' ಎಂದು ಹೇಳಿದ. ಇಮ್ರೋಜ್ ನನ್ನ ಕೈಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು, 'ಸರಿ ಇನ್ನು ನಾವಿಬ್ಬರೂ ಒಂದೇ ರೇಖೆಯನ್ನು ಬಳಸಿಕೊಂಡು ಬಾಳುತ್ತೇವೆ' ಎಂದರು."

ಸಾಹಿರ್ ಲುದಿಯಾನ್ವಿ ಕುರಿತು ಬರೆದ ಸುನಹಡೆಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಹೀಗೆ ಹೇಳುತ್ತಾರೆ. 'ದೇವರೇ! ಈ ಸುನಹಡೆಯನ್ನು ಯಾವುದೇ ಬಹುಮಾನಕ್ಕಾಗಿ ಬರೆದಿರಲಿಲ್ಲ. ಯಾರಿಗಾಗಿ ಬರೆದೆನೋ ಅವನೇ ಅದನ್ನು ಓದಲಿಲ್ಲ. ಇನ್ನು ಇಡೀ ಜಗತ್ತೇ ಓದಿದರೂ ನನಗೇನಾಗಬೇಕಿದೆ?' ಅವರು ಸಾಹಿರ್‌ನೊಂದಿಗೆ ಕಲ್ಪನಾ ಜೀವನವನ್ನು ನಡೆಸಿದ್ದರು. ಅಮೃತಾ ಪ್ರೀತಿಯ ಕಲ್ಪನೆ ಹೀಗೂ ಸಾಧ್ಯ ಎಂದು ತೋರಿಸಿಕೊಟ್ಟವರು. 'ಜಗತ್ತಿಗೆ ಗೊತ್ತಾಗದಂತೆ ನನ್ನ ಕಲ್ಪನೆ, ನಾನು ಸಾಹಿರ್‌ನ ರೂಪವನ್ನು ನಿರಂತರ ಧ್ಯಾನಿಸಿದಂತೆ ನನ್ನ ಮಗುವಿನ ರೂಪ ಅವನದನ್ನು ಹೋಲುತ್ತದೆ ಎಂದು ನನ್ನ ಕಿವಿಯಲ್ಲಿ ಹೇಳಿತ್ತು. ಭಾವೋನ್ಮಾದದ ಈ ಕಾಲದಲ್ಲಿ ಮಗುವಿನ ಜನ್ಮ ಆದಾಗ, ಮೊದಲ ಸಲ ಅದರ ಮುಖ ನೋಡಿದೆ. ದೇವರಿದ್ದಾನೆ ಎನ್ನುವ ನಂಬಿಕೆ ದೃಢಪಟ್ಟಿತು. ಮಗುವಿನ ರೂಪ ಬೆಳೆಯುತ್ತಿದ್ದಂತೆ ನನ್ನ ಕಲ್ಪನೆಯೂ ಅರಳಿ ಅದರ ರೂಪ ನಿಜಕ್ಕೂ ಸಾಹಿರ್‌ನ ರೂಪವನ್ನು ಹೋಲುವಂತಾಯಿತು.' ಅಮೃತಾ ಸಾಹಿರ್‌ನನ್ನು ಒಂದು ಉರ್ದು ಕವಿಗೋಷ್ಠಿಯಲ್ಲಿ ನೋಡಿದರು. ಕವಿಯ ಹಸ್ತಾಕ್ಷರ ಪಡೆಯುವಾಗ ಅಮೃತಾ ತಮ್ಮ ಅಂಗೈ ಮೇಲೆ ಹಸ್ತಾಕ್ಷರ ಪಡೆಯಲು ಕೈಚಾಚಿದಾಗ ಸಾಹಿರ್ ತಮ್ಮ ಹೆಬ್ಬೆರಳಿಗೆ ಮಸಿ ಹಚ್ಚಿಕೊಂಡು ಅದನ್ನು ಅಮೃತಾ ಕೈ ಮೇಲೆ ಹಸ್ತಾಕ್ಷರದಂತೆ ಮುದ್ರಿಸಿದರು. 'ಅವನು ಹಸ್ತಾಕ್ಷರ ನೀಡಿದ ನನ್ನ ಅಂಗೈ ಮೇಲೆ ಏನು ಬರೆಯಲಾಗಿತ್ತೋ ಅವೆಲ್ಲ ಗಾಳಿಯ ಪಾಲಾಯಿತು. ಅವನು ಕೂಡ ಅದನ್ನೋದಲಿಲ್ಲ. ಅದಕ್ಕಂತಲೇ ನಾನು ಸಾಹಿತ್ ಒಂದು ಕಲ್ಪನೆಯಾಗಿದ್ದ ಎಂದು ಹೇಳಬಲ್ಲೆ.'

ಅಮೃತಾರ ಕೃತಿಗಳಲ್ಲಿ ಸ್ತ್ರೀ ಪುರುಷರ ಬದುಕಿನ ದೈನಂದಿನ ಜಂಜಾಟಗಳು, ಆಸೆ ಆಕಾಂಕ್ಷೆಗಳು, ಹತಾಶೆ, ಅವಮಾನಗಳು ಹಾಸುಹೊಕ್ಕಿವೆ. ಮನುಷ್ಯ ಸಂಬಂಧಗಳ ಹುಡುಕಾಟ, ಪ್ರೀತಿ ಯ ನೆಲೆ ಕಾಣ ಸಿಗುತ್ತದೆ. ಅವರ ಗದ್ಯ ಸಂಗ್ರಹವು ಕಾವ್ಯಶೈಲಿಯಂತೆ ಗೋಚರಿಸುತ್ತದೆ. ಪಂಚಾಕ್ಷರಿ ಹಿರೇಮಠ್ 'ಹೆಣ್ಣೊಂದು ಮಧುಪಾತ್ರೆ' ಎಂಬ ಹೆಸರಿನಲ್ಲಿ ಕೆಲವು ಕಥೆಗಳನ್ನು ಅನುವಾದಿಸಿದ್ದಾರೆ. ಇದು ಹೆಣ್ಣಿನ ಬದುಕಿನತ್ತಲೇ ಕೇಂದ್ರಿಕರಿಸಿರುವಂತಹದ್ದು. 'ಒಂದು ಕರವಸ್ತ್ರ, ಒಂದು ಉಂಗುರ, ಒಂದು ಜಾಳಿಗೆ ಸೌಟು' ಎಂಬ ಕಥೆಯಲ್ಲಿ ತವರೂರಿನಲ್ಲಿ ಪ್ರೀತಿಸಿದ ಹುಡುಗನ ನೆನಪಿಗಾಗಿ ಒಂದು ಉಂಗುರ ವಿಟ್ಟುಕೊಂಡವಳಿಗೆ ಮತ್ತೊಂದು ಮನೆಯಲ್ಲಿ ಅದನ್ನಿಡಲು ಎಲ್ಲಿಯೂ ಜಾಗವಿರುವುದಿಲ್ಲ. ಅಡಿಗೆ ಮನೆಯ ಮಣ್ಣಿನ ಒಲೆಯ ಕೆಳಭಾಗದಲ್ಲಿ ಅವುಗಳನ್ನು ಹೂತಿಡುತ್ತಾಳೆ. ತಿಂಗಳಿಗೊಮ್ಮೆ ಹೊಸ ಮಣ್ಣು ಕಲೆಸಿ ಹೊಸ ಒಲೆ ಹೂಡುವ ನೆಪದಲ್ಲಿ ಅವುಗಳನ್ನು ನೋಡುತ್ತಾಳೆ. ದಿನನಿತ್ಯ ಅವಳು ಅಡಿಗೆ ಮಾಡುವ ಬೆಂಕಿ ಉರಿಸುವ ಆ ಜಾಗದಲ್ಲಿ ಅವಳ ಕನಸುಗಳೆಲ್ಲ ಹೂತು ಹೋಗಿವೆ. ಆ ಕನಸುಗಳ ಮೇಲೆ ಒಲೆ ಉರಿಯುತ್ತಿದೆ ಎಂಬ ಹೆಣ್ಣಿನ ನೋವಿನ ವಿಷಾದವನ್ನು ಅಮೃತಾ ಸೆರೆ ಹಿಡಿಯುತ್ತಾರೆ.

ಅಮೃತಾ ಪ್ರೀತಂ ಅವರು ಪಾಕಿಸ್ತಾನಿ ಕವಯಿತ್ರಿ ಸಾರಾಶುಗುಪ್ತಾಳ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ನೋವಿನ ಜೀವನವನ್ನು ನಡೆಸಿದ ಸಾರಾಳ ಕಥೆಯನ್ನು 'ಏಕ್ ಥೀ ಸಾರಾ' ಎನ್ನುವ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಸಾರಾಳ ಜೀವನ ಆತ್ಮಹತ್ಯೆಯೊಂದಿಗೆ ಕೊನೆಗೊಳ್ಳುತ್ತದೆ. 'ಏಕ್ ಥೀ ಸಾರಾ' ಕಥೆಯಲ್ಲಿ ಕವಿಯೊಬ್ಬನನ್ನು ಪ್ರೀತಿಸಿ ಮದುವೆಯಾದ ಸಾರಾ ತಾನು ಮಾಡುತ್ತಿದ್ದ ನೌಕರಿಯನ್ನು ಅವನಿಗಾಗಿ ಬಿಡುತ್ತಾಳೆ. ಅವಳು ಗರ್ಭಿಣಿಯಾದಾಗ ಹೆರಿಗೆಗಾಗಿ ಆಸ್ಪತ್ರೆಗೆ ಹೋದಾಗ ಗಂಡ ಯಾವುದೇ ಸಹಾಯ ಮಾಡುವುದಿಲ್ಲ. ಅವಳ ಮಗು ಆಸ್ಪತ್ರೆಯಲ್ಲಿ ತೀರಿಕೊಂಡಾಗ ಆಸ್ಪತ್ರೆ ಹಣ ಕಟ್ಟಲು ಅವಳ ಬಳಿ ಹಣ ಸಾಲದೆ ರಕ್ತಸಿಕ್ತ ಬಟ್ಟೆಯಲ್ಲೇ ಮನೆಗೆ ಬಂದಾಗ, ಗಂಡ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಗೆಳೆಯರ ಚರ್ಚೆಯಲ್ಲಿ ನಿರತನಾಗಿರುತ್ತಾನೆ. ಗೆಳತಿಯೊಬ್ಬಳಿಂದ ಸಾಲ ಪಡೆದು ಆಸ್ಪತ್ರೆಗೆ ಹೋಗಿ ಮಗುವಿನ ಮೃತದೇಹವನ್ನು ಪಡೆದುಕೊಳ್ಳುತ್ತಾಳೆ.

'ಸನಹೆಡೆ' ಅಮೃತಾ ಪ್ರೀತಂರವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದುಕೊಟ್ಟ ಕವನ ಸಂಕಲನ. ಇದನ್ನು ಹಸನ್ ನಯಿಂ ಸುರಕೋಡ್ 'ಹೂವಿನ ಹಂಬಲ' ಎಂದು ಕನ್ನಡಕ್ಕೆ ತಂದಿದ್ದಾರೆ. ಹಾಮಾನಾ ಅವರು 'ಸುನೇರಿ' ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ಸಾಹಿರ್ ನೆನಪಲ್ಲಿ ಈ ಕವಿತೆಗಳನ್ನು ಬರೆದಿದ್ದಾರೆ. ಸಿಗರೇಟಿನ ರೂಪಕವಿರುವ ಕಿರು ಕವಿತೆಯು ಅವರ ಜೀವನ ವಿಷಾದವನ್ನು ಹೇಳುವ ಕವಿತೆಯಂತಿದೆ. ಹಾಗೆಯೇ 'ನೀನು ಬರಲಿಲ್ಲ' ಕವಿತೆಯಲ್ಲಿ ಜೀವನದಲ್ಲಿ ಕಾಯುವ ನಿರರ್ಥಕತೆಯ ಭಾವವನ್ನು ಹೇಳುತ್ತಾರೆ. ಮಧ್ಯಾಹ್ನಗಳು ನೀಳವಾಗುತ್ತಿವೆ, ದ್ರಾಕ್ಷಿಗಳನ್ನು ಕೆಂಪು ಸ್ಪರ್ಶಿಸುತ್ತಿದೆ, ನೀನು ಬರಲಿಲ್ಲ.

ಅಮೃತಾ ಪ್ರೀತಂ ಅವರ ಕೃತಿಗಳಲ್ಲಿ ಸುದೀರ್ಘ ನೋವಿನ ಜತೆ ಬದುಕಿನ ಬಗೆಗೆ ಅಪಾರ ಪ್ರೀತಿಯೂ ಇರುವುದನ್ನು ಕಾಣುತ್ತೇವೆ. ಬದುಕಿನ ಸುದೀರ್ಘ ಬಂಡಿಯಲ್ಲಿ ಹಲವಾರು ಅಡ್ಡಿ – ಆತಂಕಗಳು ಇದ್ದರೂ, ಅದನ್ನು ಮೆಟ್ಟಿನಿಲ್ಲುವ ಸಾಧಕಿಯಾಗಿದ್ದಾರೆ. 'ಬದುಕಿನ ಸುದೀರ್ಘ ದಾರಿಯಲ್ಲಿ ಸಮಾಜದ ಬಂಧನಗಳ ಮುಳ್ಳು ಚೆಲ್ಲಿ, ನಿನ್ನ ಕಾಲುಗಳಿಂದ ಬದುಕಿನುದ್ದಕ್ಕೂ ರಕ್ತ ಹರಿಯುತ್ತಲಿರುವುದು ದುರಂತವಲ್ಲ. ರಕ್ತ ಸೋರುವ ಕಾಲುಗಳ ಮೇಲೆ ಸಾಗಿ ಒಂದು ಸ್ಥಳದಲ್ಲಿ ನಿಲ್ಲುವುದು. ಅಲ್ಲಿಂದ ಯಾವ ದಾರಿಯೂ ಕೈ ಮಾಡಿ ಕರೆಯದಿರುವುದು ದುರಂತ. ನೀನು ನಿನ್ನ ಪ್ರೇಮದ ನಡುಗುವ ಶರೀರದ ಸಲುವಾಗಿ ಬದುಕಿನುದ್ದಕ್ಕೂ ಕವನಗಳ ಉಡುಪನ್ನು ಹೊಲೆಯುತ್ತಿರುವುದು ದುರಂತವಲ್ಲ. ಈ ಉಡುಪು ಗಳನ್ನು ಹೊಲಿಯಲು ನಿನ್ನ ಬಳಿ ವಿಚಾರಗಳ ದಾರ ಮುಗಿದು ನಿನ್ನ ಲೇಖನಿ ಎಂಬ ಸೂಜಿಯ ತೂತು ಮುರಿಯುವುದು ದುರಂತ' (ರಸೀದಿ ಟಿಕೆಟ್).

ಅಮೃತಾ ಪ್ರೀತಂ ಅವರ ಸಾಹಿತ್ಯದಲ್ಲಿ ಜೀವನ ಪ್ರೀತಿಗಾಗಿ ತುಡಿಯುವ ಅಂಶಗಳನ್ನು ನೋಡಬಹುದಾಗಿದೆ. ಲೇಖಕಿಗೆ ಹೆಣ್ಣಿನ ಅಂತರಂಗವನ್ನು ತೆರೆದಿಡುವ ಸಂಗತಿಗಳು ಗಾಢವಾಗಿ ಕಾಡಿರುವ ಸಂಗತಿಗಳಾಗಿರಬಹುದು. ಹಾಗಾಗಿ ಅವರ ಸಾಹಿತ್ಯವು ಹೆಣ್ಣಿನ ಅಸ್ಮಿತೆಯನ್ನು ಹುಡುಕಲು ಸಫಲವಾಗುತ್ತದೆ.

ಅಧ್ಯಾಯ – ೩
ಸ್ತ್ರೀವಾದದ ವ್ಯಾಖ್ಯಾನಗಳು ಮತ್ತು ಪ್ರಸ್ಥಾನಗಳು

ಸ್ತ್ರೀವಾದ ಒಂದು ಗಂಭೀರವಾದ ಚಿಂತನೆಯಾಗಿದೆ. ಅದು ಪ್ರಾಮಾಣಿಕವಾದ ನಂಬಿಕೆ ಹಾಗೂ ಬದುಕುವ ವಿಧಾನ. ಸ್ತ್ರೀವಾದ ಸಮಾಜದಲ್ಲಿ ಲಿಂಗಾಧಾರಿತ ಅಸಮಾನತೆಗಳಿವೆ ಎಂಬ ಅರಿವಿನೊಂದಿಗೆ ತನ್ನ ಚಿಂತನೆಯನ್ನು ಪ್ರಾರಂಭಿಸುತ್ತದೆ. ಸಮಾಜದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಹೆಣ್ಣು ಮಕ್ಕಳು ಸಾಕಷ್ಟು ರೀತಿಯಲ್ಲಿ ಶೋಷಣೆಗಳಿಗೆ, ದೌರ್ಜನ್ಯಗಳಿಗೆ ಒಳಗಾಗುತ್ತಿದ್ದು, ಇದನ್ನು ಗುರುತಿಸಿ, ದಾಖಲಿಸುತ್ತ, ಇಂತಹ ದುಷ್ಟ ಅನಾರೋಗ್ಯಕರ ಪ್ರವೃತ್ತಿಗಳ ನಿವಾರಣೆಗೆ ನಡೆಸುವ ಪ್ರಜ್ಞಾಪೂರ್ವಕ, ಪ್ರಾಮಾಣಿಕ ಪ್ರಯತ್ನವನ್ನು 'ಸ್ತ್ರೀವಾದ' ಎನ್ನಲಾಗಿದೆ. ಸ್ತ್ರೀಯರ ಸ್ಥಿತಿಗತಿಗಳ ವಿವರಣೆ, ವಿಶ್ಲೇಷಣೆ, ಚಿಂತನೆ, ಮರುಚಿಂತನೆಗಳಲ್ಲಿ ಸ್ತ್ರೀವಾದ ಆಸಕ್ತಿ ತೋರುತ್ತದೆ. ಸ್ತ್ರೀವಾದವು ಅತಿಯಾದ ಅಧಿಕಾರದ ಚಲಾವಣೆಯ ಪ್ರತಿಭಟನೆ, ಹೋರಾಟ, ವಿಮೋಚನೆಗಳ ಕಡೆಗೆ ತುಡಿಯುವಂತೆ ಮಾಡುತ್ತದೆ. ಸ್ತ್ರೀ ವಾದವು ಹೆಣ್ಣಿನ ಮೇಲೆ ಚಲಾಯಿಸಲ್ಪಡುವ ಎಲ್ಲ ರೀತಿಯ ಯಜಮಾನಿಕೆಯನ್ನು ವಿರೋಧಿಸುತ್ತದೆ.

ಸ್ತ್ರೀವಾದಿ ಎಲೈನ್ ಶೋವಾಲ್ಟರ್ ಹೇಳುವ ಹಾಗೆ ಸ್ತ್ರೀವಾದಕ್ಕೆ ಒಬ್ಬ ತಾಯಿ ಇಲ್ಲ. ಪಾಶ್ಚಾತ್ಯ ಸ್ತ್ರೀವಾದ ಒಬ್ಬ ವ್ಯಕ್ತಿಯ ಚಿಂತನೆಯಿಂದ ಹುಟ್ಟು ಪಡೆದದ್ದಲ್ಲ. ಪಶ್ಚಿಮದಲ್ಲಿ ಸ್ತ್ರೀವಾದಕ್ಕೆ ಸಂಬಂಧಿಸಿದ ಚರ್ಚೆ ೧೯೬೦ರ ದಶಕದಲ್ಲೆ ಪ್ರಾರಂಭವಾಗಿತ್ತು. ೧೯೭೨ರಲ್ಲಿ ಮೇರಿ ವೋಲ್ಸಟನ್ ಕ್ರಾಫ್ಟ್ ರಚಿಸಿದ 'ಎ ವಿಂಡಿಕೇಷನ್ ಆಫ್ ರೈಟ್ ಆಫ್ ವಿಮೆನ್' ಎಂಬ ಗ್ರಂಥ ಮುಖ್ಯವಾಗಿತ್ತು. ವರ್ಜಿನಿಯಾ ವುಲ್ಫಳು ೧೯೨೯ರಲ್ಲಿ ರಚಿಸಿದ 'ಎ ರೂಮ್ ಆಫ್ ಒನ್ಸ್ ಒನ್' ಗ್ರಂಥ, ೧೯೪೯ರಲ್ಲಿ ಸಿಮೋನ್ ದ ಬೋವಾ ರಚಿಸಿದ 'ದಿ ಸೆಕೆಂಡ್ ಸೆಕ್ಸ್', ೧೯೬೮ ರಲ್ಲಿ ಮೇರಿ ಎಲೈನ್ ಶೋವಾಲ್ಟರ್ ರಚಿಸಿದ 'ಥಿಂಕಿಂಗ್ ಅಬೌಟ್ ವಿಮೆನ್', ೧೯೬೯ರಲ್ಲಿ ಕೇಟ್ ಮಿಲ್ಲೆಟ್ ರಚಿಸಿದ 'ಸೆಕ್ಷುಯಲ್ ಪಾಲಿಟಿಕ್ಸ್' ಈ ಎಲ್ಲಾ ಕೃತಿಗಳು ಸ್ತ್ರೀ ಪರ ನಿಲ್ಲುವ ಕೃತಿಗಳಾಗಿ ಬಿಂಬಿತವಾಗಿದ್ದವು.

ಇನ್ನು ಸ್ತ್ರೀವಾದದ ವಿವಿಧ ವ್ಯಾಖ್ಯಾನಗಳನ್ನು ಗಮನಿಸುವುದಾದರೆ,

ಜೋನ್ ಕೆಲ್ಲಿ ಸ್ತ್ರೀವಾದ ಎನ್ನುವುದರ ಬಗ್ಗೆ, 'ಸ್ತ್ರೀವಾದ ಸ್ತ್ರೀಯರನ್ನು ಕೆಟ್ಟದಾಗಿ ನಡೆಸಿಕೊಳ್ಳುವ ಪುರುಷನ ದುರ್ನಡತೆಯ ವಿರುದ್ಧ ಪ್ರಜ್ಞಾಪೂರ್ವಕವಾಗಿ ವಿರೋಧಿಸುವ ಗುಣವಾಗಿದೆ. ಅವನ ಸಣ್ಣ ತನವನ್ನು ವಿರೋಧಿಸುತ್ತ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ವಿಚಾರವಾಗಿದೆ' ಎಂದಿದ್ದಾರೆ.

ಬಾರ್ಬರಾ ಸ್ಮಿತ್‌ರ ಪ್ರಕಾರ, 'ಸ್ತ್ರೀವಾದ ಒಂದು ರಾಜಕೀಯ ಸಿದ್ಧಾಂತವಾಗಿದ್ದು, ಎಲ್ಲಾ ಮಹಿಳೆ ಯರಿಗೆ ವಿಮೋಚನೆಯನ್ನು ತಂದುಕೊಡುವ ಪ್ರಯತ್ನವಾಗಿದೆ. ಈ ಮಹಿಳೆ ಯಾವುದೇ ವರ್ಣದವ ರಾಗಿರಬಹುದು, ಉದ್ಯೋಗಿಗಳಾಗಿರಬಹುದು, ಬಡವರಾಗಿರಬಹುದು, ಅಂಗವಿಕಲೆಯರು, ವೃದ್ಧೆಯರು,

ಆರ್ಥಿಕ ಸಬಲತೆಯನ್ನು ಪಡೆದುಕೊಂಡವರು ಯಾರೇ ಆಗಿರಬಹುದು. ಸಮಾಜದಲ್ಲಿ ಇಂತಹ ಸಮಸ್ಯೆ ಗಳು ಯಾವಾಗ ಹುಟ್ಟುಕೊಳ್ಳುತ್ತವೆಯೋ ಆಗೆಲ್ಲ ಆ ಕ್ಷಣದ ತುರ್ತಿಗೂ ಸ್ತ್ರೀವಾದ ಹುಟ್ಟಿಕೊಳ್ಳುತ್ತದೆ.'

ಸೂಸಿಲಿಂಗ್‌ರ ಪ್ರಕಾರ, 'ಸ್ತ್ರೀ ಮತ್ತು ಪುರುಷ ಇವರಿಬ್ಬರೂ ಸೇರಿ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕಾಗುತ್ತದೆ. ಇದಕ್ಕೆ ಸ್ತ್ರೀವಾದಿ ಚಿಂತನೆಗಳು ಅವಶ್ಯಕ.'

ಮೆಕೆನ್ ಮರಾರವರ ಪ್ರಕಾರ, 'ಸಮಾಜವನ್ನು ಕ್ರಾಂತಿಕಾರಕ ಮಾರ್ಗದ ಮೂಲಕ ನಿರ್ಮಿಸುವ ಒಂದು ಬದಲಾವಣೆ. ಸ್ತ್ರೀವಾದಿಗಳು ಮಹಿಳೆಯರ ದೌರ್ಜನ್ಯ, ಲೈಂಗಿಕ, ಜಾತೀಯ, ವರ್ಗದ ಶೋಷಣೆಗಳ ವಿರುದ್ಧ ಕ್ರಿಯಾತ್ಮಕವಾಗಿ ಹೋರಾಡುವುದಕ್ಕೆ ಬದ್ಧರಾಗಿರುತ್ತಾರೆ.'

ನಾನ್ಸಿಹಾರ್ಟ್‌ಸ್ಟಾಕ್‌ರ ಪ್ರಕಾರ, 'ಸ್ತ್ರೀವಾದ ಜೀವನವನ್ನು ಕುರಿತಾದ ವಿಶ್ಲೇಷಣೆ ಹಾಗೂ ಹೆಣ್ಣಿಗೆ ಸಂಬಂಧಪಟ್ಟಂತೆ ಅವಳ ಬದುಕಿನ ಗುಣಾತ್ಮಕ ಅವಲೋಕನವಾಗಿದೆ. ಮಹಿಳೆಯ ದೌರ್ಜನ್ಯಗಳನ್ನು ಕುರಿತಂತೆ ಇರುವ ರಾಜಕೀಯ ಕಳಕಳಿಗಿಂತ ಮುಖ್ಯವಾಗಿ ಪ್ರಶ್ನೆಗಳನ್ನು ಕೇಳುವ ಮತ್ತು ಉತ್ತರಗಳನ್ನು ಹುಡುಕಿಕೊಳ್ಳುವ ವಿಧಾನವಾಗಿದೆ.'

ಸ್ತ್ರೀವಾದದ ವಿವರಣೆ ಕೊಡುವಾಗ ಮಂಗಳಾ ಪ್ರಿಯದರ್ಶಿನಿ ಹೀಗೆ ಹೇಳುತ್ತಾರೆ. ಸ್ತ್ರೀಪರ ಕಳಕಳಿಯುಳ್ಳ ಬೇರೆ ಬೇರೆ ಸ್ತ್ರೀವಾದಿಗಳು ಸ್ತ್ರೀವಾದವನ್ನು ಬೇರೆ ಬೇರೆ ನೆಲೆಗಳಲ್ಲಿ ವ್ಯಾಖ್ಯಾನಿಸಲು, ವಿವರಿಸಲು ಪ್ರಯತ್ನಿಸಿದ್ದಾರೆ.

ಆದರೆ ಎಲ್ಲರೂ ಒಂದು ವಿಚಾರವನ್ನು ಒಪ್ಪಿಕೊಳ್ಳುತ್ತಾರೆ. ಮುಖ್ಯವಾಗಿ ಸ್ತ್ರೀವಾದ ವಿಶಿಷ್ಟವಾದ ನಂಬಿಕೆಗಳು, ಮೌಲ್ಯಗಳು ಮತ್ತು ಧೋರಣೆಗಳ ಮೊತ್ತವಾಗಿದ್ದು, ಮಾನವ ಜೀವಿಗಳಂತೆ ಮಹಿಳೆಯರ ಮೌಲ್ಯಮಾಪನ ಮಾಡಬೇಕೆಂದು ಒತ್ತಾಯಿಸುತ್ತದೆ. ಸ್ತ್ರೀವಾದ ಮಹಿಳೆಯರ ಋಣಾತ್ಮಕ ಸಾಂಸ್ಕೃತಿಕ ಪ್ರತಿಮೆಗಳನ್ನು ಅಳಿಸಿ ಹಾಕಲು ಪ್ರಯತ್ನಿಸುತ್ತಲೇ ಮತ್ತೊಂದು ನೆಲೆಯಲ್ಲಿ ಅವಳ ಶಕ್ತಿ, ಸಾಮರ್ಥ್ಯ, ಬುದ್ಧಿವಂತಿಕೆಯನ್ನು ಎತ್ತಿಹಿಡಿಯಲು ಪ್ರಯತ್ನಿಸುತ್ತದೆ. ಸ್ತಿೀವಾದ ಮಹಿಳೆಯರ ಸ್ವಾತಂತ್ರ್ಯ, ಅಸ್ತಿತ್ವ, ಸ್ವಾಯತ್ತತೆಯ ಪ್ರಾಮುಖ್ಯತೆಯನ್ನು ಒಪ್ಪಿಕೊಳ್ಳುತ್ತಾ, ಹೆಣ್ಣಿನ ಬದುಕಿನ ಬಗ್ಗೆ ಸ್ವತಂತ್ರವಾದ ಹತೋಟಿ ಯನ್ನು ಪ್ರತಿಪಾದಿಸುತ್ತದೆ.

ಎಲ್.ಜಿ. ಮೀರಾರವರು ಸ್ತ್ರೀವಾದವನ್ನು ಹೀಗೆ ಗುರುತಿಸುತ್ತಾರೆ. 'ಸ್ತ್ರೀವಾದವು ನಿರ್ದಿಷ್ಟ ಚಾರಿತ್ರಿಕ ಮತ್ತು ಸಾಂಸ್ಕೃತಿಕ ವಾಸ್ತವಗಳು ಹಾಗೂ ಪ್ರಜ್ಞೆಯ ಸ್ತರಗಳು, ಗ್ರಹಿಕೆಗಳು ಮತ್ತು ಕ್ರಿಯೆಗಳನ್ನು ಆಧರಿಸಿ ನಿಂತಿರುವ ಒಂದು ವಾದವಾಗಿದೆ.'

ಭಾರತೀಯ ಸ್ತ್ರೀವಾದ ಕೃತಿಯಲ್ಲಿ ಡಿ.ಆರ್. ನಾಗರಾಜ್ ಹಾಗೂ ಮನು ಚಕ್ರವರ್ತಿ ವಾದಿಸುವಂತೆ, ಭಾರತೀಯ ಸ್ತ್ರೀವಾದ ಪಾಶ್ಚಿಮಾತ್ಯ ಸ್ತ್ರೀವಾದದ ಸಾರಾಸಗಟು ಆಮದು ಆಗಬಾರದು ಮತ್ತು ಬಹು ಆಕೃತಿಯ ಭಾರತೀಯ ಸಮಾಜ ಸಂಸ್ಕೃತಿಗಳಿಗೆ ಹೊಂದುವಂತೆ ನಮ್ಮದೇ ಆದ ಸ್ತ್ರೀವಾದವನ್ನು ಬೆಳೆಸಬೇಕು.

ಇದುವರೆಗೂ ಸ್ತ್ರೀವಾದದ ನಿಲುವುಗಳು ಹಾಗೂ ಸ್ತ್ರೀವಾದದ ವಿವಿಧ ವ್ಯಾಖ್ಯಾನಗಳನ್ನು ನೋಡಲಾಯಿತು. ಈ ನಿಲುವುಗಳಲ್ಲಿ ಯಾವುದೇ ಸೈದ್ಧಾಂತಿಕ ಹಿನ್ನಲೆಯಿಲ್ಲ ಎನ್ನುವುದು ಕೆಲವರ ವಾದವಾಗಿದೆ. ಆದರೆ ಸ್ತ್ರೀವಾದ ಎನ್ನುವುದಕ್ಕೆ ಭದ್ರವಾದ ಸೈದ್ಧಾಂತಿಕ ಹಿನ್ನಲೆ ಇದೆ. ಈ ಸಿದ್ಧಾಂತದಲ್ಲಿ ವಿವಿಧ ಪಂಥಗಳನ್ನು ನೋಡಬಹುದಾಗಿದೆ. ಎಲ್ಲಾ ಸ್ತ್ರೀವಾದಗಳು ಸ್ತ್ರೀಪರ ಕಾಳಜಿಯನ್ನು ಹೊಂದಿದ್ದರೂ, ಅವರ ದೃಷ್ಟಿಗಳಲ್ಲಿ ಹಾಗೂ ಅವರು ಅಳವಡಿಸಿಕೊಳ್ಳುವ ವಿಧಾನಗಳಲ್ಲಿ ಭಿನ್ನತೆ ಕಂಡುಬರುತ್ತದೆ. ರೋಸ್ ಮೇರಿ ಟಾಂಗ್, ಫೆಮಿನಿಸ್ಟ್ ಥಾಟ್, ಎ ಕಾಂಪ್ರಹೆನ್ಸಿವ್ ಇಂಟ್ರೋಡಕ್ಷನ್, ಕಾಟ್‌ಲೆಜ್ಡ್ (೧೯೯೨) ಕೃತಿಯಲ್ಲಿ ಸ್ತ್ರೀವಾದದ ಏಳು ಪ್ರಕಾರಗಳನ್ನು ವಿಶ್ಲೇಷಿಸಿದ್ದಾರೆ.

ಉದಾರವಾದಿ ಸ್ತ್ರೀವಾದ, ಮಾರ್ಕ್ಸ್‌ವಾದಿ ಸ್ತ್ರೀವಾದ, ತೀವ್ರಗಾಮಿ ಸ್ತ್ರೀವಾದ, ಮನೋ ವಿಶ್ಲೇಷಣಾತ್ಮಕ ಸ್ತ್ರೀವಾದ, ಅಸ್ತಿತ್ವವಾದಿ ಸ್ತ್ರೀವಾದ, ಸಮಾಜವಾದಿ ಸ್ತ್ರೀವಾದ ಆಧುನಿಕೋತ್ತರ ಸ್ತ್ರೀವಾದ.

ಉದಾರವಾದಿ ಸ್ತ್ರೀವಾದ (Liberal Feminism)

ಮೇರಿ ವೊಲ್‌ಸ್ಟನ್ ಕ್ರಾಫ್ಟಳ 'ಎ ವಿಂಡಿಕೇಷನ್ ಆಫ್ ವಿಮೆನ್' (೧೭೯೨), ಜಾನ್‌ಸ್ಟುವರ್ಟ್ ಮಿಲ್‌ನ 'ದಿ ಸಬ್ಜೆಕ್ಷನ್ ಆಫ್ ವಿಮೆನ್' (೧೮೬೯) ಹಾಗೂ ಹ್ಯಾರಿಯಟ್ ಟೇಲರ್ ಮಿಲ್ಲಳ 'ದಿ ಎನ್ ಫ್ರಾನ್ ಚೈಸ್ ಮೆಂಟ್ ಆಫ್ ವಿಮೆನ್' (೧೮೫೧) – ಈ ರಚನೆಗಳಲ್ಲಿ ಉದಾರವಾದಿ ಸ್ತ್ರೀವಾದದ ಪ್ರಮುಖ ಛಾಯೆಗಳನ್ನು ಗುರುತಿಸಬಹುದಾಗಿದೆ. ವೊಲ್‌ಸ್ಟನ್ ಕ್ರಾಫ್ಟ್ ವೈಚಾರಿಕತೆ ಮತ್ತು ಸ್ವಯಂ ಅಧಿಕಾರ ಮುಂತಾದ ಗುಣಗಳಿಗೆ ಅತಿಯಾದ ಮಹತ್ವವನ್ನು ನೀಡಿದ್ದು, ಭಾವುಕತೆಯಿಂದ ಸ್ತ್ರೀ ದೂರವಿರಬೇಕೆಂಬ ಅಭಿಪ್ರಾಯ ಹೊಂದಿದವಳಾಗಿದ್ದಳು. ವೈಚಾರಿಕತೆಯ ಆಧಾರದ ಮೇಲೆ ತನ್ನ ಜೀವನವನ್ನು ರೂಪಿಸಿಕೊಂಡ ಸ್ತ್ರೀ ಗುಲಾಮಗಿರಿಯಿಂದ ವಿಮುಕ್ತಿಯನ್ನು ಪಡೆಯಬಹುದೆಂದು, ಜೊತೆಗೆ ಸ್ತ್ರೀ ಓರ್ವ ಹೆಂಡತಿ ಹಾಗೂ ತಾಯಿ ಯಾಗಿಯೂ ತನ್ನ ಪಾತ್ರವನ್ನು ಶ್ರದ್ಧೆಯಿಂದ ನಿರ್ವಹಿಸಬೇಕೆಂದು ಅಭಿಪ್ರಾಯಪಡುತ್ತಾಳೆ. ವೈಚಾರಿಕತೆ, ಸಮಾನ ಶಿಕ್ಷಣ, ಸಮಾನ ಉದ್ಯೋಗಾವಕಾಶ, ಸಮಾನ ಮತದಾನದ ಹಕ್ಕು, ವಿವಾಹ ಸಂಬಂಧದಲ್ಲಿ ಸಹಭಾಗಿತ್ವದ ಮಹತ್ವ ಮುಂತಾದ ಮೌಲ್ಯಗಳನ್ನು ಮಿಲ್, ಟೇಲರ್, ವೊಲ್‌ಸ್ಟನ್ ಕ್ರಾಫ್ಟ್ ಮುಂತಾದ ಉದಾರವಾದಿ ಸ್ತ್ರೀವಾದಿ ಚಿಂತಕರು ಪ್ರತಿಪಾದಿಸಿದರು.

ಇತ್ತೀಚಿನ ಉದಾರವಾದಿ ಸ್ತ್ರೀವಾದಿಗಳು ಲಿಂಗ ಸಮಾನತೆಯನ್ನು ಕುರಿತಂತೆ ಹೊಸ ಹೊಸ ದೃಷ್ಟಿಕೋನಗಳನ್ನು ಅಳವಡಿಸಿಕೊಂಡಿದ್ದಾರೆ. ಇದು ಸ್ತ್ರೀ ಪುರುಷರಲ್ಲಿ ಸಮಾನತೆಯ ಸ್ಥಾಪನೆಗಾಗಿ 'ದ್ವಿಲಿಂಗ' ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದಕ್ಕೆ ಸಂಬಂಧಿಸಿದ್ದು, ಓರ್ವ ವ್ಯಕ್ತಿಯನ್ನು ಆಕೆ ಸ್ತ್ರೀ ಎಂಬ ಕಾರಣಕ್ಕಾಗಿ ಕೀಳಾಗಿ ಕಾಣುವುದರಿಂದ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಪುರುಷ ಮೇಲು ಅಥವಾ ಸ್ತ್ರೀ ಕೀಳು ಎಂಬ ಭಾವನೆಗಳು ಬೇರೂರಲು ಅವಕಾಶವಿರುತ್ತದೆ. ಲಿಂಗಾಧಾರಿತ ಅಸಮಾನತೆಯನ್ನು ಕೊನೆಗಾಣಿಸಬೇಕಾದರೆ ಸಾಂಸ್ಕೃತಿಕ ಮೌಲ್ಯಗಳಾದ 'ಪುರುಷ ಸಂಕೇತ' ಅಥವಾ 'ಸ್ತ್ರೀ ಸಂಕೇತ'ವಾದ ವ್ಯಕ್ತಿತ್ವಗಳನ್ನು ಬೆಳೆಸಿಕೊಳ್ಳದೆ, 'ದ್ವಿಲಿಂಗಿ' (androgynous) ವ್ಯಕ್ತಿತ್ವವನ್ನು ಬೆಳೆಸಿ ಕೊಳ್ಳಬೇಕೆಂದು ಉದಾರವಾದಿ ಸ್ತ್ರೀವಾದಿಗಳು ಪ್ರತಿಪಾದಿಸುತ್ತಾರೆ.

ಮಾರ್ಕ್ಸ್‌ವಾದಿ ಸ್ತ್ರೀವಾದ (Marxist Feminism)

ವರ್ಗ ಅಸಮಾನತೆಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲರೂ ಅದರಲ್ಲೂ ವಿಶೇಷವಾಗಿ ಸ್ತ್ರೀಯರು ಸಮಾನತೆಯನ್ನು ಗಳಿಸುವುದು ಸಾಧ್ಯವೇ ಇಲ್ಲ ಎಂಬುದು ಮಾರ್ಕ್ಸ್ ವಾದಿ ಸ್ತ್ರೀವಾದದ ಅಭಿಪ್ರಾಯ. ಮಾರ್ಕ್ಸ್‌ವಾದಿ ಸ್ತ್ರೀವಾದಕ್ಕೆ ಒಂದು ಪ್ರಬುದ್ಧವಾದ ಸೈದ್ಧಾಂತಿಕ ಹಿನ್ನಲೆಯನ್ನು ಒದಗಿಸಿದ ಗ್ರಂಥ ಮಾರ್ಕ್ಸ್‌ನ ಮರಣಾನಂತರ ಫೆಪ್ರಬ್ ಎಂಗೆಲ್ಸ್ ರಚಿಸಿದ ದಿ ಆರಿಜನ್ ಆಫ್ ಫ್ಯಾಮಿಲಿ, ಪ್ರೈವೆಟ್ ಪ್ರಾಪರ್ಟಿ ಅಂಡ್ ದಿ ಸ್ಟೇಟ್ (೧೮೮೪). ಸ್ತ್ರೀ ಶೋಷಣೆ ಆರಂಭವಾಗಿದ್ದೇ ಖಾಸಗಿ ಸಂಪತ್ತಿನ ಗಳಿಕೆಯಿಂದ ಎಂದು ಎಂಗೆಲ್ಸ್ ಸಹ ಹೇಳುತ್ತಾರೆ. ಕುಟುಂಬ, ಮನೆಗೆಲಸ, ವಿವಾಹ ಈ ಪರಿಕಲ್ಪನೆಗಳು ಮಾರ್ಕ್ಸ್‌ವಾದಿ ಸ್ತ್ರೀವಾದದ ವಿಶ್ಲೇಷಣೆ ಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ. ವಿವಾಹ ಪದ್ಧತಿಗೂ ಸ್ತ್ರೀ ಶೋಷಣೆಗೂ ನಡುವೆ ನಿಕಟವಾದ ಸಂಬಂಧವಿದೆ ಎಂದು ವಾದಿಸಿರುವ ಎಂಗೆಲ್ಸ್, ಏಕ ಸಂಗಾತಿ ವಿವಾಹ ಪದ್ಧತಿಯು ಸ್ತ್ರೀಯನ್ನು ಪುರುಷನ ಖಾಸಗಿ ಆಸ್ತಿಯನ್ನಾಗಿ ಪರಿವರ್ತಿಸಿದ್ದೇ ಆಕೆಯ ಶೋಷಣೆಯ ಪ್ರಮುಖ ಮೂಲವಾಯಿತೆಂದೂ ಹೇಳುತ್ತಾನೆ. ಮಾತೃ ಪ್ರಧಾನವಾಗಿದ್ದ ಸಾಮಾಜಿಕ ವ್ಯವಸ್ಥೆ ಪಿತೃ ಪ್ರಧಾನವಾಗಿ ಮಾರ್ಪಾಡಾದಾಗಲೇ ಸ್ತ್ರೀಯ ಹಕ್ಕುಗಳ ಉಲ್ಲಂಘನೆಯಾಗತೊಡಗಿತ್ತು. ಪಿತೃತ್ವ ಕಲ್ಪನೆಗೆ ಅನಗತ್ಯವಾದ ಪ್ರಾಮುಖ್ಯತೆಯನ್ನು ನೀಡಲಾಗಿ ಸಮಾಜದಲ್ಲಿ ಸ್ತ್ರೀಯ ಪರಿಸ್ಥಿತಿಯೇ ಬದಲಾಯಿತು. ಏಕ ಪತ್ನಿತ್ವ ಸ್ತ್ರೀ ಪರಾಧೀನತೆಯನ್ನು, ಪುರುಷನ ಅಧಿಕಾರವನ್ನೂ ಎತ್ತಿ ಹಿಡಿಯುವ ಒಂದು ಸಾಧನವಾಯಿತು. ಪುರುಷನು ಸ್ತ್ರೀಯ ಲೈಂಗಿಕತೆ ಹಾಗೂ ದುಡಿಮೆಗಳೆರಡನ್ನೂ ತನ್ನ ಅಧೀನದಲ್ಲಿ ಇರಿಸಿಕೊಂಡು ಗೃಹಬಂಧಿಯನ್ನಾಗಿ ಮಾಡಿದ. ಇಂತಹ ಪರಿಸ್ಥಿತಿಯಿಂದ ಸ್ತ್ರೀ ವಿಮುಕ್ತಿಯನ್ನು ಪಡೆಯಬೇಕಾದರೆ ಆಕೆ ಮನೆಯಿಂದ ಹೊರಬಂದು ದುಡಿಮೆಯಲ್ಲಿ ತೊಡಗಬೇಕು ಎಂಬುದು ಮಾರ್ಕ್ಸ್‌ವಾದಿ ಚಿಂತಕರ ಅಭಿಪ್ರಾಯವಾಗಿತ್ತು.

ತೀವ್ರಗಾಮಿ ಸ್ತ್ರೀವಾದ (Radical Feminism)

ಸ್ತ್ರೀ ಶೋಷಣೆಯನ್ನು ಕುರಿತ ತೀವ್ರಗಾಮಿ ಸ್ತ್ರೀವಾದದ ಸಿದ್ಧಾಂತಗಳು ಸ್ತ್ರೀಪರ ಚಿಂತನೆಗಳಲ್ಲಿ ವ್ಯಾಪಕವಾಗಿ ವಿಸ್ತರಿಸುತ್ತಿವೆ. ತೀವ್ರಗಾಮಿ ಸ್ತ್ರೀವಾದಿಗಳನ್ನು ಅನೇಕರು ಉಗ್ರಗಾಮಿಗಳೆಂದು ಪರಿಗಣಿಸುವುದೂ ಉಂಟು. ತೀವ್ರಗಾಮಿ ಸ್ತ್ರೀವಾದ ಬರಹಗಳಲ್ಲಿ ಪ್ರಮುಖವಾದುದು ಶೂಲಮಿಥ್ ಫೈರ್‌ಸ್ಟೋನ್ನಳ 'ದಿ ಡೈಲೆಕ್ಟಿಕ್ ಆಫ್ ಸೆಕ್ಸ್' (೧೯೭೦) ಕೃತಿ. ಜೈವಿಕ ತಾಯ್ತನಕ್ಕೆ (**Biological motherhood**) ಸಮಾಜ ನೀಡಿರುವ ಅತಿಯಾದ ಪ್ರಾಶಸ್ತ್ಯವೇ ಸ್ತ್ರೀಯ ಅಭಿವೃದ್ಧಿಗೆ ಮಾರಕ. ಶಿಶುವಿಗೆ ಜನನ ನೀಡುವುದರಲ್ಲೇ ಹೆಣ್ಣಿನ ಜೀವನದ ಸಾರ್ಥಕತೆ ಅಡಗಿದೆ ಎಂಬ ಒಂದು ಮಿಥ್ಯೆಯ ಜಾಲದಲ್ಲಿ ಸ್ತ್ರೀಯನ್ನು ಬಂಧಿಸಿರುವ ಈ ಸಾಮಾಜಿಕ ವ್ಯವಸ್ಥೆ, ತಾಯ್ತನದ ಹೆಸರಿನಲ್ಲಿ ಸ್ತ್ರೀಯ ವ್ಯಕ್ತಿತ್ವವನ್ನು ದಮನ ಮಾಡುತ್ತಿದೆ. ಫೈರ್ ಸ್ಟೋನ್ 'ಬಸಿರು', 'ಶಿಶು ಜನನ' ಮುಂತಾದ ಪರಿಕಲ್ಪನೆಗಳನ್ನು ಧಿಕ್ಕರಿಸುತ್ತಾಳೆ.

ಮನೋವಿಶ್ಲೇಷಣಾತ್ಮಕ ಸ್ತ್ರೀವಾದ (Psychoanalytical Feminism)

ಫ್ರಾಯ್ಡ್‌ನ ಮನೋವಿಶ್ಲೇಷಣಾತ್ಮಕ ಸ್ತ್ರೀವಾದವು ಒಂದು ಸೈದ್ಧಾಂತಿಕ ನೆಲೆಯನ್ನು ಒದಗಿಸುವ ಕೃತಿಯಾಗಿದೆ. ಫ್ರಾಯ್ಡ್‌ನ ಮುಖ್ಯ ವಿಚಾರಗಳು ಹೀಗಿದ್ದವು. ಮಕ್ಕಳು ಜೀವನದ ಪ್ರತಿಯೊಂದು ಹಂತದಲ್ಲೂ ವಿಭಿನ್ನವಾದ ಮಾನಸಿಕ- ಲೈಂಗಿಕ ಅನುಭವಗಳನ್ನು ಪಡೆಯುತ್ತಾರೆ. ಲಿಂಗ ವ್ಯವಸ್ಥೆ ಎನ್ನುವುದು ಲೈಂಗಿಕ ಪಕ್ವತೆಯ ಒಂದು ಸೃಷ್ಟಿ. ವಿಭಿನ್ನವಾದ ಲೈಂಗಿಕ ಅನುಭವಗಳಿಗೆ ಒಳಪಡುವ ಬಾಲಕ, ಬಾಲಕಿಯರು ವಿಭಿನ್ನವಾದ ಲಿಂಗ ಪಾತ್ರಗಳನ್ನು ಸ್ವೀಕರಿಸುತ್ತಾರೆ ಎಂಬುದು ಅವನ ವಿಚಾರವಾಗಿದ್ದವು. ಈ ವಿಚಾರಗಳಿಗೆ ಬೆಟ್ಟಿ ಫ್ರೀಡನ್, ಶೂಲಮಿಥ್ ಫೈರ್ ಸ್ಟೋನ್, ಕೇಟ್ ಮಿಲೆಟ್ ಮುಂತಾದವರು ತೀವ್ರ ವಿರೋಧವನ್ನು ವ್ಯಕ್ತಪಡಿಸಿದರು. ಫ್ರಾಯ್ಡ್‌ನ ವಿಚಾರಗಳನ್ನು ಒಪ್ಪಬೇಕಾಗಿಲ್ಲ ಹಾಗೂ ಅದನ್ನು ಸಾರಾಸಗಟಾಗಿ ತಿರಸ್ಕರಿಸಬೇಕಾಗಿಲ್ಲ ಎಂದು ಕೆಲವು ಸ್ತ್ರೀವಾದಿಗಳು ಫ್ರಾಯ್ಡ್‌ನ ಮನೋ ವಿಶ್ಲೇಷಣಾತ್ಮಕ ಸಿದ್ಧಾಂತಗಳನ್ನು ನವೀನವಾಗಿ ರೂಪಿಸಿದರು. ಅವರಲ್ಲಿ ಮುಖ್ಯರು ಆಲ್ ಫ್ರೆಡ್ ಆಡ್ಲೆರ್, ಕ್ಯಾರೆನ್ ಹಾಗೂ ಜೂಲಿಯರ್ ಮಿಷೆಲ್. ಮನೋವಿಶ್ಲೇಷಣಾತ್ಮಕ ಸ್ತ್ರೀವಾದಿಗಳು ಸ್ತ್ರೀಯ ವ್ಯಕ್ತಿತ್ವದ ವಿಕಸನದಲ್ಲಿ ಜೈವಿಕತೆಯ ಪಾತ್ರವನ್ನು ಕುರಿತು ಫ್ರಾಯ್ಡ್‌ನ ವಿಚಾರಗಳನ್ನು ತಿರಸ್ಕರಿಸಿ, ಲಿಂಗವ್ಯವಸ್ಥೆಯನ್ನು ರೂಪಿಸುವ ಅಂಶಗಳಲ್ಲಿ ವ್ಯಕ್ತಿಯ ಅನುಭವಗಳು ಹಾಗೂ ಸಾಂಸ್ಕೃತಿಕ ಪ್ರಭಾವಗಳು ಅತ್ಯಂತ ಪ್ರಮುಖವಾದವು ಎಂಬ ನಿಲುವನ್ನು ತಳೆದಿದ್ದರು.

ಅಸ್ತಿತ್ವವಾದಿ ಸ್ತ್ರೀವಾದ (Existentialist Feminism)

ಚಿಂತಕಿ ಸಿಮೋನ್ ದ ಬೋವಾ ರಚಿಸಿದ 'ದಿ ಸೆಕೆಂಡ್ ಸೆಕ್ಸ್' (೧೯೭೪) ಕೃತಿ ಅಸ್ತಿತ್ವವಾದಿ ಸ್ತ್ರೀವಾದ ಚಿಂತನೆಗೆ ಅತ್ಯಂತ ಪ್ರಮುಖ ಕೊಡುಗೆ ಎಂದು ಪರಿಗಣಿಸಲ್ಪಟ್ಟಿರುವ ಫ್ರೆಂಚ್ ಭಾಷೆಯ ಮೇರು ಕೃತಿಯಾಗಿದೆ. ಸ್ತ್ರೀ ಶೋಷಣೆಯ ಮೂಲ ಅಡಗಿರುವುದು ಆಕೆ ಪುರುಷನಿಗಿಂತ ಭಿನ್ನ ವಾದವಳು ಎಂಬ ಕಾರಣಕ್ಕಾಗಿ. ಮಾನವ ಸಮಾಜದ ಉಗಮ ಕಾಲದಿಂದಲೂ ಪುರುಷ ತನ್ನನ್ನು 'ತಾನು' ಎಂದು ಗುರುತಿಸಿಕೊಂಡಂತೆ ಸ್ತ್ರೀಯನ್ನು 'ಪರ' ಎಂದು ಪರಿಗಣಿಸಿದ್ದಾನೆ. ತಾನು ಹಾಗೂ ಪರ ಎನ್ನುವ ಎರಡು ಭಾವನೆಗಳು ಪರಸ್ಪರ ಯಾವಾಗಲೂ ವಿರೋಧವಾಗಿ ಇರುತ್ತವೆ. ತನ್ನತನವನ್ನು ಉಳಿಸಿಕೊಳ್ಳಲಿಚ್ಚಿಸುವ ಪುರುಷ ಸ್ತ್ರೀಯನ್ನು ಪರಾಧೀನಳನ್ನಾಗಿ ಪರಿವರ್ತಿಸಿದ್ದಾನೆ. ಸ್ತ್ರೀ ಮತ್ತು ಪುರುಷನಿಗೆ ಇರುವ ಭಿನ್ನ ಅಸ್ತಿತ್ವಗಳೇ, ಸ್ತ್ರೀ ದೇಹ ಅಥವಾ ಪುರುಷ ದೇಹ ಹಾಗೂ ಈ ದೈಹಿಕ ಸ್ಥಿತಿಗಳಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ಕಂಡು ಬರುವ ಭಿನ್ನತೆಗಳೇ ಸ್ತ್ರೀ ಪುರುಷ ಅಸಮಾನತೆಗೆ ಮೂಲ ಕಾರಣ ಎಂಬುದು ಬೋವಾಳ ಪ್ರಮುಖ ವಿಚಾರವಾಗಿದೆ. ಸ್ತ್ರೀ ಶೋಷಣೆಯ ಮೂಲಗಳನ್ನು ಬೋವಾ ಸ್ತ್ರೀಯರನ್ನು ಕುರಿತಂತೆ ಇರುವ ಅನೇಕ ಮಿಥ್ಯೆಗಳಲ್ಲೂ ಹುಡುಕುತ್ತಾಳೆ. ಸ್ತ್ರೀಯನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಪುರುಷ ಆಕೆಯನ್ನು ಕುರಿತಂತೆ ಅನೇಕ ಮಿಥ್ಯೆಗಳನ್ನು ರಚಿಸಿದ್ದಾನೆ. 'ಆದರ್ಶ ಸ್ತ್ರೀ'ಯನ್ನು ಕುರಿತಂತೆ ಇರುವ ಅನೇಕ ಪರಿಕಲ್ಪನೆಗಳು ಪುರುಷ ಸಂಸ್ಕೃತಿಯ ಪ್ರತೀಕಗಳು. ಆದರೆ ಇವು ವಾಸ್ತವವಲ್ಲ ಎಂದು ಹೇಳುತ್ತಾಳೆ. ಸ್ತ್ರೀಯ ಬದುಕನ್ನು ಸುತ್ತುವರೆದಿರುವ ಕೃತಕ ಸಂಕೋಲೆ ಗಳು ಆಕೆ ಓರ್ವ ಸ್ವತಂತ್ರ ವ್ಯಕ್ತಿಯಾಗಿ ತನ್ನ ಬದುಕನ್ನು ರೂಪಿಸಿಕೊಳ್ಳಲು ಅವಕಾಶವನ್ನು ನೀಡುವು ದಿಲ್ಲ. ಸ್ತ್ರೀ ಸಹಜ ಜೈವಿಕ ಕ್ರಿಯೆಗಳಾದ ಗರ್ಭಧಾರಣೆ, ಸಂತಾನೋತ್ಪತ್ತಿ ಮುಂತಾದವುಗಳನ್ನೆ ಹಿರಿದು ಮಾಡಿ ಸ್ತ್ರೀಯ ಕ್ರಿಯಾತ್ಮಕ ಶಕ್ತಿಯನ್ನು ದಮನ ಮಾಡಲಾಗುತ್ತದೆ. 'ಪತ್ನಿತ್ವ ಮತ್ತು ತಾಯ್ತನ ಗಳೇ ಸ್ತ್ರೀಯ ಅಭಿವೃದ್ಧಿಗೆ ಅಡ್ಡಿಯನ್ನುಂಟು ಮಾಡುವ ಪ್ರಮುಖ ಅಂಶಗಳು ಎಂಬುದು ಬೋವಾಳ ಮಾತಾಗಿದೆ.

ಸ್ತ್ರೀಯ ಅಸ್ತಿತ್ವವೇ ಅವಳ ಶೋಷಣೆಗೆ ಮೂಲ ಕಾರಣ ಎನ್ನುವ ಬೋವಾ ಸ್ತ್ರೀ ಈ ಪರಿಸ್ಥಿತಿಯಿಂದ ಹೊರಬರಲೂ ಸಾಧ್ಯ ಎನ್ನುತ್ತಾಳೆ. ಸ್ತ್ರೀ ತನ್ನ ಮೇಲೆ ಪುರುಷರಿಂದ ಹೇರಲ್ಪಟ್ಟಿರುವ ಕೃತಕ ಬಂಧಗಳನ್ನು ಕಿತ್ತೊಗೆದು ತನ್ನದೇ ಆದ ಅಸ್ತಿತ್ವವನ್ನು ಕಂಡುಕೊಳ್ಳಬಹುದು. ಪುರುಷ ಪ್ರಾಧಾನ್ಯದ ಸಂಕೇತವಾದ ಮೌಲ್ಯ ವ್ಯವಸ್ಥೆಯನ್ನು ಭೇದಿಸಲು ಸ್ತ್ರೀಗೆ ಅನೇಕ ಮಾರ್ಗಗಳಿವೆ. ಇಂತಹ ಮಾರ್ಗ ಗಳನ್ನು ಕಂಡುಕೊಂಡ ಸ್ತ್ರೀಯರಿಗೆ ಜೀವನವಿಡೀ ತಮ್ಮ ಸ್ತ್ರೀ ದೇಹ ತರಬಹುದಾದಂಥ ಅನಾನುಕೂಲ ಗಳೊಡನೆ ಹೊಂದಾಣಿಕೆಯನ್ನು ಮಾಡಿಕೊಂಡಿರ ಬೇಕಾದ ಅವಶ್ಯಕತೆಯಿಲ್ಲ.

ಸಮಾಜವಾದಿ ಸ್ತ್ರೀವಾದ (Socialist Feminism)

ಸಮಾಜವಾದಿ ಸ್ತ್ರೀವಾದಿಗಳು ಸ್ತ್ರೀ ಶೋಷಣೆಗೆ ಏಕಮುಖೀ ದೃಷ್ಟಿಕೋನವನ್ನು ಒಪ್ಪಿಕೊಳ್ಳದೇ ಸ್ತ್ರೀ ಶೋಷಣೆಯ ಮೂಲವನ್ನು ಹುಡುಕಲು ಪ್ರಯತ್ನಿಸಿದರು. ಲಿಂಗ ಅಸಮಾನತೆಗೂ ಸಮಾಜದ ವಿವಿಧ ಸಂಸ್ಥೆಗಳಲ್ಲಿ ಅಡಕವಾಗಿರುವ ಅಸಮಾನತಾ ಧೋರಣೆಗಳಿಗೂ ನಿಕಟವಾದ ಸಂಬಂಧವಿದೆ ಎಂಬ ಅಭಿಪ್ರಾಯ ಅವರದ್ದಾಗಿತ್ತು. ಸಮಾಜವಾದಿ ಸ್ತ್ರೀವಾದಿ ಚಿಂತಕಿ ಜೂಲಿಯಟ್ ಮಿಷೆಲ್ ತನ್ನ ಕೃತಿ 'ಸೈರೋ ಅನಾಲಿಸಿಸ್ ಮತ್ತು ಫೆಮಿನಿಸಂ'ನಲ್ಲಿ ಸ್ತ್ರೀಯ ಮಾನಸಿಕ ಸ್ಥಿತಿಯ ಹೇಗೆ ಸಾಮಾಜಿಕ ಅಂಶಗಳಿಂದ ಪ್ರಭಾವಿತವಾಗುತ್ತದೆ ಎಂಬುದನ್ನು ವಿಶ್ಲೇಷಿಸಿದ್ದಾಳೆ. ಅವಳ ದೃಷ್ಟಿಯಲ್ಲಿ ಎಲ್ಲಾ ಸಮಾಜ ಗಳೂ ಪುರುಷ ಪ್ರಧಾನ ಸಮಾಜಗಳೇ ಆಗಿರುವುದರಿಂದ ಸ್ತ್ರೀ ಎಲ್ಲೇ ಇರಲಿ ಅವಳ ಪರಿಸ್ಥಿತಿ ಒಂದೇ ಆಗಿರುತ್ತದೆ. ಎಲ್ಲಿಯವರೆಗೆ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ಹಿಡಿತದಲ್ಲಿ ಆಕೆಯು ಜೀವಿಸು ತ್ತಾಳೋ ಅಲ್ಲಿಯವರೆಗೆ ಒಬ್ಬ ಸ್ತ್ರೀಯ ಪರಿಸ್ಥಿತಿಗಿಂತ ಮತ್ತೊಬ್ಬ ಸ್ತ್ರೀಯ ಪರಿಸ್ಥಿತಿ ಭಿನ್ನವಾಗಿರಲು ಸಾಧ್ಯವೇ ಇಲ್ಲ ಎಂದು ಮಿಷಲ್ ಹೇಳುತ್ತಾಳೆ.

ಮತ್ತೋರ್ವ ಸಮಾಜವಾದಿ ಸ್ತ್ರೀವಾದಿ ಚಿಂತಕಿ, ಆಲಿಸನ್ ಜ್ಯಾಗತ್ ತನ್ನ ಕೃತಿ ಫೆಮಿನಿಸ್ಟ್ ಪಾಲಿಟಿಕ್ಸ್ ಅಂಡ್ ಹ್ಯೂಮನ್ ನೇಚರ್(೧೯೮೩)ನಲ್ಲಿ ಅನ್ಯಾಕ್ರಾಂತತೆ ಪರಿಕಲ್ಪನೆಯನ್ನು ಮೂಲ ವಾಗಿಟ್ಟುಕೊಂಡು ಸ್ತ್ರೀ ಶೋಷಣೆಯನ್ನು ವಿವರಿಸಲು ಯತ್ನಿಸುತ್ತಾಳೆ. 'ಅನ್ಯಾಕ್ರಾಂತತೆ' ಎನ್ನುವ ಪರಿ ಕಲ್ಪನೆಯನ್ನು ಪರಕೀಯ ಪ್ರಜ್ಞೆ ಅಥವಾ ಪ್ರತ್ಯೇಕಿಸಲ್ಪಟ್ಟ ಅನುಭವ ಎನ್ನುವ ಅರ್ಥದಲ್ಲಿ ಬಳಸಿದ್ದಾಳೆ. ಮಾರ್ಕ್ಸ್‌ನ ಸಿದ್ಧಾಂತವಾದ ಅನ್ಯಾಕ್ರಾಂತತೆ ಎನ್ನುವ ಭಾವನೆಯನ್ನು ದುಡಿಮೆಗಾರರು ಅನುಭವಿಸುತ್ತಾರೆ ಎಂಬುದನ್ನು ಜ್ಯಾಗತ್, ಸ್ತ್ರೀ ಶೋಷಣೆಯನ್ನು ವಿಶ್ಲೇಷಿಸಲೂ ಅಳವಡಿಸಿಕೊಳ್ಳುವ ಸಾಧ್ಯತೆಯಿದೆ. ತಾವು ಉತ್ಪಾದಿಸುವ ವಸ್ತುಗಳಿಂದ ಹೇಗೆ ಶ್ರಮಿಕರು ಪ್ರತ್ಯೇಕಿಸಲ್ಪಡುತ್ತಾರೋ ಅದೇ ರೀತಿಯಲ್ಲಿ ಸ್ತ್ರೀಯರೂ ಕೂಡ ತಮ್ಮ ದೇಹದಿಂದ ಪ್ರತ್ಯೇಕಿಸಲ್ಪಟ್ಟ ಭಾವನೆಯನ್ನೇ ಅನುಭವಿಸುತ್ತಾರೆ. ಸ್ತ್ರೀಯ ದೇಹ ಆಕೆಗೆ ಸೇರಿದ್ದು, ಆ ದೇಹ ಕ್ಕಾಗಿಯೇ ಆಕೆ ಶ್ರಮಿಸುತ್ತಾಳೆ ಎಂಬ ಭಾವನೆ ಪ್ರಚಲಿತವಾಗಿದ್ದರೂ ವಾಸ್ತವದಲ್ಲಿ ಆಕೆ ಶ್ರಮಿಸುತ್ತಿರುವುದು ಪುರುಷರಿಗಾಗಿ. ತನ್ನ ದೇಹ ಯಾತಕ್ಕಾಗಿ, ಯಾರಿಂದ ಹಾಗೂ ಹೇಗೆ ಬಳಸ ಲ್ಪಡಬೇಕು ಎಂದು ನಿರ್ಧರಿಸುವಲ್ಲಿ ಆಕೆಗೆ ಸ್ವಾತಂತ್ರವೇ ಇಲ್ಲ. ಯಾವ ರೀತಿಯಲ್ಲಿ ಒಬ್ಬ ಶ್ರಮಿಕನ ದೇಹ ಕೇವಲ ಶ್ರಮವನ್ನು ಹೊರಸೂಸುವ ಯಂತ್ರದಂತೆ ಪರಿಗಣಿಸಲ್ಪಡುತ್ತದೆಯೋ ಅದೇ ರೀತಿಯಲ್ಲಿ ಸ್ತ್ರೀಯು ಕೂಡ ಪುರುಷನ ಇಚ್ಚೆಗನುಸಾರವಾಗಿ ತನ್ನ ದೇಹವನ್ನು ಒತ್ತೆಯಿಡು ವಂತ ಪರಿಸ್ಥಿತಿಯನ್ನು ತಲುಪಿದ್ದಾಳೆ.

ಆಧುನಿಕೋತ್ತರ ಸ್ತ್ರೀವಾದ (Post – Modern Feminism)

ಸ್ತ್ರೀಯರ ಅನುಭವಗಳು ಬೇರೆ ಬೇರೆ ಸಮಾಜಗಳಲ್ಲಿ ಬೇರೆ ಬೇರೆಯೇ ಆಗಿರುವುದರಿಂದ ಎಲ್ಲ ಸ್ತ್ರೀಯರಿಗೆ ಅನ್ವಯಿಸುವಂಥ ಒಂದೇ ಒಂದು ಸ್ತ್ರೀವಾದಿ ದೃಷ್ಟಿಕೋನವನ್ನು ರೂಪಿಸುವುದು ಸಮಂಜಸ ವಲ್ಲ ಎನ್ನುವ ಆಧುನಿಕೋತ್ತರ ಸ್ತ್ರೀವಾದಿಗಳು, ಎಷ್ಟು ಬಗೆಯ ಮಹಿಳೆಯರು ಇದ್ದಾರೋ ಅಷ್ಟು ಬಗೆ ಸ್ತ್ರೀವಾದಗಳು ಇರಬೇಕೆಂಬ ನಿಲುವನ್ನು ತಳೆಯುತ್ತಾರೆ. ಲ್ಯುಸ್ ಇರಿಗೆರೆ, ಲಕಾನ್ ಮತ್ತು ವೆರ್ರಿದ ಅವರುಗಳ ಬರಹಗಳು ಸೇರಿದಂತೆ ಎಲ್ಲ ಪುರುಷ ಕೇಂದ್ರಿತ ಬರಹಗಳನ್ನು ಕಟುವಾದ ಟೀಕೆಗೆ ಒಳ ಪಡಿಸುತ್ತಾಳೆ. ಪ್ಲೇಟೋನಿಂದ ಹಿಡಿದು ಲಕಾನ್‌ವರೆಗೆ ಎಲ್ಲ ಚಿಂತಕರೂ ಪುರುಷ ಪ್ರಧಾನತೆಯನ್ನು ಮೆರೆಸಿ, ಸ್ತ್ರೀಯ ಅಸ್ತಿತ್ವವನ್ನು ಕಡೆಗಣಿಸುವಂಥ ಬರಹಗಳನ್ನು ಸೃಷ್ಟಿಸಿದ್ದಾರೆ ಎನ್ನುವ ಇರಿಗೆರೆ, ಸ್ತ್ರೀಯ ಬದುಕು ಪುರುಷ ಕೇಂದ್ರಿತ ಮೌಲ್ಯಗಳನ್ನು ಪ್ರತಿಬಿಂಬಿಸಿದಾಗ ಮಾತ್ರ ಸಾರ್ಥಕತೆಯನ್ನು ಪಡೆಯ ಬಲ್ಲದು ಎಂಬ ತತ್ವವನ್ನು ಪ್ರತಿಪಾದಿಸುತ್ತಾ ಬಂದಿದ್ದಾರೆ ಎಂದು ಟೀಕಿಸುತ್ತಾಳೆ. ಸ್ತ್ರೀಯ ಬದುಕು ವ್ಯರ್ಥ, ಅರ್ಥಹೀನ, ಪರಾವಲಂಬಿ ಎಂಬ ಮೌಲ್ಯಗಳನ್ನು ಪ್ರತಿಪಾದಿಸುವ ಬರಹ ಗಳನ್ನು ಸ್ತ್ರೀಯರು ಕಿತ್ತೊಗೆದು ತಮ್ಮ ಹೆಣ್ತನವನ್ನು ಸಮರ್ಥಿಸುವ ಮಾರ್ಗಗಳನ್ನು ಕಂಡುಕೊಳ್ಳಬೇಕು ಎಂಬುದು ಇರಿಗೆರೆ ಯವರ ನಿಲುವು. ಪುರುಷ ಕೇಂದ್ರಿತ ವ್ಯವಸ್ಥೆಯನ್ನು ಪ್ರತ್ಯೇಕವಾಗಿ ಅಥವಾ ಪರೋಕ್ಷವಾಗಿ ಬೆಂಬಲಿ ಸುವ ಯಾವುದೇ ಬರಹಗಳನ್ನು ತಿರಸ್ಕರಿಸುವ ನಿಟ್ಟಿನಲ್ಲಿ ಯಾವುದೇ ಕಾರಣಕ್ಕೂ ಸ್ತ್ರೀಯರು ತಮ್ಮ ಪ್ರಸಕ್ತ ಪರಿಸ್ಥಿತಿಯ ಅನಿವಾರ್ಯತೆಯನ್ನು ಒಪ್ಪಿಕೊಳ್ಳಬಾರದು ಎಂದು ವಾದಿಸುತ್ತಾಳೆ.

ಸ್ತ್ರೀವಾದ ಕುರಿತ ಪ್ರಮುಖ ಸೈದ್ಧಾಂತಿಕ ದೃಷ್ಠಿಕೋನಗಳ ಪರಿಚಯವನ್ನು ಈಗಾಗಲೇ ಪರಿಚಯ ಮಾಡಲಾಗಿದೆ. ಸ್ತ್ರೀವಾದದ ಏಳು ಪ್ರಮುಖ ಸಿದ್ಧಾಂತಗಳ ಜೊತೆ ಇನ್ನು ಹಲವು ಸ್ತ್ರೀವಾದಗಳು ಇವೆ. ಲೆಸ್ಬಿಯನ್ ಸ್ತ್ರೀವಾದ, ಕಪ್ಪು ಸ್ತ್ರೀವಾದ, ಅಮೇರಿಕನ್ ಸ್ತ್ರೀವಾದ ಮತ್ತು ಪರಿಸರ ಸ್ತ್ರೀವಾದ. ಆದರೆ ಈ ಅಧ್ಯಯನಕ್ಕೆ ಈ ಸ್ತ್ರೀವಾದಗಳು ಪೂರಕವಲ್ಲವಾದ್ದರಿಂದ ಅವುಗಳ ಚರ್ಚೆಯನ್ನು ಇಲ್ಲಿ ಮಾಡಲಾಗಿಲ್ಲ. ಇದುವರೆಗೂ ಚರ್ಚಿಸಲಾದ ಸ್ತ್ರೀವಾದಗಳಲ್ಲಿ ಅಮೃತಾ ಪ್ರೀತಂ ಅವರ ಸಾಹಿತ್ಯಕ್ಕೆ ಯಾವ ಸ್ತ್ರೀವಾದಗಳು ಹೋಲಿಕೆಯಾಗುತ್ತವೆ, ಯಾವ ಸ್ತ್ರೀವಾದಗಳನ್ನು ಸಮೀಕರಿಸಬಹುದು ಎಂಬುದು ಮುಖ್ಯ ಪ್ರಶ್ನೆ. ಉದಾರವಾದಿ ಸ್ತ್ರೀವಾದ ಹಾಗೂ ಸಮಾಜವಾದಿ ಸ್ತ್ರೀವಾದಗಳನ್ನು ಹಮೀದಾ, ಅಂಗೂರಿ, ಮೂರ್ತಿ, ವೀರೋಳ ಪಾತ್ರಗಳಲ್ಲಿ ಸಮೀ ಕರಿಸಬಹುದಾಗಿದೆ. ಹಾಗೆಯೇ ಮನೋ ವಿಶ್ಲೇಷಣಾತ್ಮಕ ಸ್ತ್ರೀವಾದವನ್ನು ತಾರೋ, ಮೀನಾ, ಜನವರಿ ಇಪ್ಪತ್ತೈದು, ಇಪ್ಪತಾರು ಮತ್ತು ಇಪ್ಪತ್ತೇಳು ಕಥೆಯಲ್ಲಿನ ನಿರೂಪಕ ಗೆಳಯನ ಪತ್ನಿ (ಹೆಸರಿಲ್ಲ) ಈ ಪಾತ್ರಗಳಲ್ಲಿ ಸಮೀಕರಿಸಬಹುದಾಗಿದೆ. ತೀವ್ರ ಗಾಮಿ ಸ್ತ್ರೀವಾದಕ್ಕೆ ಹಮೀದಾಳ ಪಾತ್ರವನ್ನು ಸಮೀಕರಿಸಬಹುದಾಗಿದೆ. ಲಿಂಗ ಪಕ್ಷಪಾತದ ವಿಚಾರವಾಗಿ

ಧನಿಯೆತ್ತುವ ಉದಾರವಾದಿ ಸ್ತ್ರೀವಾದವನ್ನು ಗಮನಿಸುವಾಗ ಅಮೃತಾ ಪ್ರೀತಂರ ಕೃತಿ ಪಿಂಜರ್‌ನಲ್ಲಿನ ತಾರೋಳ ಪಾತ್ರವು ನೆನಪಾಗದೆ ಇರಲಾರದು. ತಾರೋಳಿಗೆ ತನ್ನ ಸುತ್ತಲಿನ ಸಮಾಜ ಯಾವುದೇ ಸಮರ್ಥನೆ ನೀಡುವುದಿಲ್ಲ. ಅವಳು ಸ್ವತಂತ್ರವಾಗಿ ಕುಟುಂಬ ಮತ್ತು ಸಮಾಜದ ವಿರೋಧವಾಗಿ ಲಿಂಗ ತಾರತಮ್ಯವನ್ನು ವಿರೋಧಿಸುತ್ತಾಳೆ. ಅಮೃತಾ ಪ್ರೀತಂರವರ ಕೃತಿಗಳು ಈ ನೆಲೆಯಲ್ಲಿ ಸಮಾಜದ ಸ್ತ್ರೀಯರ 'ಮನಸ್ಸಿನ ಏಳಿಗೆ'ಗೆ ಪೂರಕವಾಗಿ ನಿಲ್ಲುತ್ತವೆ.

ಅಧ್ಯಾಯ – ೪
ಅಮೃತಾ ಪ್ರೀತಂ ಅವರ ಕಥನ ಪ್ರಪಂಚ

ಅಮೃತಾ ಪ್ರೀತಂ ಅವರ ಕಥನ ಸಾಹಿತ್ಯ ಪಂಜಾಬಿ ಭಾಷೆಯಲ್ಲಿ ಸಾಕಷ್ಟಿದೆ. ಕನ್ನಡಕ್ಕೆ ಅವರ ಕೃತಿಗಳು ಅನುವಾದವಾಗಿರುವುದು ಬಹಳ ಕಡಿಮೆ. ಈ ಪ್ರಬಂಧಕ್ಕೆ ಆಯ್ದುಕೊಂಡಿರುವುದು ಪಿಂಜರ್ ಕಾದಂಬರಿ ಹಾಗೂ ಒಂದು ಕಥಾಸಂಕಲನ. ಕಥಾಸಂಕಲನದಲ್ಲಿ ಒಟ್ಟು ಹದಿಮೂರು ಕಥೆಗಳಿವೆ. ಶೋಷಣೆಗೆ ಒಳಗಾಗಿ, ಅಸಹಾಯಕ ಸ್ಥಿತಿಯಲ್ಲಿರುವ ಮಹಿಳೆಯು ವ್ಯವಸ್ಥೆಯನ್ನು ಒಪ್ಪಿಕೊಂಡೆ ಬದುಕುವ ಪರಿ, ಬದುಕಿನ ವಾಸ್ತವಗಳ ಚಿತ್ರಣ ಇವು ಅವರ ಕಥೆಯಲ್ಲಿ ನಾವು ಕಾಣುವ ಅಂಶಗಳು. ಇವರ ಬಹುತೇಕ ಕಥೆಗಳ ನಾಯಕಿಯರು ಸಾಮಾನ್ಯ ಮಹಿಳೆಯರು ಅಂಗೂರು (ಗಿಡಮೂಲಿಕೆ), ಮೀನಾ (ಮೂರನೇ ಹೆಣ್ಣು), ಧನ್ನೋ (ಧನ್ನೋ), ಶೀನಾ (ರಂಧ್ರಗಳು), ಮೂರ್ತಿ, ರುಕ್ಮಿಣಿ (ಋಣ).

ಮೊದಲ ಕಥೆ 'ಗಿಡಮೂಲಿಕೆ' ಹೆಸರೇ ಹೇಳುವ ಹಾಗೆ ಇಲ್ಲಿ ಒಂದು ಗಿಡಮೂಲಿಕೆ ವಿಶಿಷ್ಟ ಪಾತ್ರವನ್ನು ವಹಿಸುತ್ತದೆ. ಈ ಗಿಡಮೂಲಿಕೆಯನ್ನು ಮಿಠಾಯಿ ಅಥವಾ ಎಲೆ ಅಡಿಕೆಯನ್ನು ಹಾಕಿ ತಿನ್ನಿಸಿಬಿಟ್ಟರೆ ಹುಡುಗ ಹೇಳಿದಂತೆ ಹುಡುಗಿ ಕೇಳುತ್ತಾಳೆ. ಹುಡುಗಿ ಅವನೊಡನೆ ಪ್ರೀತಿಸಲು ಬೇರಾವ ವಸ್ತುಗಳು ಅವಳಿಗೆ ಬೇಕಾಗಿರುವುದಿಲ್ಲ. ಈ ಗಿಡಮೂಲಿಕೆ ಬಗೆಗಿರುವ ನಂಬಿಕೆ ಸುತ್ತ ಕಥೆ ಚಲಿಸುತ್ತದೆ. ಮುಗ್ಧ ಅಂಗೂರಿ ಪ್ರಭಾತಿ ಎಂಬುವನೊಡನೆ ಎರಡನೇ ಹೆಂಡತಿಯಾಗಿ ಅವನ ಮನೆಗೆ ಬಂದಿರುತ್ತಾಳೆ. ನಿರೂಪಕಿಯೊಡನೆ ಅವಳು ನಡೆಸುವ ಸಂಭಾಷಣೆ ಅವಳ ಮುಗ್ಧತೆಗೆ ಸಾಕ್ಷಿಯಾಗಿದೆ. ಓದುತ್ತಿರುವ ನಿರೂಪಕಿಯನ್ನು ಅಂಗೂರಿ ಪ್ರಶ್ನೆ ಮಾಡುತ್ತಾಳೆ, ಏನನ್ನು ಓದುತ್ತಿದ್ದೀರಿ? ಎಂದು. ನೀನು ಓದು ಗೊತ್ತಾಗುತ್ತದೆ ಎಂಬ ಪ್ರತಿಕ್ರಿಯೆಯನ್ನು ನಿರೂಪಕಿ ನೀಡುತ್ತಾಳೆ. ಹೆಂಗಸರು ಓದಿದರೆ ಪಾಪ ಬರುತ್ತೆ, ಪಟ್ಟಣದ ಹೆಂಗಸರು ಓದಿದರೆ ಪಾಪ ಬರಲ್ಲ. ಹಳ್ಳಿಯ ಹೆಂಗಸರು ಓದಿದರೆ ಪಾಪ ಬರುತ್ತೆ. ಈ ರೀತಿಯ ವಿಚಾರಗಳನ್ನು ಮುಗ್ಧ ಹುಡುಗಿ ಅಂಗೂರಿ ಕೇಳುತ್ತಿರುತ್ತಾಳೆ. ಈ ಮುಗ್ಧತೆಗೆ ಇನ್ನೊಂದು ಘಟನೆ ಸಾಕ್ಷಿಯಾಗುತ್ತದೆ. ರಾಮ್ ತಾರಾ ಎನ್ನುವ ಯುವಕನೊಡನೆ ಅಂಗೂರಿ ತನಗೆ ಗೊತ್ತಿಲ್ಲದಂತೆ ಪ್ರೀತಿಗೆ ಬೀಳುತ್ತಾಳೆ. ರಾಮ್ ತಾರ್‌ನ ನೆನಪು ಅವಳಿಗೆ ಪದೇ ಪದೇ ಕಾಡುತ್ತಿರುತ್ತದೆ. ಅವನ ನೆನಪಿನಿಂದ ಅವಳು ಊಟವನ್ನು ಮಾಡುವುದಿಲ್ಲ.

'ನಿರೂಪಕಿಯ ಗಿಡಮೂಲಿಕೆ ಏನಾದರೂ ತಿಂದೆಯೋ ಹೇಗೆ? ಎಂಬ ಪ್ರಶ್ನೆಗೆ ಅಂಗೂರಿಯ ಕಣ್ಣುಗಳಿಂದ ನೀರು ಎರಡು ಧಾರೆಯಾಗಿ ಹರಿದು ತುಟಿಗಳ ಮೇಲಿಂದ ಸಾಗಿ ಅವಳ ಬಾಯ ಹತ್ತಿರ ಮಡುಗಟ್ಟಿ ನಿಂತಿತು. ಅಂಗೂರಿಯ ಬಾಯಿಂದ ಹೊರಟ ಅಕ್ಷರಗಳು ನೆನೆದಿದ್ದವು. ಗದ್ಗದ ಕಂಠದಿಂದ ಹೇಳತೊಡಗಿದಳು. ನಾನು ಆಣೆ ಮಾಡಿ ಹೇಳ್ತೀನಿ ಅವನಿಂದ ಎಂದೂ ಸಿಹಿತಿಂಡಿ ಇಸ್ಕೊಂಡಿರಲಿಲ್ಲ.

ಅಡಕೆಲೆ ಕೂಡ ತಗೊಂಡಿರಲಿಲ್ಲ. ಕೇವಲ ಟೀ ಮಾತ್ರ. ಅವನು ಟೀನಲ್ಲೇ... ಗೊತ್ತಿಲ್ಲ. ಅವಳಿಗೆ ತನ್ನ ಮಾತನ್ನು ಪೂರ್ತಿ ಮಾಡಲಾಗಲಿಲ್ಲ. ಅಂಗೂರಿಯ ಮಾತುಗಳೆಲ್ಲವೂ ಕಣ್ಣೀರಿನಲ್ಲಿ ಮುಳುಗಿ ಹೋದವು.'[೧]

ಮುಗ್ಧ ಹುಡುಗಿಯಾದ ಅಂಗೂರಿ ಪ್ರೀತಿಸುವುದು ತಪ್ಪು ಎಂಬ ಸಾಂಪ್ರದಾಯಿಕ ನಂಬಿಕೆ ಯುಳ್ಳವಳಾಗಿದ್ದಾಳೆ. ಇದು ಸಮಾಜದ ಕಟ್ಟುಪಾಡುಗಳಿಗೆ ಅವಳು ನಡೆಸಿರುವ ಸಂಧಾನದಂತೆ ಗೋಚರಿ ಸುತ್ತದೆ. ವಿಷಮ ದಾಂಪತ್ಯದಲ್ಲಿ ಸಿಲುಕಿ ಇನ್ನೆಲ್ಲೋ ಪ್ರೀತಿಯನ್ನು ಅರಸುವ ಪಾತ್ರವಾಗಿ ಅಂಗೂರಿ ಚಿತ್ರಿತವಾಗಿದ್ದಾಳೆ. ಈ ರೀತಿಯ ಸಾಂಪ್ರದಾಯಿಕ ನಂಬಿಕೆಗಳು ಕಥೆಯಲ್ಲಿ ಬಹಳಷ್ಟಿವೆ. ಹೆಂಡತಿಯು ಒಂದು ವೇಳೆ ಮೃತಪಟ್ಟರೆ ಅವಳ ತಂಗಿಯನ್ನು ಅಕ್ಕನ ಗಂಡನಿಗೆ ಧಾರೆ ಎರೆದುಕೊಡಬಹುದು. ಈ ರೀತಿಯ ಸಾಂಪ್ರದಾಯಿಕ ನಂಬಿಕೆ ಗಿಡಮೂಲಿಕೆ ಕಥೆಯಲ್ಲಿದೆ. 'ತನ್ನ ಹೆಂಡತಿಯ ಶವ ಸಂಸ್ಕಾರ ಮಾಡಲು ಪ್ರಭಾತಿ ತನ್ನ ಹಳ್ಳಿಯ ಮನೆಗೆ ಹೋಗಿದ್ದ. ಆ ದಿನ ಶವ ಸಂಸ್ಕಾರದ ನಂತರ, ಅಂಗೂರಿ ಯ ಅಪ್ಪ ಪ್ರಭಾತಿಯ ಮನೆಗೆ ಬಂದು ಅವನ ಒದ್ದೆ ಟವಲನ್ನು ಹಿಂಡಿದ್ದನು. ಯಾವ ಗಂಡನ ಚೌಕವೂ ತನ್ನ ಹೆಂಡತಿಯ ಸಾವಿಗಾಗಿ ಸುರಿಸುವ ಕಣ್ಣೀರಿನಿಂದ ಒದ್ದೆಯಾಗದಿದ್ದರೂ, ಶವ ಸಂಸ್ಕಾರದ ದಿನ ಅಥವಾ ನಾಲ್ಕನೇ ದಿನ ಸ್ನಾನ ಮಾಡಿ ಮೈ ಒರೆಸಿಕೊಂಡಿದ್ದರಿಂದಂತೂ ಒದ್ದೆಯಾಗೇ ಇರುತ್ತೆ. ಒದ್ದೆ ಟವಲನ್ನು ಹಿಂಡುವ ಒಂದು ಸರಳ ಕೃತ್ಯವು ಸತ್ತ ನಿನ್ನ ಹೆಂಡತಿಯ ಸ್ಥಾನವನ್ನು ತುಂಬಲು ನಿನಗೆ ನನ್ನ ಮಗಳನ್ನು ಕೊಡುತ್ತೇನೆ. ಇನ್ನು ನೀನು ಅಳಬೇಕಾಗಿಲ್ಲ. ಕಣ್ಣೀರಿನಿಂದ ಒದ್ದೆಯಾದ ನಿನ್ನ ಚೌಕವನ್ನು ಕೂಡ ಪೂರ್ತಿ ಹಿಂಡಿ ಒಣಗಿಸಿದ್ದೇನೆ'[೨] ಎಂಬರ್ಥದ್ದಾಗಿರುತ್ತದೆ.

'ಮೂರನೇ ಹೆಣ್ಣು' ಕಥೆಯಲ್ಲಿ ರೂಪಕಗಳ ಸರಮಾಲೆಯನ್ನೇ ನೋಡಬಹುದು. ಈ ರೂಪಕ ಗಳಿಂದ ಬದುಕಿನ ವಾಸ್ತವಗಳು ಇನ್ನಷ್ಟು ಹತ್ತಿರವಾಗುತ್ತವೆ. ಗಂಡನ ಸಾವು, ಮಗಳು ತವರಿಗೆ ಮರಳುವುದರಲ್ಲಿ ಭೀಕರತೆ ಇದ್ದರೂ ಇವು ಬದುಕಿನ ವಾಸ್ತವಗಳಾಗಿವೆ. ಅದನ್ನು ಒಪ್ಪಲೇಬೇಕಾಗುತ್ತದೆ. ಕೆಲವೊಂದು ರೂಪಕಗಳನ್ನು ಗಮನಿಸುವುದಾದರೆ, 'ಚಟ್ಟಗಳು ಮನೆ ಯಿಂದ ಹೊರಕ್ಕೆ ಹೋಗುತ್ತವೆ. ಆದರೆ ಮೀನ ತನ್ನ ತವರಿಗೆ ಬಂದಾಗ ಎಲ್ಲರಿಗೂ ಒಂದು ಚಟ್ಟ ಮನೆಯೊಳಗೆ ಬಂದು ಬಿಟ್ಟಿತೇನೋ ಅನ್ನಿಸಿತು.'[೩] ಮಗಳಿನ ದುಃಖ, ತವರಿನ ದುಃಖ ಇಲ್ಲಿ ನಿಗೂಢ. ಇರುವುದೆಲ್ಲ ಭಯ – ಭೀತಿಯೇ. ಕೆಲವೊಂದು ಸಂಗತಿಗಳನ್ನು ಹೆಂಗಸು ಸಹಜವಾಗಿಯೇ ಗ್ರಹಿಸುತ್ತಾಳೆ. ಗಂಡ ಸತ್ತಿರುವುದು ಸತ್ಯಸಂಗತಿ. ಗಂಡ ಸತ್ತ ನಂತರ ಆ ಹೆಂಗಸಿನ ಮುಂದಿನ ದಿನ ಹೇಗಿರುತ್ತದೆ ಎಂದರೆ, ಕಥೆಯಲ್ಲಿ ಹೇಳುವ ಹಾಗೆ 'ಗಂಡಸು ಒಮ್ಮೆ ಮಾತ್ರ ಸಾಯುತ್ತಾನೆ. ಆದರೆ ಅವನ ಸಾವಿನ ನಂತರ ಅವನ ಹೆಂಡತಿ ಬದುಕಿರು ವಷ್ಟು ಕಾಲದಲ್ಲಿ ಅದೆಷ್ಟು ಸಲ ಸಾಯುತ್ತಾಳೋ ಗೊತ್ತಿಲ್ಲ.'[೪]

ಇನ್ನು ಕೋಣೆಯ ಬಾಗಿಲನ್ನು ರೂಪಕವಾಗಿರಿಸಿಕೊಂಡಿರುವ ಲೇಖಕಿ ಅವು ತೆರೆ ಯುವುದು, ಮುಚ್ಚುವುದನ್ನು ವಿಶೇಷ ಅರ್ಥದಲ್ಲಿ ಬಳಸಿಕೊಂಡಿದ್ದಾರೆ. 'ಇಂದಿಗೆ ಇಪ್ಪತ್ತು ವರ್ಷಗಳ ಹಿಂದೆ ಮೀನಾಳ ಅಕ್ಕನ ಮದುವೆಯ ಸಂದರ್ಭದಲ್ಲಿ ಅವಳ ಕೋಣೆಯನ್ನು ವಿವಾಹದ ಆ ಘಟನೆ ತನ್ನ ಕೈಗಳಿಂದ ಮುಚ್ಚಿತ್ತು. ಆದರೆ ಎರಡು ವರ್ಷಗಳ ನಂತರ ಮಗು ಹುಟ್ಟಿದಾಗ ತನ್ನ ತವರಿಗೆ ಹೋದ ಸಂದರ್ಭದಲ್ಲಿ ಮಗುವಿನ ಜನನದ ಘಟನೆ, ತನ್ನ ಕೈಯಿಂದ ಅವಳ ಕೋಣೆಯ ಬಾಗಿಲನ್ನು ತೆರೆಸಿತ್ತು. ಮತ್ತೆ ಅವಳು ನಲವತ್ತು ದಿನಗಳಲ್ಲಿ ಹಾಲು ಕುಡಿವ ಹಸುಗೂಸನ್ನು ಹಿಂದೆ ಬಿಟ್ಟು ತೀರಿಕೊಂಡಾಗ, ಸಾವು ತನ್ನ ಕೈಯಿಂದ ಕೊಠಡಿಯ ಬಾಗಿಲನ್ನು ಮುಚ್ಚಿಬಿಟ್ಟಿತು. ಆ ಪುಟ್ಟ ಮಗುವನ್ನು ಸಂಭಾಳಿಸು ವುದು ಕಷ್ಟ ಎನ್ನಿಸಿದಾಗ, ಆ ಗಂಡು ಮಗುವನ್ನು ಅದರ ತಾಯಿಯ ತೌರುಮನೆಗೆ ಕಳಿಸಿಬಿಟ್ಟರು. ಈ ಘಟನೆಯಾದರೋ ಆ ಬಾಲಕನ ಪುಟ್ಟ ಕೈಗಳಿಂದ ಆ ಕೊಠಡಿಯ ಬಾಗಿಲನ್ನು ಮತ್ತೆ ತೆರೆಸಿತು.'[೫]

ಗಂಡನ ಸಾವಿನೊಂದಿಗೆ ಮೀನಳೂ ಮಾನಸಿಕವಾಗಿ ಸತ್ತಿದ್ದಳು. ಮೀನುಗೆ ಚೆಲುವ ಯೋಧ ನೆನಪಾಗುವುದರ ಜೊತೆ ಗಂಡನ ಪ್ರತಿರೂಪ ಗರ್ಭದಲ್ಲಿ ಧರಿಸಿದ್ದರೆ ಅವನ ಒಂದು ಅಂಶ ಈ ಪ್ರಪಂಚದಲ್ಲಿ ಬದುಕಿರುತ್ತಿತ್ತು ಎಂದು ಪ್ರತಿಕ್ಷಣವೂ ಯೋಚನೆ ಮಾಡುತ್ತಿದ್ದಳು. ಗಂಡ, ಮಗು ಇಲ್ಲದ ಈ ಜಗತ್ತು ಅವಳಿಗೆ ಶೂನ್ಯದಂತಿತ್ತು. ಆ ನೋವನ್ನು ಸಹಿಸಿಕೊಂಡು ಅವಳು ಮೂರನೇ ಹೆಣ್ಣಾಗ ಬೇಕೆಂದು ಯೋಚಿಸುತ್ತಿದ್ದಳು. ಮಗುವನ್ನು ಪಡೆಯಬೇಕೆಂಬ ಹೆಬ್ಬಯಕೆ ಅವಳ ಶರೀರದಲ್ಲಿ ಗಾನ ಮೊಳಗಿಸುತ್ತಿತ್ತು. ಆ ನೋವನ್ನು ಮೀನು ಹೀಗೆ ವ್ಯಕ್ತಪಡಿಸುತ್ತಾಳೆ. 'ಗಂಡು ಸತ್ತನೆಂದರೆ ಹೆಣ್ಣಿನ ಎಲ್ಲ ಅಂಗಗಳೂ ಜೀವಂತವಾಗಿದ್ದರೂ ಅವಳ ಗರ್ಭವಂತೂ ಖಂಡಿತಾ ಸಾಯುತ್ತದೆ. ಮೀನಾಳಿಗಂತೂ ತನ್ನ ಸತ್ತ ಗರ್ಭದ ದುರ್ನಾತ ಮೂಗಿಗೆ ಅಡರಿದಂತೆನಿಸುತ್ತಿತ್ತು.'[೬]

ಗಂಡ, ಮಗುವಿನ ನೆನಪಲ್ಲಿ ಮೀನಾ ಅಕ್ಕನ ಮಗ ಅವಿನಾಶನನ್ನು ನೋಡಿದಾಗಲೆಲ್ಲ ಅವನ ಮುಖದ ಚಹರೆಯಲ್ಲಿ ಎರಡು ಚಹರೆಗಳು ಬೆರೆತಿದ್ದದ್ದನ್ನು ಗಮನಿಸುತ್ತಿದ್ದಳು. ಒಂದು ತನ್ನ ಪತಿಯದು ಹಾಗೂ ಪತಿಯಿಂದ ಹುಟ್ಟಬಹುದಾದ ಮಗುವಿನದು. ಇದು ಜಾಗೃತ ಅವಸ್ಥೆಯಲ್ಲಿ ನಡೆಯುವುದಾದರೆ, ಕಥೆಯಲ್ಲಿ ಸುಪ್ತಾವಸ್ಥೆಯಲ್ಲಿ ನಡೆಯುವ ಮನಸ್ಸಿನ ವ್ಯವಸ್ಥೆಯನ್ನು ಲೇಖಕಿ ತೋರಿಸಿದ್ದಾರೆ. ಆ ಅಚೇತ ನಾವಸ್ಥೆಯಲ್ಲಿ 'ಅವರಿಬ್ಬರೂ ಕೇವಲ ಗಂಡು ಹಾಗೂ ಹೆಣ್ಣು ಗಳಾಗಿದ್ದರೂ, ಆ ಹೆಣ್ಣಿನ ಗರ್ಭ ವಾದರೋ ಗಂಡನ್ನು, ಅವನ ಶಾಶ್ವತ ಅಸ್ತಿತ್ವವನ್ನು ಚೀರಿ ಬೇಡುತ್ತಿದೆ.'[೭] ಮೀನೂ ಒಂದು ರಾತ್ರಿ ಮೂರನೇ ಹೆಣ್ಣಾಗಿದ್ದಳು. ಇಲ್ಲಿ ಹೆಣ್ಣು ಬದುಕಿನ ವಾಸ್ತವಗಳ ಜೊತೆ ಹೆಜ್ಜೆ ಹಾಕುತ್ತಲೇ, ತನಗೆ ಅಲಭ್ಯವಾದದ್ದನ್ನು ಪಡೆಯುವ ಚಡಪಡಿಕೆಯಲ್ಲಿ ಇದ್ದಾಳೆ. ಅವಳಿಗೆ ಸರಿ ತಪ್ಪುಗಳ ಗೊಡವೆ ಇಲ್ಲ. ಹೆಣ್ಣಿನ ಜಾಗೃತಾವಸ್ಥೆ ಹಾಗೂ ಸುಪ್ತಾವಸ್ಥೆಗಳ ರೂಪಗಳನ್ನು ಇಲ್ಲಿ ನೋಡಬಹುದಾಗಿದೆ.

'ಒಂದು ನಿಟ್ಟುಸಿರು' ಕಥೆಯಲ್ಲಿ ಗಂಡು ಮಗುವಿಗಾಗಿ ಇನ್ನೊಂದು, ಮತ್ತೊಂದು ಮದುವೆ ಯಾಗುವ ಮುದುಕ, ಜೀವನದಲ್ಲಿ ನಂಬಿಕೆಯನ್ನೇ ಉಳಿಸಿಕೊಂಡಿರದ ಮುದುಕಿ ಮತ್ತು ತನ್ನ ಹೆಂಡತಿಯರ ಮೇಲೆ ಶೋಷಣೆ ಮಾಡುತ್ತಾನೆ. ದೊಡ್ಡ ಮನೆತನದವರಾದ್ದರಿಂದ ಆ ಶೋಷಣೆಯನ್ನು ಆ ಹೆಣ್ಣುಗಳು ಸಹಿಸಿಕೊಳ್ಳುತ್ತಾರೆ.

ತನ್ನ ಸರದಾರನ ಎರಡನೆಯ ಮದುವೆಗೆ ವೀರೋಳನ್ನು ಸ್ವತಃ ಮೊದಲ ಹೆಂಡತಿ ನಿಹಾಲ್ ಕೌರಳೇ ಹುಡುಕಿದ್ದಳು. ನಿಹಾರ್ ಕೌರಳಿಗೆ ವೀರೋ ಮಗಳೂ ಸೊಸೆಯೂ ಆಗಿದ್ದಳು. ಜೊತೆಗೆ ಸವತಿಯೂ ಆಗಿದ್ದಳು. ಪುರುಷ ಸಮಾಜದಲ್ಲಿ ಪುರುಷನೇ ಆಳ್ವಿಕೆ ನಡೆಸುತ್ತಾನೆ. ಇದನ್ನು ಒಪ್ಪಿಕೊಳ್ಳುವುದಷ್ಟೆ ಹೆಣ್ಣುಗಳ ಕೆಲಸವಾಗುತ್ತದೆ. ಸರದಾರ ಹುಟ್ಟಿದ ಗಂಡು ಮಗುವಿಗೆ ತನ್ನ ಆಸ್ತಿಯನ್ನು ಬರೆಯುವುದಾಗಿಯೂ ಷರತ್ತನ್ನು ಹಾಕುತ್ತಾನೆ. ಈ ಷರತ್ತಿನಿಂದ ಗಂಡು ಮಗುವಿನ ಜನನ ಅನಿವಾರ್ಯವಾಯಿತು ಆ ಹೆಂಗಸರಿಗೆ. ಜೀವನದಲ್ಲಿ ಯಾವ ನಂಬಿಕೆಯನ್ನೂ ಉಳಿಸಿಕೊಳ್ಳದ ಸರದಾರ ಅವಳ ಹೆರಿಗೆ ತನ್ನ ಮನೆಯಲ್ಲಿಯೇ ಆಗಬೇಕೆಂದು ಹಟ ಹಿಡಿಯುತ್ತಾನೆ. ಇದರಿಂದ ತಪ್ಪಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ವೀರೋಗೆ ತವರಿನ ನೆನಪು ಕಾಡುತ್ತಿರುತ್ತದೆ. ಅವಳು ಅಲ್ಲಿ ಹೋಗಬೇಕೆಂದು ಬೇಡುತ್ತಿರುತ್ತಾಳೆ. ಸರದಾರ ಇದಕ್ಕೆ ಒಪ್ಪುವುದಿಲ್ಲ. ಅವನ ಮನಸ್ಸಿನಲ್ಲಿರುವ ಯೋಚನೆ ಇದು. 'ಅವಳಿಗೊಂದು ವೇಳೆ ಅಲ್ಲಿ ಹೆಣ್ಣು ಮಗು ಹುಟ್ಟಿದರೆ ಅವಳು ಬೇರೆ ಯಾರದ್ದಾದರೂ ಗಂಡು ಮಗುವಿಗೆ ಅದನ್ನು ಬದಲಾಯಿಸಿ ಕೊಂಡು ಬಿಡುತ್ತಾಳೆ. ನಾನು ಈ ಮುಂಚೇನೂ ಇಂಥ ಸಂಗತಿ ಗಳನ್ನು ಕೇಳಿದ್ದೀನಿ. ಒಂದು ವೇಳೆ ಗಂಡು ಮಗುವಾದರೆ, ಅದು ದೊಡ್ಡದಾದ ಮೇಲೆ ಆಸ್ತಿಯ ವಾರಸುದಾರನಾಗುತ್ತಾನೆ ಎನ್ನುವ ದುರಾಸೆ ಇದೆ ಅವಳಿಗೆ.'[೮] ಮೊದಲ ಹೆಂಡತಿಯನ್ನು ಎರಡನೇ ಹೆಂಡತಿಯ ಕಾವಲಿ ಗಾಗಿ ಅವಳ ತವರು ಮನೆಗೆ ಕಳುಹಿಸುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವಿದೆ. ಅವಳ ತವರು ಮನೆಯಲ್ಲೂ ಗಂಡು ಮಗುವಿನ ಹಂಬಲ ಎಷ್ಟರ ಮಟ್ಟಿಗೆ ಇದೆ ಹಾಗೂ ಹೆಣ್ಣು ಹುಟ್ಟಿದರೆ ಅದಕ್ಕೆ ತಾಯಿಯಾದವಳು ಹೇಗೆ ಪ್ರತಿಕ್ರಿಯೆ ಕೊಡಬೇಕೆಂದು ಅವರು ಮುಂಚೆಯೇ ಸೂಚಿಸಿ ರುತ್ತಾರೆ. 'ಒಂದು ಸಲ ಚೀರುವುದು ನೋವಿಗಾಗಿ, ಇನ್ನೊಂದು ಸಲ ಚೀರುವುದು ಹೆಣ್ಣು ಮಗಳು ಹುಟ್ಟಿದ್ದಕ್ಕಾಗಿ. ಖುಷಿ ಏನಿದ್ದರೂ ಗಂಡು ಮಕ್ಕಳದು. ಹೆಣ್ಣು ಮಕ್ಕಳದೇನು ಖುಷಿ ಇರುತ್ತೆ.'[೯]

ಗಂಡು ಮಗು ಹುಟ್ಟಿದರೂ ಕತೆಯ ಕೊನೆಯಲ್ಲಿ ಒಂದು ಆಶ್ಚರ್ಯ ಕಾದಿದೆ. ಅದುವರೆಗೂ ತನ್ನ ಮಗು ಎಂದು ನಂಬಿದ್ದ ಸರದಾರ ಆ ಮಗುವಿಗಾಗಿ ಕಾವಲನ್ನು ಬಿಟ್ಟಿದ್ದ. ಆದರೆ ಆ ಮಗು ಅವನದ್ದಾಗಿರಲಿಲ್ಲ. ಮಗುವನ್ನು ಬದಲಾಯಿಸಬಹುದು ಎಂಬ ನಂಬಿಕೆಯಲ್ಲಿ ಕಾವಲು ಬಿಟ್ಟಿದ್ದ ಸರದಾರನಿಗೆ ಆ ಮಗು ತನ್ನದು ಅಲ್ಲವೇ ಅಲ್ಲ ಎಂದು ಗೊತ್ತೇ ಇರುವುದಿಲ್ಲ. 'ಸರದಾರನಿಗೆ

ಏನಾದರೂ ಗೊತ್ತಾಯಿತು ಅಂದರೆ ತನ್ನ ಕೆಲಸ ಹೋಗಿಬಿಡುತ್ತೆ ಅಂತ ಮದನಸಿಂಹನಿಗೆ ಹೆದರಿಕೆ. ಅವನ ಕೆಲಸ ಹೋಗೋ ಹಾಗೆ ಮಾಡಿ, ನಾನು ಏನಂತ ಸಂಸಾರ ಸ್ಥಳಾಗಲಿ? ಅವನು ಎಲ್ಲೇ ಇರಲಿ, ಸಂತೋಷವಾಗಿರಲಿ, ಯೌವನವಂತ ವ್ಯಕ್ತಿ ಹೇಗೆ ಇರುತ್ತಾನೆ ಅಂತ ನಾನು ಒಂದು ಸಲವಂತೂ ನೋಡಿದೆ.'[೧೦] ಮುದುಕನ ಜೊತೆ ಅವಳು ಬದುಕಿದ್ದು, ಅವಳು ಬಯಸಿದ್ದನ್ನು, ಅವಳಿಗೆ ಇದುವರೆಗೂ ಸಿಗದಿದ್ದನ್ನು ಬೇರೆಡೆ ದೊರಕಿಸಿಕೊಂಡಳು. ವಿಷಮ ದಾಂಪತ್ಯದ ಸೂಚಕವಾಗಿದ್ದರೂ ಅವಳಿಗೆ ತಾನು ತಪ್ಪು ಮಾಡಿದೆ ಎಂಬ ಪರಿತಾಪ ಇಲ್ಲ. ತನಗೆ ಇದುವರೆಗೂ ದೊರಕದಿದ್ದನ್ನು ಬೇರೊಬ್ಬ ಯುವಕ ನಿಂದ ಪಡೆದ ಬಗ್ಗೆ ನೆಮ್ಮದಿಯ ನಿಟ್ಟುಸಿರನ್ನು ಅವಳು ಪಡೆದಳು.

'ಆ ಮನುಷ್ಯ' ಕಥೆಯಲ್ಲಿ ವಿಭಿನ್ನ ವ್ಯಕ್ತಿತ್ವವುಳ್ಳ ಎರಡು ಪುರುಷ ಪಾತ್ರಗಳಿವೆ. ಮದಾನ್ ಕುವರ್‌ನಿಗೆ ಹೆಂಡತಿ ತೀರಿಕೊಂಡ ಮೇಲೆ ಒಂಟಿ ಜೀವನ ಪ್ರಾಪ್ತವಾಯಿತು. ಅವನು ದುಡಿಯುತ್ತಿದ್ದದ್ದು, ಕೇವಲ ಅವನ ಹೆಂಡತಿಗಾಗಿ. ಈಗ ಅವಳು ಇಲ್ಲ. ಖರ್ಚು ಇಲ್ಲ. ಅವನಿಗೆ ಕೆಲಸ ಮಾಡಲು ಆಗುತ್ತಿಲ್ಲ. ಪ್ರಶಾಂತವಾದ ವಾತಾವರಣ ಬಯಸಿ ಅವನು ದೂರದ ಗುಡ್ಡದ ಪ್ರದೇಶಕ್ಕೆ ಹೋಗಿ ಬಿಡುತ್ತಾನೆ. ದೂರದ ಹೊಲಗದ್ದೆ ಬೆಟ್ಟಗಳನ್ನು ಹುಡುಕಿ ಹೊರಟ ಅವನಿಗೆ ತನ್ನ ಅಸ್ತಿತ್ವ ಅಲ್ಲಿ ಗೋಚರಿಸುತ್ತಿತ್ತು. ಇಪ್ಪತ್ತು ವರ್ಷಗಳು ಕೆಲಸದ ವಿಚಾರವಾಗಿ ದಣಿದಿದ್ದ ಅವನಿಗೆ ಈ ನಿಸರ್ಗ ಮನ ತಣಿಸುತ್ತಿತ್ತು. ಇದರಿಂದ ಅವನ ಇಪ್ಪತ್ತು ವರ್ಷದ ದಣಿವು ಇಳಿಯತೊಡಗಿತ್ತು.

'ಮರದ ಎಲೆಗಳ ಶ್ ಶ್ ದನಿ, ಹುಲ್ಲಿನ ಸರ ಸರ ದನಿ, ಸಮೀದ ನದಿಯ ಜಲಜಲ ನಿನಾದ, ಅವನ ಒಂದು ಕುರಿಯ ಮ್ಯಾ ಮ್ಯಾ ಶಬ್ದ, ಅವನ ಮೂರು ಕೋಳಿಗಳ ಕು ಕು ಕು, ಚಳಿಗಾಲದ ಮೊದಲ ದಿನಗಳಲ್ಲಿ ದೂರಬೆಟ್ಟದ ಇಳಿಜಾರುಗಳಲ್ಲಿ ಕೆಳಗಿಳಿದು ಬರುತ್ತಿರುವ ಕ್ರಾಂತಿಯ ಹಾಡುಗಳ ದನಿಗಳು, ಬೇಸಿಗೆಯ ಆರಂಭದ ದಿನಗಳಲ್ಲಿ ಅದೇ ಇಳಿಜಾರುಗಳಲ್ಲಿ ಮೇಲಕ್ಕೆ ಏರಿಹೋಗುತ್ತಿರುವವರ ಹಾಡುಗಳ ದನಿಗಳು, ಈಗಲೂ ದೂರದಲ್ಲಿ ಮತ್ತು ಹತ್ತಿರದಲ್ಲಿ ಅವನ ಸುತ್ತಲೂ ಕೇಳಿ ಬರುತ್ತಿದ್ದವು. ಆದರೆ ಆ ದನಿಗಳು ಅವನಿಗೆ ತನ್ನ ಹೃದಯದ ಧಡ್ ಧಡ್‌ನಂತೆ ಅನಿಸುತ್ತಿತ್ತು.'[೧೧] ಈ ಒಂಟಿತನ ಅವನಿಗೆ ತುಂಬಾ ಹತ್ತಿರವಿರುವಾಗಲೇ ಅವನ ತಮ್ಮನಾದ ಇಂದ್ರನು ಅವನನ್ನು ಹುಡುಕಿಕೊಂಡು ಬರುತ್ತಾನೆ. ಮೊದಲಿಗೆ ಅವನಿಗೆ ಈ ವಿಚಾರ ಇಷ್ಟವಾಗುವುದಿಲ್ಲ. ಒಂಟಿತನ ಒಗ್ಗಿರುವ ಅವನಿಗೆ ಯಾವ ಸಂಪರ್ಕವು ಬೇಕಾಗಿರುವುದಿಲ್ಲ. ಆದರೆ ತಮ್ಮ ಆ ವಾತಾವರಣ ಕಂಡು ಅಲ್ಲಿಂದ ಬೇರೆಡೆ ಹೋಗಲಾರದೆ ಅಲ್ಲೇ ಉಳಿದುಕೊಳ್ಳುತ್ತಾನೆ. ಆ ಗುಡ್ಡಗಾಡು ಪ್ರದೇಶದಲ್ಲಿ ಒಂದು ಶಾಲೆಯ ನಿರ್ಮಾಣ ಮಾಡುವುದು ಅವನ ಯೋಜನೆ ಆಗುತ್ತದೆ. ಕಥೆಯಲ್ಲಿ ನಾವು ಗಮನಿಸುವ ಅಂಶಗಳು ಎರಡು ಭಿನ್ನ ವ್ಯಕ್ತಿತ್ವ ಗಳು ಕೂಡಿ ಬಾಳುವುದು ಕಷ್ಟವಾದರೂ ಅದು ಅನಿವಾರ್ಯವಾಗುತ್ತದೆ. ಈ ಅನಿವಾರ್ಯತೆ

ನಂತರ ಒಬ್ಬರಿಗೊಬ್ಬರು ಸಹಕಾರ ಕೊಡುವ ಮಟ್ಟಿಗೆ ಬೆಳೆಯುತ್ತದೆ. ಶಾಲೆಯ ನಿರ್ಮಾಣದ ಮಹತ್ತರ ಯೋಜನೆಗೆ ಇಂಬು ಸಿಗುತ್ತದೆ. ಇಂದ್ರ ಮದುವೆಯಾಗಿ ಒಂದು ಹುಡುಗಿಯನ್ನು ಕರೆದುಕೊಂಡು ಬಂದಾಗ ಅವನು ಪ್ರೀತಿಯಿಂದ ಸ್ವಾಗತಿಸುತ್ತಾನೆ. ಹುಡುಗಿಯ ಕೈಯಲ್ಲಿನ ಗಾಜಿನ ಬಳೆಗಳು ರೊಟ್ಟಿ ತಟ್ಟುವಾಗ ಗಲ್ ಗಲ್ ಎಂದು ಸದ್ದು ಮಾಡುತ್ತಿದ್ದವು. ಈ ಹೊಸ ಶಬ್ದ ಮರಗಳ ಶ ಶ ಶಬ್ದಕ್ಕಿಂತ ವಿಭಿನ್ನವಾಗಿತ್ತು. ಅಪರಿಚಿತವೂ ಆಗಿತ್ತು. ಈ ಹೊಸ ಅಪರಿಚಿತ ದನಿ ಆ ಗುಡಿಸಲಿಗೆ ಬೇಕಾಗಿತ್ತು. ಅವರಿಬ್ಬರ ಮನ ಇನ್ನಷ್ಟು ತಣಿಸಲು ಈ ನಿನಾದ ಗೋಚರಿಸುತ್ತಿತ್ತು.

'ಆ ಇನ್ನೊಬ್ಬರು' ಕತೆಯಲ್ಲಿ ತಂದೆಯನ್ನು ಕಳೆದುಕೊಂಡ ಮಗಳು ತುಂಬ ದಿನಗಳ ಮೇಲೆ ಪ್ರೀತಿಯಿಂದ ಇನ್ನೊಬ್ಬರನ್ನು ತಂದೆಯಾಗಿ ಒಪ್ಪಿರುತ್ತಾಳೆ. ಆ ಇನ್ನೊಬ್ಬ ತಂದೆಗೂ ಕನೂಳ ತಾಯಿ ಯೆಂದರೆ ಇಷ್ಟವೇ ಇರುತ್ತದೆ. ಆದರೆ ವಿಧವೆ ತಾಯಿ ಒಬ್ಬ ಅಧಿಕಾರಿಯನ್ನು ಗಂಡನಾಗಿ ಪಡೆಯುವ ಅನಿವಾರ್ಯತೆ ಬರುತ್ತದೆ. ಈ ಅನಿವಾರ್ಯತೆ ಮಗಳಿಗೆ ಇರುವುದಿಲ್ಲ. ವಯಸ್ಸಿನಲ್ಲಿ ಚಿಕ್ಕವಳಾದ ಕನ್ನೂಳು ಆ ಅಧಿಕಾರಿಯನ್ನು ಅಪ್ಪನಾಗಿ ಒಪ್ಪುವುದಿಲ್ಲ. ತಂದೆಯ ಪ್ರೀತಿ ಅವಳಿಗೆ ಶ್ರೀಕೃಷ್ಣನಲ್ಲಿ ದೊರಕುತ್ತದೆ. ಶ್ರೀಕೃಷ್ಣ ಅಂಕಲ್ ತಂದೆಯಾಗಿ ಎಲ್ಲಾ ಕೆಲಸಗಳನ್ನು ನಿರ್ವಹಿಸುತ್ತಾನೆ. 'ಮಾರನೇ ದಿನ ಕೃಷ್ಣನ ತೊಡೆಯ ಮೇಲೆ ಕುಳಿತುಕೊಂಡು ಕನೂ ಮೆಲುದನಿಯಲ್ಲಿ ಕೇಳಿದಳು. ಅಂಕಲ್! ನೀವು ಈಗ ನನ್ನ ಪಪ್ಪ ಅಲ್ಲವಾ?'[೧೨]

ತಾಯಿಯ ಅಂತರಂಗದಲ್ಲಿ ಕೃಷ್ಣನ ಬಗ್ಗೆ ಒಲವಿದ್ದರೂ ಅದು ತೋರಗೊಡುವುದೇ ಇಲ್ಲ. ಗಂಡ ಸತ್ತ ನಂತರ ಅವಳ ನೋವು ಶಾಶ್ವತವಾಗಿ ಬದುಕಿನ ಎಲ್ಲಾ ಸಂತೋಷಗಳಿಗೆ ತೆರೆಯನ್ನು ಎಳೆ ಯುತ್ತದೆ. ಅವಳ ಗಂಡ ಜೀವಂತವಾಗಿದ್ದಾಗಿನ ದಿನಗಳ ಸುಗಂಧ ಅವಳ ನಾಸಿಕಕ್ಕೆ ಬಡಿಯುತ್ತಿರುತ್ತದೆ. ಶ್ರೀಕೃಷ್ಣನಲ್ಲಿ ಅವಳ ಮನಸ್ಸಿದ್ದರೂ ಅದು ತೋರಗೊಡುವುದೇ ಇಲ್ಲ. 'ಶ್ರೀ ಕೃಷ್ಣನಿಗೆ ಚಹಾ ತಯಾರಿಸತೊಡಗಿದಳು. ನೀರಿನ ಹಾಗೆ ಅವಳ ಅಂತರಂಗವೂ ಕುದಿ ಯತೊಡಗಿತು. ಸಾವಿನ ದುಃಖ ವನ್ನು ಕೆಲವರು ಒಂದು ದಿನ ಹಂಚಿಕೊಂಡರೆ, ಇನ್ನು ಕೆಲವರು ಹತ್ತು ದಿನ ಹಂಚಿಕೊಂಡಾರು. ಆದರೆ ಅಷ್ಟೆಲ್ಲಾ ದಿನ ಕಳೆದ ಮೇಲೆ ಯಾರು ಕೇಳ್ತಾರೆ. ಈ ಶ್ರೀಕೃಷ್ಣ ನಮಗೆ ಏನೂ ಆಗಬೇಕಾದ್ದಿಲ್ಲ. ಕೇವಲ ಸತ್ತವನ ಸ್ನೇಹಿತ ಅಷ್ಟೇ. ಇವನೇ ಇದುವರೆಗೂ ನಮ್ಮನ್ನೆಲ್ಲಾ ವಿಚಾರಿಸಿಕೊಳ್ಳುತ್ತಾ ಇದ್ದಾನೆ. ಆಗಲೇ ಕುದಿಯುತ್ತಿರುವ ನೀರಿನಿಂದ ಹೊರಗೆ ಹಾರಿ ಬಿದ್ದ ಹನಿಯಂತೆ – 'ಆದರೆ ಎಲ್ಲಿಯವರೆಗೆ' ಎಂಬ ವಿಚಾರ ಮನಸ್ಸಿನಲ್ಲಿ ಸುಳಿಯಿತು.'[೧೩] ಕನೂ, ಶ್ರೀ ಕೃಷ್ಣ ತಮ್ಮ ಜೀವನವನ್ನು ತಮ್ಮಷ್ಟಕ್ಕೇ ಬದುಕಲು ಸೋತರು.

'ರಂಧ್ರಗಳು' ಕತೆಯಲ್ಲಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹೃದಯಗಳಲ್ಲಿ ರಂಧ್ರ ಗಳಾಗಿರುವುದನ್ನು ನೋಡಬಹುದಾಗಿದೆ. ಶೀನಾ ತನ್ನ ಎದೆಯಲ್ಲೊಂದು ರಂಧ್ರವನ್ನು ಅಡಗಿಸಿ ಕೊಂಡಿದ್ದಾಳೆ. ಶ್ರೀಮತಿ ಕಪೂರ್‌ಗೂ ಮಾನಸಿಕವಾಗಿ ದೇಹದಲ್ಲಿ ದೊಡ್ಡ ರಂಧ್ರಗಳಾಗಿವೆ. ಇನ್ನು ಶೀನಾಳ ಪತಿಗೆ ದೈಹಿಕವಾಗಿ ಹೃದಯದ ರಂಧ್ರ ದೊಡ್ಡದಾಗುತ್ತಾ ಹೋಗುತ್ತದೆ. ಈ ರಂಧ್ರದ ಮೂಲಕ ಅವನ ಆಯಸ್ಸು ಸೋರಿ ಹೋಗುತ್ತಿದೆ. ಸಾವು ತನ್ನ ಮನೆಯ ವಿಳಾಸವನ್ನು ಕೇಳುತ್ತಿದೆ. ಮೃತ್ಯು ಗಂಡನಿಗಾಗಿ ಅವಸರ ಮಾಡುತ್ತಿದೆ. ಶೀನಾಳ ಮೌನ ಅವಳು ತನಗೆ ತಾನು ವಿಧಿಸಿಕೊಳ್ಳುತ್ತಿರುವ ನೋವಿನ ಸರ ಮಾಲೆ. ವೀರೇಂದ್ರನ ಸಣ್ಣ ಅಂಶ ತನ್ನ ಗರ್ಭದಲ್ಲಿ ಧರಿಸಬೇಕೆಂಬ ಆಸೆ, ಕಣ್ಣೆದುರೇ ಆಗುತ್ತದೆ ಎಂದು ಅವಳು ಮಾನಸಿಕವಾಗಿ ಸಿದ್ಧವಾಗಿದ್ದಾಳೆ. ತನ್ನ ಎದೆಯಲ್ಲಿನ ಸಣ್ಣ ರಂಧ್ರ ದಿನದಿಂದ ದಿನಕ್ಕೆ ದೊಡ್ಡ ದಾಗುತ್ತಿರುತ್ತದೆ. 'ವೀರೇಂದ್ರನ ಸಣ್ಣ ಅಂಶವನ್ನು ತನ್ನ ಗರ್ಭದಲ್ಲಿ ಧರಿಸಬೇಕೆಂದು ಶೀನಾಳ ಮನಸ್ಸು ಆಶಿಸುತ್ತಿತ್ತು. ಆದರೆ ಈಗಂತೂ ತೀರಾ ತಡವಾಗಿತ್ತು. ಈಗಂತು ವೀರೇಂದ್ರ ಮದುವೆ ಆಗದೇ ಇದ್ದಿದ್ದರೆ ತುಂಬಾ ಚೆನ್ನಾಗಿರುತ್ತಿತ್ತು ಎಂದು ಡಾಕ್ಟರ್ ಹೇಳಿಬಿಟ್ಟಿದ್ದರು. ಇಂಥ ಹೃದ್ರೋಗಿಗೆ ಶರೀರ ಸ್ವಲ್ಪ ಉದ್ರಿಕ್ತ ಗೊಂಡರೂ ಅದೇ ಮೃತ್ಯುವಿನ ಆಘಾತವಾಗಿಬಿಡಬಹುದು. ಶೀನಾ ಎಚ್ಚೆತ್ತಿರುವ ವೀರೇಂದ್ರನನ್ನು ನಿಟ್ಟಿಸಿ ನೋಡುವು ದಷ್ಟೆ ಅಲ್ಲದೇ, ನಿದ್ರಿಸುತ್ತಿರುವ ವೀರೇಂದ್ರನನ್ನೂ ನಿಟ್ಟಿಸಿ ನೋಡುತ್ತಿದ್ದಳು.'[೧೪]

ಇದು ಶೀನಾಳ ವ್ಯಥೆಯಾದರೆ ಶ್ರೀಮತಿ ಕಪೂರಳದ್ದು, ಇನ್ನೊಂದು ರೀತಿಯ ಸಮಸ್ಯೆ ಯಾಗಿದೆ. ತನ್ನ ಗಂಡ ಹಲವಾರು ಸ್ತ್ರೀಯರ ಸಂಗ ಬೆಳೆಸಿರುವುದು, ತಡವಾಗಿ ಬರುವುದು, ಜಗಳ ವಾಡುವುದು, ಹೊಡೆಯುವುದು, ಅವಳಿಗೆ ರೂಢಿಯಾಗಿದೆ. ಈ ರೀತಿಯ ಸಮಸ್ಯೆಯಿಂದ ವ್ಯಥೆಪಡು ತ್ತಿದ್ದರೂ ಶೀನಾ ಎಷ್ಟು ಅದೃಷ್ಟವಂತೆ. ಅವಳ ಗಂಡ ಅವಳನ್ನು ಬಿಟ್ಟು ಬೇರೆಲ್ಲೂ ಹೋಗುವುದಿಲ್ಲ ಎಂದು ಯೋಚನೆ ಮಾಡುತ್ತಿರುತ್ತಾಳೆ.

ಇಬ್ಬರೂ ಹೆಣ್ಣಿನ ಮನಸ್ಥಿತಿಯನ್ನು ಬಹಳ ಸೂಕ್ಷ್ಮವಾಗಿ ಲೇಖಕಿ ಚಿತ್ರಿಸಿದ್ದಾರೆ. ಅವರವರ ನೋವಿಗಿಂತ ಇನ್ನೊಬ್ಬರ ಸ್ಥಿತಿಗೆ ಸಂತೋಷ ಪಡುತ್ತಿರುತ್ತಾರೆ. ತನಗಿಂತ ಅವರ ಬಾಳೇ ಚೆನ್ನಾಗಿದೆ ಎಂದು ತೋರುವ ಮನಸ್ಥಿತಿ ಇಬ್ಬರಲ್ಲೂ ಇದೆ. ಮನಸ್ಸಿನ ರಂಧ್ರವನ್ನು ಇಬ್ಬರೂ ಪರಸ್ಪರ ಹಂಚಿ ಕೊಳ್ಳುತ್ತಾರೆ. "ಈ ಹೆಣ್ಣು ಎಷ್ಟೊಂದು ಅದೃಷ್ಟಶಾಲಿ! ಇವಳ ಗಂಡ ತನ್ನ ಕೊನೆಯ ಉಸಿರಿನವರೆಗೂ ಇವಳ ಪತಿಯೇ ಆಗಿರುತ್ತಾನೆ. ಅವನು ಸತ್ತರೂ ಇವಳ ಪಾಲಿಗೆ ಬದುಕಿಯೇ ಇರುತ್ತಾನೆ. ಈಕೆ ಅವನ ಒಂದೊಂದು ನೆನಪಲ್ಲೂ ಮತ್ತೆ ಬದುಕುತ್ತಾಳೆ. ಅವನು ಹಾಕಿದ ಗಿಡಗಳಲ್ಲಿ ಹೂವು ಮೂಡಿದಾಗ ಇವಳಿಗೆ ಪ್ರತಿ ಎಲೆಯಲ್ಲೂ ಪ್ರತಿಯೊಂದು ಬಣ್ಣದಲ್ಲೂ ತನ್ನ ಪತಿಯ ಸುವಾಸನೆ ತೇಲಿ ಬರುತ್ತದೆ. ಕಣ್ಣು ತುಂಬ ನೀರು ತುಂಬಿಕೊಂಡು ಶೀನಾ, ಹೋಗುತ್ತಿರುವ ಶ್ರೀಮತಿ ಕಪೂರಳ ಬೆನ್ನಿನ ಕಡೆ

ನೋಡುತ್ತ 'ನನಗಿಂತಲೂ ಈಕೆಯ ಅದೃಷ್ಟ ತುಂಬ ಚೆನ್ನಾಗಿದೆ. ಈಕೆಯ ಗಂಡ ಮನೆಗೆ ವಾಪಸ್ ಬಂದಾಗ ಅವನೊಂದಿಗೆ ಜಗಳವಾಡಬಹುದು. ಅವನೆದುರು ಅಳಬಹುದು. ಆದರೆ ನಾನು ಯಾರ ಜೊತೆ ಜಗಳ ಆಡಲಿ? ಯಾರ ಮುಂದೆ ಅಳಲಿ?' ಎಂದು ಕೊಂಡಳು."[೧೫] ಒಬ್ಬರ ಅದೃಷ್ಟ ಇನ್ನೊಬ್ಬರ ಅದೃಷ್ಟಕ್ಕಿಂತ ಪ್ರಬಲವಾಗಿದೆ ಎಂದು ನಂಬಿರುವ ಈ ಮಹಿಳೆಯರು ತಮ್ಮ ನೋವನ್ನು ತೋರಿಸುವ ಪರಿ ಇದಾಗಿದೆ.

'ಋಣ' ಇಬ್ಬರು ಅಕ್ಕ ತಂಗಿಯರ ಕಥೆಯಾಗಿದೆ. ಜೀವನದಲ್ಲಿ ಎಲ್ಲಾ ನೋವುಗಳನ್ನು ಸಮನಾಗಿ ಅನುಭವಿಸಿರುವ ಅಕ್ಕ ತಂಗಿಯರು ಮೂರ್ತಿ ಹಾಗೂ ರುಕ್ಮಿ ಎರಡು ದೇಹ ಒಂದೇ ಮನಸ್ಸಿನಂತೆ ಇರುತ್ತಾರೆ. 'ದೇಹ ಮನಸ್ಸುಗಳಲ್ಲಿ ಎಷ್ಟು ಮಹಾ ವ್ಯತ್ಯಾಸ ಇರುತ್ತೆ ಸಾಹೇಬರೇ? ಇಷ್ಟಂತೂ ತಿಳಿದುಕೊಳ್ಳಿ. ಮನಸ್ಸು ಮಾತ್ರ ಅವಳದ್ದಾಗಿತ್ತು. ನನ್ನದಾಗಿರಲಿಲ್ಲ. ದೇಹ ಮಾತ್ರ ನನ್ನದಾಗಿತ್ತು.'[೧೬]

ವೈವಾಹಿಕ ಜೀವನಕ್ಕೆ ನಾಂದಿ ಹಾಡಿ ಸ್ವತಂತ್ರವಾಗಿ ತಮ್ಮ ಬದುಕನ್ನು ರೂಪಿಸಿ ಕೊಳ್ಳುತ್ತಿರುವ ಮಹಿಳೆಯರು ಇವರು. ಒಬ್ಬರಿಗೊಬ್ಬರು ಆಸರೆಯಾಗಿರುವ ಇವರು ಒಬ್ಬ ಮಗ ನಿಗೆ ಇಬ್ಬರು ತಾಯಿಯಾಗಿ ಇರುತ್ತಾರೆ. ಮಸಾಲೆ ಟೀ ಮಾರಿಕೊಂಡು ಜೀವನ ಸಾಗುತ್ತಿರುವ ಇವರಿಗೆ ರಾಜ್ ಬಕ್ಷಿಯ ಪರಿಚಯವಾಗುತ್ತದೆ. ಈಗಾಗಲೇ ನೊಂದಿರುವ ರಾಜ್ ಬಕ್ಷಿಗೆ ಮೂರ್ತಿಯು ಕಂಚಿನ ಮೂರ್ತಿಯಂತೆ ಗೋಚರಿಸುತ್ತಾಳೆ. ತನ್ನ ಇಷ್ಟು ದಿನದ ಬದುಕಿಗೆ ಸಾಥ್ ನೀಡಿದ ರುಕ್ಮಿಗೆ ಮೂರ್ತಿ ಋಣ ತೀರಿಸುವುದಿದೆ. ಹಾಗೆಯೇ ತನ್ನ ಅಣ್ಣನಿಗೆ ರಾಜ್ ಬಕ್ಷಿಯು ಋಣ ತೀರಿಸುವುದಿದೆ. ರಾಜ್ ಬಕ್ಷಿ ಮದುವೆಯ ಪ್ರಸ್ತಾಪ ಮಾಡಿದಾಗ ಮೂರ್ತಿ ತನ್ನ ಜೊತೆ ತನ್ನ ಅಕ್ಕ ರುಕ್ಮಿಯನ್ನು ಮದುವೆ ಆಗಬೇಕೆಂದು, ತಾವಿಬ್ಬರೂ ಬೇರೆ ಇರಲು ಸಾಧ್ಯವಿಲ್ಲವೆಂದು ಹೇಳುತ್ತಾಳೆ. ಇದು ವಿಶೇಷವಾಗಿ ಗೋಚರಿಸುವ ಘಟನೆ. ಏನನ್ನು ಹಂಚಿಕೊಂಡರೂ ಗಂಡನನ್ನು ಹಂಚಿಕೊಳ್ಳಲು ಒಪ್ಪದ ಸ್ತ್ರೀಯರ ಮಧ್ಯೆ ಮೂರ್ತಿ ಮತ್ತು ರುಕ್ಮಿ ವಿಶೇಷವಾಗಿ ಕಾಣಿಸುತ್ತಾರೆ. ಲೇಖಕಿ ಸ್ತ್ರೀಯರನ್ನು ವಿಭಿನ್ನ ವ್ಯಕ್ತಿತ್ವಗಳ ಜೊತೆ ವಿಶೇಷ ಪಾತ್ರಗಳಾಗಿ ಚಿತ್ರಿಸಿರುವುದು ಮತ್ತೊಂದು ವಿಶೇಷ. ಮೂರ್ತಿಯ ಮಾತನ್ನು ರಾಜ್ ಬಕ್ಷಿ ಒಪ್ಪಲೇಬೇಕಾಗುತ್ತದೆ. 'ಬಾ ಮೂರ್ತಿ ನಾವಿಬ್ಬರೂ ನಮ್ಮ ನಮ್ಮ ಋಣಭಾರವನ್ನು ಇಳಿಸಿಕೊಳ್ಳೋಣ.'[೧೭] ಬರಿಯ ಹೆಣ್ಣಿಗೆ ಮಾತ್ರ ನೋವಲ್ಲ, ಗಂಡಿಗೂ ನೋವಿದೆ ಎಂದು ತೋರಿಸಿಕೊಟ್ಟಿರುವ ಈ ಕಥೆಯು ವಿಶೇಷವಾಗಿದೆ.

'ಧನ್ನೋ' ಕಥೆಯು ನಾಯಕಿಯ ಹೆಸರಿನ ಮೇಲೆ ನಿಂತಿದೆ. ಧನ್ನೋ ಧೈರ್ಯಕ್ಕೆ ಮತ್ತೊಂದು ಹೆಸರಾಗಿರುವ ಹೆಣ್ಣಾಗಿದ್ದಾಳೆ. ಊರಿನ ಹೆಂಗಸರು ಧನ್ನೋಳದ್ದು ಹರಕು ಬಾಯಿ ಎಂದು ಹೇಳುತ್ತಿರುತ್ತಾರೆ. ಧನ್ನೋಳನ್ನು ಯಾರಾದರೂ ಕೆಣಕಿದರೆ ಅವಳು ಗಂಡಸು, ಹೆಂಗಸು ಎಂದು ನೋಡುತ್ತಿರಲಿಲ್ಲ. ಅವರ ಬದುಕನ್ನು ಜಾಲಾಡಿ ಬಿಡುತ್ತಿದ್ದಳು. ಧನ್ನೋ ಛಾತಿವಂತ ಹೆಣ್ಣಾಗಿ ಬದುಕು

ಸಾಗಿಸಿದ್ದಳು. ಅವಳಿಗೆ ವಯಸ್ಸಾಗುತ್ತಿತ್ತು. ತನ್ನ ಮನೆ ಹೊಲಗದ್ದೆಗಳನ್ನು ಅವಳೇ ನೋಡಿಕೊಳ್ಳುತ್ತಿದ್ದಳು. ಒಂಟಿ ಜೀವನಕ್ಕೆ ಒಗ್ಗಿ ಹೋಗಿದ್ದ ಅವಳಿಗೆ ಯಾವುದಕ್ಕೂ ಭಯವಿರಲಿಲ್ಲ. ಊರಿನ ಗಂಡಸು ಏನಾದರೂ ಕೆಣಕಿದರೆ ಸಿಡಿದೇಳುತ್ತಿದ್ದಳು. 'ಆಗತಾನೆ ಮೀಸೆ ಮೂಡುತ್ತಿದ್ದ ಹೈದನೊಬ್ಬ ಅವಳ ತೋಳಿನ ಮೇಲೆ ಲಟಿಕೆ ಮುರಿದು ನಿನ್ನ ಧೇಲಿ (ಎಂಟಾಣೆ) ತೋರಿಸು, ಅದೆಷ್ಟು ಸಾಚಾ ಅಂತ ನೋಡ್ತೀನಿ ಎಂದು ಹೇಳಿದಾಗ, ಧನ್ನೋ ಅವನ ಕುತ್ತಿಗೆ ಹಿಡಿದು – ನಡಿ ತೋರುಸ್ತೀನಿ ನಿಮ್ಮ ಅಮ್ಮನ ಲಂಗದಲ್ಲಿದೆ ಎಂದು ಹೇಳಿದ್ದಳು. ಆ ಘಟನೆಯ ನಂತರ ಊರಿನ ಯಾವ ಗಂಡಸಿಗೂ ಧನ್ನೋಳತ್ತ ತಲೆ ಎತ್ತಿ ನೋಡುವ ತಾಕತ್ತಿರಲಿಲ್ಲ.'[೧೮] ಈ ರೀತಿಯ ಗಡಸು ಮಾತುಗಳಿಂದ ನಿರ್ಭಯವಾಗಿ ಬದುಕುತ್ತಿದ್ದ ಧನ್ನೋ ವಾಯಿದೆ ಜ್ವರದಿಂದ ತೀರಿಕೊಳ್ಳುತ್ತಾಳೆ. ಅವಳ ಸಾವಿನ ನಂತರ ಅವಳ ಬಳಿ ಇರುವ ಆಸ್ತಿ ಯಾರ ಹೆಸರಿನಲ್ಲಿದೆ ಎಂದು ಊರಿನ ಜನಕ್ಕೆ ಕುತೂಹಲ. ಊರಿನ ಜನರೊಂದಿಗೆ ಅಷ್ಟೇನೂ ಒಳ್ಳೇಯವಳಾಗಿರದ ಧನ್ನೋ ಹೆಣ್ಣು ಮಕ್ಕಳು ಶಾಲೆಗೆ ಸೇರಬೇಕು. ನಾಲ್ಕು ಅಕ್ಷರ ಕಲಿಯಬೇಕೆಂಬ ಮಹತ್ತರ ಆಸೆಯನ್ನು ಇಟ್ಟುಕೊಂಡಿರುತ್ತಾಳೆ. ಧನ್ನೋ ಊರಿನ ಜನರ ಮಧ್ಯೆ ಯಾವತ್ತೂ ಧನ್ನೋ ಆಗಿರಲಿಲ್ಲ. ಮುಖವಾಡ ಧರಿಸಿರುವ ಧನ್ನೋ ಆಗಿರುತ್ತಾಳೆ. ಆದರೆ ಊರಿನ ಜನಕ್ಕೆ ಬರೆದ ಪತ್ರದಲ್ಲಿ ನಿಜವಾದ ಧನ್ನೋ ಕಾಣಿಸುತ್ತಾಳೆ. 'ಧನ್ನೋಳ ನಾಲ್ಕನೆಯ ತಿಥಿಯ ನಂತರ ಊರಿನ ಜನ ಅವಳ ಪೆಟ್ಟಿಗೆಯನ್ನು ತೆರೆದಾಗ, ಅವರಿಗೆ ಧನ್ನೋಳ ವಿಲ್ಲು ಪತ್ರ ಸಿಕ್ಕಿತು. ಧನ್ನೋ ತನ್ನ ಜಮೀನನ್ನು ಊರಿನ ಶಾಲೆಯ ಹೆಸರಿಗೆ ಮಾಡಿದ್ದಳು ಮತ್ತು ಅದರಲ್ಲಿ ಬರೆಸಿದ್ದಳು – ನನ್ನ ಒಂದು ಆಸೆ ಏನೆಂದರೆ ಹುಡುಗಿಯ ಕಿವಿಗೂ ನಾಲ್ಕಕ್ಷರ ಬಿದ್ದಿತು ಅಂದರೆ, ಅವಳ ಬದುಕು ಹಾಳಾಗಲ್ಲ.'[೧೯] ಊರಿನ ಜನಗಳಿಂದ ಅವಳು ಅಷ್ಟೊಂದು ಗಡುಸಾಗಿ ದಿಟ್ಟವಾಗಿ ವರ್ತಿಸಿರುತ್ತಾಳೆ. ಅವಳ ನಿಜವಾದ ವ್ಯಕ್ತಿತ್ವ ಅವಳ ಪತ್ರದಿಂದ ಗೊತ್ತಾಗುತ್ತದೆ. ಅಲ್ಲಿಯವರೆಗೂ ಊರಿನ ಜನಕ್ಕೆ ಧನ್ನೋ ಎಂದರೆ ಹಿಡಿಸುತ್ತಿರಲಿಲ್ಲ. ಈ ಘಟನೆಯ ನಂತರ ಧನ್ನೋ ಆದರ್ಶವಾಗಿ ಕಾಣಿಸುತ್ತಾಳೆ.

ಅಮೃತಾ ಪ್ರೀತಂ ಅವರ ಆಯ್ದ ಕಥೆಗಳನ್ನು ನೋಡಿದ ಮೇಲೆ ಅವರ ಕಾದಂಬರಿ ಪಿಂಜರ್‌ನ ಒಂದು ನೋಟ ಬೇಕೇಬೇಕು. ಪಿಂಜರ್ ಕಾದಂಬರಿ ೧೯೪೭ರಲ್ಲಿ ದೇಶವಿಭಜನೆಯ ಸಂದರ್ಭದಲ್ಲಿ ಸಂತ್ರಸ್ತರಾದ ಜನರ, ಅದರಲ್ಲೂ ಹಿಂದೂ, ಮುಸ್ಲಿಂ ಸ್ತ್ರೀಯರು ಅನುಭವಿಸಿದ ಶೋಷಣೆಯ ವಾಸ್ತವ ಚಿತ್ರಣ ನೀಡುವ ಕಾದಂಬರಿ. ಸ್ವಂತಿಕೆಗೆ ಅವಕಾಶವೇ ಇಲ್ಲದಂತೆ ಕೈ ಮೇಲೆ ತಮ್ಮ ಹೆಸರಿನ ಹಚ್ಚೆ ಹಾಕಿಸಿಕೊಂಡು ಕೇವಲ ಅಸ್ಥಿಪಂಜರಗಳಾಗಿ ಬದುಕು ಸಾಗಿಸುತ್ತಿದ್ದ ಹಮೀದಾ, ಲಾಜೋ ಮುಂತಾದ ವರ ಕಥೆ.

ಹೆಣ್ಣು ಗಂಡಿನ ಅಧೀನದಲ್ಲೇ ಇರಬೇಕು. ಇದು ಅವಳಿಗೆ ಇಷ್ಟ ಇರುವುದೋ, ಇಲ್ಲವೋ ತಿಳಿದುಕೊಳ್ಳಬಯಸುವವರು ಯಾರು? ಕಾದಂಬರಿಯಲ್ಲಿ ನಾಯಕಿಗೆ ಇಷ್ಟವಿಲ್ಲದ ಎಷ್ಟೋ ಘಟನೆಗಳು ನಡೆಯುತ್ತವೆ. ಮೌನದಿಂದ ಅವಳು ಎಲ್ಲವನ್ನು ಸಹಿಸಿಕೊಳ್ಳಬೇಕಾದ ಅನಿವಾರ್ಯತೆ ಏರ್ಪಡುತ್ತದೆ. ಪುರೋಳನ್ನು ರಶಿದ ಅಪಹರಿಸಿರುತ್ತಾನೆ. ಹದಿನೈದು ದಿನಗಳು ತನ್ನ ಬಂಧನದಲ್ಲೇ ಇಟ್ಟುಕೊಂಡಿರುತ್ತಾನೆ. ನಂತರ ಪುರೋ ಅವನಿಂದ ತಪ್ಪಿಸಿಕೊಂಡು ತವರಿಗೆ ಮರಳಿದರೂ ಅವಳನ್ನು ಸ್ವಾಗತಿಸಲು ಯಾರೂ ಬರುವುದಿಲ್ಲ. ತವರಿಗೆ ಅವಳನ್ನ ಸೇರಿಸುವುದಿಲ್ಲ. ಅವಳು ಅನಿವಾರ್ಯವಾಗಿ ರಶೀದನ ಹಿಂದೆಯೇ ಹೋಗಬೇಕಾಗುತ್ತದೆ. ತನ್ನದಲ್ಲದ ತಪ್ಪಿಗೆ ಅವಳ ಇಷ್ಟದ ಬದುಕನ್ನು ಅವಳು ತ್ಯಜಿಸಬೇಕಾಗುತ್ತದೆ. ಪುರೋ ರಶೀದನ ಜೊತೆಯಲ್ಲಿ ಹಮೀದಾ ಆಗಿ ಮಾರ್ಪಡುತ್ತಾಳೆ. ರಶೀದನ ಅಪ್ಪಣೆಯ ಮೇರೆಗೆ ಅವಳ ಕೈ ಮೇಲೆ ಹಚ್ಚೆ ಮೂಡುತ್ತದೆ. ಪುರೋ ತನ್ನ ಸ್ವಂತಿಕೆಯನ್ನು ಕಳಚಿ ಹಮೀದಾ ಆಗುತ್ತಾಳೆ. ಅವಳ ಇಚ್ಚೆಯ ವಿರುದ್ಧವಾಗಿ ರಶೀದನ ಮಗುವಿಗೆ ತಾಯಿಯೂ ಆಗುತ್ತಾಳೆ. ಅವಳು ಊಹಿಸದ ಬದುಕು ಅವಳದ್ದಾಗುತ್ತಾ ಹೋಗುತ್ತದೆ. ಆ ಬದುಕಿಗೆ ತಕ್ಕಂತೆ ಅವಳು ಬದುಕಿನ ಜೊತೆ ಹೊಂದಾಣಿಕೆ ಯನ್ನು ಮಾಡಿ ಕೊಂಡು ಹೋಗುತ್ತಿರುತ್ತಾಳೆ.

ಕಾದಂಬರಿಯಲ್ಲಿ ತಾರೋಳ ಪಾತ್ರವೂ ಪುರೋಳಂತೆಯೇ ಇದೆ. ಇನ್ನೊಂದು ಹೆಣ್ಣಿನ ಮಾನಸಿಕ ಹಿಂಸೆಯ ವ್ಯಥೆಯದು. ತಾರೋ ಗಂಡನ ಮನೆಗೆ ಹೋಗಬೇಕು ಎನ್ನುವಾಗಲೆಲ್ಲಾ ಮೂರ್ಛೆ ರೋಗ ಅವಳನ್ನು ಆವರಿಸುತ್ತಿರುತ್ತದೆ. ಇದು ಆಶ್ಚರ್ಯವಾದರೂ ಇದನ್ನು ತಿಳಿಯಬೇಕೆಂದು ಹಮೀದಾ ಪ್ರಯತ್ನ ಪಡುತ್ತಾಳೆ. ಹಿಂದೆ ಮುಂದೆ ವಿಚಾರಿಸದೇ ಹೆಣ್ಣನ್ನು ಧಾರೆಯೆರೆದು ಕೊಡುತ್ತಾರಲ್ಲ ಆ ತಂದೆ ತಾಯಿಗಳೇ ಮಗಳ ಶತ್ರುಗಳಾಗುತ್ತಾರೆ. 'ಅಪ್ಪ ಅಮ್ಮ ಮಗಳನ್ನು ಮದುವೆ ಮಾಡಿ ಕಳುಹಿಸುವಾಗ ಅವಳ ಕೊರಳಿಗೆ ಉರುಳೊಂದನ್ನು ಹಾಕಿ ಆ ಹಗ್ಗದ ತುದಿಯನ್ನು ತಮಗಿಷ್ಟ ಬಂದ ವ್ಯಕ್ತಿಗೆ ಕೊಡುತ್ತಾರೆ.'[೨೦] ತಾರೋಳ ದಾಂಪತ್ಯ ಸರಿಯಿಲ್ಲದಿದ್ದರೂ ಅವಳು ಗಂಡನ ಜೊತೆ ಇರಬೇಕೆಂದು ಬಯಸಿದವಳಲ್ಲ. ದಿಟ್ಟವಾಗಿ ಅಲ್ಲಿಂದ ಹೊರ ಬಂದ ಸ್ವತಂತ್ರ ಹೆಣ್ಣಾಗಿರುತ್ತಾಳೆ. 'ಪೂರ್ತಿ ಎರಡು ವರ್ಷ ತನ್ನ ದೇಹವನ್ನು ಒಂದು ಹಿಡಿ ಅನ್ನ ಎರಡು ಜೊತೆ ಬಟ್ಟೆಗಾಗಿ ಮಾರಿಕೊಂಡೆ. ಒಬ್ಬ ವೇಶ್ಯೆ, ಬೀದಿಸೂಳೆಯಂತೆ' ತಾರೋ ಮುಷ್ಟಿ ಬಿಗಿದಳು. ಅವಳ ಕಣ್ಣುಗುಡ್ಡೆಗಳು ಗಿರಿ ಗಿರ ತಿರುಗಿ, ದೇಹ ಬಿಲ್ಲಿನಂತೆ ಸೆಟೆದು, ಪ್ರಜ್ಞೆತಪ್ಪಿ ಬಿದ್ದು ಬಿಟ್ಟಳು.'[೨೧]

ಹಮೀದಾ, ತಾರೋಳಂತೆ ಗಂಡಿನ ದೌರ್ಜನ್ಯಕ್ಕೆ ಬಲಿಯಾದವಳು. ಮೈ ಮೇಲೆ ಪ್ರಜ್ಞೆಯಿರದ ಒಬ್ಬ ಹುಚ್ಚಿಯ ಮೇಲೆ ಯಾರೋ ಅತ್ಯಾಚಾರ ಮಾಡುತ್ತಾರೆ. ಹುಚ್ಚಿ ಮಗುವನ್ನು ಹೆತ್ತು ಸಾಯುತ್ತಾಳೆ. ಆ ಮಗುವನ್ನು ಹಮೀದಾ ಮನೆಗೆ ತಂದು ಸಾಕುತ್ತಾಳೆ. ಆದರೆ ಈ ವಿಷಯ ಊರಲ್ಲಿ ಹಿಂದು -

ಮುಸ್ಲಿಂರ ವೈರಾಗ್ಯಕ್ಕೆ ಮತ್ತಷ್ಟು ಇಂಬು ಕೊಡುತ್ತದೆ. 'ಒಂದು ಚಿಕ್ಕ ಬೆರಣಿ ಚೂರಿಗೆ ತಾಗಿದ ಬೆಂಕಿಯಿಂದ ದೊಡ್ಡ ಬಣವೆ ಹತ್ತಿಕೊಂಡು ಉರಿಯುವಂತೆ ಒಂದು ಸುದ್ದಿ ಹಳ್ಳಿಯಲ್ಲಿ ಹಬ್ಬಿತು. ಆ ಹುಚ್ಚಿ ಹಿಂದೂ ಆಗಿದ್ದಳು. ಅವಳ ಮಗುವನ್ನು ಮುಸ್ಲಿಮರು ಅಪಹರಿಸಿದ್ದಾರೆ. ಹಿಂದೂಗಳ ಎದುರಿಗೆ ಹಿಂದೂ ಮಗುವೊಂದು ಮುಸ್ಲಿಂ ಆಗಿ ಪರಿವರ್ತನೆ ಆಗುತ್ತಿದೆ.'[೨೨] ಹಿಂದು ಮುಸ್ಲಿಂರ ಬೆಂಕಿಯಂಥ ಜಗಳದ ಮಧ್ಯೆ ಇನ್ನೊಂದು ಕೌಟುಂಬಿಕ ಸಂಘರ್ಷವು ಏರ್ಪಡುತ್ತದೆ. ಸ್ವತಃ ಹಮೀದಾಳ ತಮ್ಮ ರಶೀದನ ಗೋದಿ ಮೆದೆಗಳಿಗೆ ಹಳೆಯ ದ್ವೇಷಕ್ಕಾಗಿ ಬೆಂಕಿ ಇಟ್ಟಿರುತ್ತಾನೆ.

ಜನಾಂಗೀಯ ಕಲಹಗಳು ಹೇಗೆ ಶಾಂತವಾಗುವುದಿಲ್ಲವೋ, ಹಾಗೆಯೇ ಕೌಟುಂಬಿಕ ಕಲಹಗಳೂ ಶಾಂತವಾಗುವುದಿಲ್ಲ. ಒಂದು ವೇಳೆ ಸಂಘರ್ಷಗಳೇನು ನಡೆಯದಿದ್ದರೂ ಬೂದಿ ಮುಚ್ಚಿದ ಕೆಂಡದ ಹಾಗೆ ಒಳಗೊಳಗೆ ತಲ್ಲಣಗಳು, ಆಕ್ರೋಶಗಳು ಬುಸುಗುಡುತ್ತಿರುತ್ತವೆ. ಪಟ್ಟಣಗಳಲ್ಲಿ ನಡೆಯುತ್ತಿದ್ದ ಕ್ರೌರ್ಯಗಳನ್ನು ಕುರಿತು ಚಾತ್ತೋ ಜನರು ಮಾತನಾಡತೊಡಗಿದರು. ರಸ್ತೆಗಳಲ್ಲಿ ರಕ್ತದ ಓಕುಳಿ ಶುರುವಾಯಿತು. ಎಲ್ಲೆಂದರಲ್ಲಿ ಬಿದ್ದ ಹೆಣಗಳಿಗೆ ಸಂಸ್ಕಾರ ಮಾಡುವವರೂ ಯಾರು ಇರಲಿಲ್ಲ. ಕೊಳೆತ ಹೆಣಗಳಿಂದ ಸಾಂಕ್ರಾಮಿಕ ರೋಗಗಳು ಶುರು ವಾಯಿತು. ಹಿಂದೂ ಹುಡುಗಿಯರನ್ನು ಮುಸ್ಲಿಮರೂ, ಮುಸ್ಲಿಂ ಹುಡುಗಿಯರನ್ನು ಹಿಂದೂಗಳು ಅಪಹರಿಸುವ ವಿಷಯ ಮಾಮೂಲಾಯಿತು. ಈ ದೌರ್ಜನ್ಯಗಳನ್ನು ಹಮೀದಾ ಕಣ್ಣಾರೆ ಕಂಡು, ಕೊರಗಲು ಶುರುಮಾಡುತ್ತಾಳೆ. ಹೆಣ್ಣಾಗಿ ಹುಟ್ಟಿದ್ದಕ್ಕೆ ಅನುಭವಿಸಬೇಕಾದ ದೌರ್ಜನ್ಯಗಳನ್ನು ಕಂಡು ವ್ಯಥೆ ಪಡುತ್ತಾಳೆ. 'ಹೊಂಬಣ್ಣ ಕಾಳು ಬೆಳೆಯಲು ಭೂಮಿ ಮನುಷ್ಯ ರಕ್ತದಿಂದ ನೆನೆಯಲೇ ಬೇಕೆ? ಕೊಳೆತು ನಾರುವ ಹೆಣಗಳಿಂದ ಕಲುಷಿತವಾದ ಭೂಮಿಯಲ್ಲೇ ಸುಗಂಧಿತ ಜೋಳ ಬೆಳೆಯುವುದೇ? ಅವಮಾನಕ್ಕೆ ಒಳಗಾದ ಸೋದರಿಯರ ಹೊಟ್ಟೆಯಲ್ಲಿ ಜನಿಸಿದ ಮಕ್ಕಳೇ ದಾಳಿಕೋರರಿಗೆ ಆಹಾರವಾಗಬೇಕೆ?'[೨೩] ಇವುಗಳ ಮಧ್ಯೆ ಹಮೀದಾ ಲಾಜೋವನ್ನು ಹುಡುಕಬೇಕಾದ ಪ್ರಸಂಗ ಬರುತ್ತದೆ. ಲಾಜೋ ಸ್ವತಃ ಹಮೀದಾಳ ನಾದಿನಿ. ರಾಮ್ ಚಂದ್‌ನ ತಂಗಿ. ಪುರೋಳನ್ನು ಮದುವೆ ಆಗಬೇಕಿದ್ದ ಹುಡುಗ ಈ ರಾಮ್ ಚಂದ್. ಈಗ ಲಾಜೋನ ಎಲ್ಲಿ ಅಪಹರಿಸಿ ಅಡಗಿಸಿದ್ದಾರೆ ಎಂದು ತಿಳಿದುಕೊಳ್ಳುವ ಜವಾಬ್ದಾರಿ ಹಮೀದಾಳ ಮೇಲೆ ಇರುತ್ತದೆ. ಹಮೀದಾ ಲಾಜೋಳನ್ನು ಕಂಡು ಹಿಡಿಯುವುದರಲ್ಲಿ ಯಶಸ್ವಿಯಾಗುತ್ತಾಳೆ. ಈ ಇಬ್ಬರು ಸಂಬಂಧಿಕರ ದುಃಖಕ್ಕೆ ಗೋಡೆಗಳು ಮತ್ತು ಅವರ ಕಣ್ಣೀರು ಸಾಕ್ಷಿಗಳಾಗಿದ್ದವು. 'ಹಮೀದಾ ಹುಡುಗಿಯನ್ನು ಎದೆಗೆ ಅವುಚಿಕೊಳ್ಳುತ್ತಾ ನೀನು ಲಾಜೋ ನನ್ನ ನಾದಿನಿ ಎನ್ನುತ್ತಾ ಅತ್ತಳು. ಸಂಕಟದ ಅಲೆಯೊಂದು ಲಾಜೋಳ ಹೃದಯದಲ್ಲೂ ಎದ್ದಿತ್ತು. ದುಃಖದ ಕೂಗೊಂದು ಅವಳ ಗಂಟಲವರೆಗೆ ಉಬ್ಬಿ ಬಂದು ಮನೆಯ ಗೋಡೆಗಳನ್ನೆಲ್ಲ ದಾಟಿ ಊರಿಗೆಲ್ಲ ವ್ಯಾಪಿಸುವಂತೆನಿಸಿತು.'[೨೪] ಲಾಜೋಳನ್ನು ಹಮೀದಾ ಮನೆಗೆ ಕರೆದುಕೊಂಡು ಬಂದು ಬಚ್ಚಿಡುತ್ತಾಳೆ. ಊರಿಗೆ ಊರೇ ದ್ವೇಷದ ಬೆಂಕಿಯಲ್ಲಿ ತೇಲುತ್ತಿರುವಾಗ

ಲಾಜೋ ಒಂದು ಕಿಡಿಯಂತೆ ಹಮೀದಾಳ ಮನೆ ಪ್ರವೇಶಿಸುತ್ತಾಳೆ. ಮುಂದೊಂದು ದಿನ ಊರಿಗೆ ಈ ವಿಚಾರ ಗೊತ್ತಾದರೆ, ಹಿಂದೂ ಹುಡುಗಿ ಮುಸ್ಲಿಂರ ಮನೆಯಲ್ಲಿ ಇರುವ ವಿಚಾರ ತಿಳಿದರೆ, ಆ ಕಿಡಿ ಹಮೀದಾಳ ಇಡೀ ಮನೆಯನ್ನು ಬೂದಿ ಮಾಡಬಹುದು ಎಂದು ಹಮೀದಾಳಿಗೂ ಗೊತ್ತಿರುತ್ತದೆ. ತನ್ನ ರಕ್ತಸಂಬಂಧದ ಸಲುವಾಗಿ ಅವಳು ಏನೂ ಮಾಡಲು ತಯಾರಾಗಿದ್ದಳು. ತನ್ನ ಕುಟುಂಬದ ಬಗ್ಗೆ ಹೆಚ್ಚು ಅರಿವಿದ್ದ ಲಾಜೋ ತನ್ನ ಕುಟುಂಬದವರು ತನ್ನನ್ನು ಕರೆದೊಯ್ಯಲು ಬರುವುದಿಲ್ಲ. ಇಷ್ಟು ಅವಮಾನಕ್ಕೆ ಗುರಿಯಾದ ಹೆಣ್ಣನ್ನು ಯಾರು ಮನೆಗೆ ಸೇರಿಸಿಕೊಳ್ಳಲು ಇಷ್ಟ ಪಡುತ್ತಾರೆ ಎಂದು ತೀವ್ರ ನೊಂದ ಲಾಜೋವಿನ ಸ್ಥಿತಿ ಇಡೀ ಸಮುದಾಯ ನಾಚಿಕೆ ಪಟ್ಟುಕೊಳ್ಳಬೇಕಾದ ಸ್ಥಿತಿಗೆ ತಲುಪಿದೆ. 'ಇಲ್ಲ ಪುರೋ ಇದು ನನ್ನ ಹಣೆ ಬರಹ. ಇಲ್ಲದೇ ಇದ್ದರೆ ಇಷ್ಟೊಂದು ಅವಮಾನಕ್ಕೆ ನಾನು ಗುರಿ ಯಾಗಬೇಕಿರಲಿಲ್ಲ. ನನ್ನನ್ನು ಮರಳಿ ಕರೆದೊಯ್ಯಲು ಯಾರೂ ಬರುವುದೂ ಇಲ್ಲ.'[೨೫] ಹಮೀದಾ ಲಾಜೋಳನ್ನು ಗೌರವಾನ್ವಿತ ಅತಿಥಿಯಂತೆ ನೋಡಿಕೊಳ್ಳುತ್ತಿದ್ದಳು. ತಾನು ಕಳೆದುಕೊಂಡ ಕುಟುಂಬದ ಎಲ್ಲರ ಮುಖಗಳೂ ಅವಳಿಗೆ ಲಾಜೋಳಲ್ಲಿ ಕಾಣಿಸುತ್ತಿದ್ದವು. ಲಾಜೋ ಅವಳ ಮೊದಲ ಹಾಗೂ ಕೊನೆಯ ಅತಿಥಿಯಾಗಿದ್ದಳು.

ಹಮೀದಾ ಲಾಜೋಳನ್ನು ಅವಳ ಕುಟುಂಬದವರಿಗೆ ಒಪ್ಪಿಸಲು ಲಾಹೋರ್‌ಗೆ ಹೋದಳು. ತನ್ನ ತಮ್ಮನನ್ನು ಅವಳು ಮೊದಲ ಬಾರಿಗೆ ನೋಡಿದ್ದು, ಅವನ ಬಗ್ಗೆ ಅವಳಿಗೆ ಹೆಮ್ಮೆ ಎನಿಸಿತ್ತು. ತಾನು ರಶೀದನಿಂದ ಅಪಹರಣಕ್ಕೊಳಗಾದಾಗ ಅವನಿಗಿನ್ನು ಎಳೆಯ ವಯಸ್ಸು. ತನ್ನ ತಮ್ಮನಲ್ಲಿ ಅವಳೊಂದು ವಿನಂತಿಯನ್ನು ಮಾಡುತ್ತಾಳೆ.

ಇಡೀ ಹೆಣ್ಣು ಕುಲ ಅವಳ ವಿನಂತಿಗೆ ತಲೆ ಬಾಗುತ್ತದೆ. 'ನಾನು ಕೈಮುಗಿದು ಕೇಳಿ ಕೊಳ್ತೀನಿ. ಲಾಜೋಳ ಮೇಲೆ ಒಂದು ಸಣ್ಣ ಕಳಂಕವನ್ನು ನೀವು ಹೊರಿಸಬಾರದು ಎಂದು ಹಮೀದಾ ಬೇಡಿಕೊಂಡಳು.'[೨೬] ಹಮೀದಾ ರೇಷ್ಮೆ ವಸ್ತ್ರಗಳನ್ನು ಮಿಠಾಯಿಯನ್ನು ಲಾಜೋಳ ಕೈಲಿಟ್ಟು ಅವಳನ್ನು ಇಂಡಿಯಾಕ್ಕೆ ಕಳುಹಿಸಿಕೊಟ್ಟಳು. ಹಮೀದಾ ತಾನು ಹಿಂದೂ ಎಂದು ಹೇಳಿದ್ದರೆ ತನ್ನ ಕುಟುಂಬದವರ ಜೊತೆ ಅವಳು ಮರಳಿ ಹೋಗಬಹುದಿತ್ತು. ಅವಳು ಪಾಕಿಸ್ತಾನದಲ್ಲೇ ರಶೀದನ ಜೊತೆ ಉಳಿದುಬಿಟ್ಟಳು. ಈಗ ಅವಳಿಗೆ ತನ್ನ ತವರಿಗಿಂತ ಹೆಚ್ಚಾಗಿ ಗಂಡ – ಮಗುವಿನ ಜೊತೆ ಇರುವುದೇ ಖುಷಿಯಾದ ವಿಚಾರವಾಗಿದೆ.

ಒಟ್ಟಾರೆಯಾಗಿ ಅಮೃತಾ ಪ್ರೀತಂ ಅವರ ಕಥನ ಪ್ರಪಂಚವನ್ನು ಗಮನಿಸಿದಾಗ ಹೆಣ್ಣಿನ ಪ್ರಾಧಾನ್ಯತೆ ತಿಳಿಯುತ್ತದೆ. ಹೆಣ್ಣಿನ ಸಂವೇದನೆ ಕುರಿತು ಅರಿಯಲು ಕಷ್ಟವಾದಂತಹ ಸೂಕ್ಷ್ಮ ವಿಚಾರ ಗಳನ್ನು ಅವರು ಗಮನಿಸಿರುತ್ತಾರೆ. ಇವರ ಕಥನದಲ್ಲಿ ಹೆಣ್ಣೇ ಮುಖ್ಯ. ಆದ್ದರಿಂದ ಸ್ತ್ರೀವಾದದ

ಪರಿಕಲ್ಪನೆಯನ್ನು ಇಲ್ಲಿ ತರಬಹುದು. ಮುಖ್ಯಪಾತ್ರಗಳು ಹೆಣ್ಣಾದರೂ ಕೆಲವು ಪುರುಷ ಪಾತ್ರಗಳನ್ನು ಹೆಣ್ಣಿನ ಘನತೆಗೆ ಗೌರವ ತರುವ ಪಾತ್ರಗಳಾಗಿ ಚಿತ್ರಿಸುತ್ತಾರೆ. ಇದು ಒಬ್ಬ ಲೇಖಕಿಯಾಗಿ ಅವರ ಯಶಸ್ಸು. ಹಮೀದಾ, ರಶೀದ, ಮೂರ್ತಿ, ರಾಜ್ ಬಕ್ಷಿ, ಮೀನಾ, ಅವಿನಾಶ ಈ ಸ್ತ್ರೀ ಪುರುಷ ಪಾತ್ರಗಳಲ್ಲಿನ ಸಮಾನತೆಯನ್ನು ನೋಡಿದಾಗ ಬೋವಾಳ ಪರಿಕಲ್ಪನೆಯಾದ ಸ್ತ್ರೀ ಪುರುಷರ ಅಸ್ತಿತ್ವವನ್ನು ಹೇಳುವ ಅಸ್ತಿತ್ವವಾದಿ ಸ್ತ್ರೀವಾದ ಇಲ್ಲಿ ಜಾರಿಗೊಂಡಂತಾಗಿದೆ.

ಟಿಪ್ಪಣಿಗಳು

೧. ಅಮೃತಾ ಪ್ರೀತಂ, ಅಮೃತಾ ಪ್ರೀತಂ ಅವರ ಆಯ್ದ ಕತೆಗಳು, ಅನು – ಡಾ. ಆರ್. ಲಕ್ಷ್ಮೀನಾರಾಯಣ, ಭಾವಯಿತ್ರೀ ಪ್ರಕಾಶನ, ೨೦೧೧, ಪುಟ : ೯

೨. ಅದೇ; ಪುಟ: ೧

೩. ಅದೇ; ಪುಟ: ೧೦

೪. ಅದೇ; ಪುಟ: ೧೦

೫. ಅದೇ; ಪುಟ: ೧೧

೬. ಅದೇ; ಪುಟ: ೧೪

೭. ಅದೇ; ಪುಟ: ೧೪

೮. ಅದೇ; ಪುಟ: ೨೬

೯. ಅದೇ; ಪುಟ: ೨೭

೧೦. ಅದೇ; ಪುಟ: ೨೯

೧೧. ಅದೇ; ಪುಟ: ೬೧

೧೨. ಅದೇ; ಪುಟ: ೭೫

೧೩. ಅದೇ; ಪುಟ: ೭೫, ೭೬

೧೪. ಅದೇ; ಪುಟ: ೮೭

೧೫. ಅದೇ; ಪುಟ: ೯೦

೧೬. ಅದೇ; ಪುಟ: ೯೭

೧೭. ಅದೇ; ಪುಟ: ೧೦೩

೧೮. ಅದೇ; ಪುಟ: ೧೧೫

೧೯. ಅದೇ; ಪುಟ: ೧೧೭

೨೦. ಅಮೃತಾ ಪ್ರೀತಂ ಪಿಂಜರ್, ಅನು – ಎಲ್.ಸಿ. ಸುಮಿತ್ರಾ, ಅಂಕಿತ ಪುಸ್ತಕ, ೨೦೦೬, ಪುಟ : ೩೪

೨೧. ಅದೇ; ಪುಟ: ೩೫

೨೨. ಅದೇ; ಪುಟ: ೪೧

೨೩. ಅದೇ; ಪುಟ: ೫೮

೨೪. ಅದೇ; ಪುಟ: ೬೫

೨೫. ಅದೇ; ಪುಟ: ೭೫

೨೬. ಅದೇ; ಪುಟ: ೮೦

ಅ) ಸ್ತ್ರೀ ಅಸ್ಮಿತೆ

ಸ್ತ್ರೀ ಅಸ್ಮಿತೆಯ ಕುರಿತು ಹಲವಾರು ಚರ್ಚೆಗಳಾಗಿವೆ. ಸ್ತ್ರೀ ಪುರುಷ ಇಬ್ಬರಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ಇರುವುದು ಸಹಜವೇ ಆಗಿದೆ. ಎಚ್.ಎಸ್. ಶ್ರೀಮತಿಯವರು ಸ್ತ್ರೀವಾದಿ ಭಾಷಾ ಮೀಮಾಂಸೆ ಮತ್ತು ಅಸ್ಮಿತೆಯ ರಾಜಕಾರಣ ಲೇಖನದಲ್ಲಿ ಅಸ್ಮಿತೆಯನ್ನು ಹೀಗೆ ಗುರುತಿಸುತ್ತಾರೆ. ಸ್ತ್ರೀವಾದಿಗಳ ಅಸ್ಮಿತೆಯ ರಾಜಕಾರಣದ ನೆಲೆಗಳನ್ನು ಹೀಗೆ ಸಂಗ್ರಹಿಸಬಹುದು. ಲೆಸ್ಬಿಯಾನ್ ಕೊರತೆ ಯುಳ್ಳ ಹೆಂಗಸರು, ಮುದುಕಿಯರು, ಕಪ್ಪು ಹೆಂಗಸರು, ಯಹೂದಿ ಹೆಂಗಸರು, ದುಡಿಯುವ ಹೆಂಗಸರು – ಮುಂತಾದ ಬೇರೆ ಬೇರೆ ಸಾಮಾಜಿಕ ಗುಂಪುಗಳಿಗೆ ಸೇರಿದವರು ತಮ್ಮ ಚಹರೆಗಳನ್ನು ಕಂಡುಕೊಂಡು ಅದಕ್ಕೊಂದು ಸ್ಥಾನಮಾನವನ್ನು ನೀಡುವುದು.

(ಸ್ತ್ರೀವಾದ ಭಾಷಾ ಶಾಸ್ತ್ರ ಪ್ರವೇಶಿಕೆ : ಪುಟ : ೫೪).

'ಅಸ್ಮಿತೆ'ಯನ್ನು 'ಅಸ್ತಿತ್ವ' ಎಂದು ಗುರುತಿಸಬಹುದಾಗಿದೆ. ಎಲ್ಲಾ ವಿಷಯಗಳಲ್ಲು ತನ್ನ ಅಸ್ತಿತ್ವವನ್ನು ಇತರರ ತೀರ್ಪಿಗೆ ಕಾಯದೆ, ಇತರರಿಗೋಸ್ಕರ ತನ್ನ ಜೀವನ ಎಂದು ಹೇಳದೆ, ತನಗೂ ಸ್ವಾತಂತ್ರವಿದೆ, ತನಗೂ ಅಸ್ತಿತ್ವವಿದೆ, ತನಗೂ ಬಯಕೆಗಳಿವೆ, ಇಷ್ಟಗಳಿವೆ, ಕಷ್ಟಗಳಿವೆ, ಎಂಬವುಗಳನ್ನು ಯಾವುದಕ್ಕೂ ತ್ಯಜಿಸದೆ ಸಾಧ್ಯವಾದಷ್ಟು ಈಡೇರಿಸಿಕೊಳ್ಳಲು ಮಾಡುವ ಪ್ರಯತ್ನವಿದು. ಎಲ್ಲಾ ಕ್ಷೇತ್ರಗಳಲ್ಲೂ ತನ್ನತನವನ್ನು ಉಳಿಸಿಕೊಳ್ಳುವುದನ್ನು ಇಲ್ಲಿ ಅಸ್ಮಿತೆ ಎಂದು ಗುರುತಿಸಲಾಗುತ್ತದೆ. ಸ್ತ್ರೀಗೂ ಅಸ್ಮಿತೆ ಇದೆ. ಸ್ತ್ರೀಯ ಅಸ್ಮಿತೆಯ ಪ್ರಶ್ನೆಗಳನ್ನು ಮುಂದೆ ನೋಡಲಾಗುತ್ತದೆ.

ಅಮೃತಾ ಪ್ರೀತಂ ಅವರ ಕಥನದಲ್ಲಿ ಸ್ತ್ರೀ ಅಸ್ಮಿತೆಯ ರೂಪಕಗಳಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪಾತ್ರಗಳು ಸಾಕಷ್ಟಿವೆ. ಹಮೀದಾ, ತಾರೋ, ವೀರೋ, ಮೂರ್ತಿ, ಧನ್ನೋ ಹೀಗೆ ಹಲವಾರು ಪಾತ್ರಗಳಿವೆ. ಈ ಪಾತ್ರಗಳು ಹೇಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿವೆ ಎಂದು ಮೊದಲಿಗೆ ನೋಡಬೇಕಾಗುತ್ತದೆ. ಹಾಗೆಯೇ ಸ್ತ್ರೀವಾದಗಳಲ್ಲಿ ಪ್ರಮುಖವಾಗಿರುವ ಸಿಮೋನ್ ದ ಬೋವಾರ ಅಸ್ತಿತ್ವ ವಾದಿ ಸ್ತ್ರೀವಾದವನ್ನು, ಆಲಿಸನ್ ಜ್ಯಾಗರ್‌ಳ ಸಮಾಜವಾದಿ ಸ್ತ್ರೀವಾದವನ್ನು, ಚಿಟ್ಟೆಫ್ರಿಡನ್ ಹಾಗೂ ಕ್ಯಾರೊಲ್ ಗಿಲಿಗನ್‌ಳ ಮನೋವಿಶ್ಲೇಷಣಾತ್ಮಕ ಸ್ತ್ರೀವಾದವನ್ನು ಅಸ್ಮಿತೆಯ ಚಹರೆಗಳನ್ನು ಉಳಿಸಿ ಕೊಂಡಿರುವ ಈ ವಿಶೇಷ ಪಾತ್ರಗಳೊಂದಿಗೆ ಅಧ್ಯಯನ ದಲ್ಲಿ ಸಮೀಕರಿಸಲಾಗುತ್ತದೆ.

ಪುರೋ ಹಮೀದಳಾಗಿ ಬದಲಾದ ನಂತರ ಅವಳು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವ ಬಗ್ಗೆ ಮೂರು ನಾಲ್ಕು ಘಟನೆಗಳು ಸಾಕ್ಷಿಯಾಗುತ್ತವೆ. ಅವುಗಳನ್ನು ನೋಡುವುದಾದರೆ, ಒಬ್ಬ ಹುಚ್ಚಿಯ ಮಗುವನ್ನು ತನ್ನ ಮಗುವಾಗಿಸಿಕೊಂಡ ಹಮೀದಾ ಹಲವು ವಿಷಯಗಳಲ್ಲಿ ತನಗೆ ಯಾವುದು ಸರಿಯೊ

ಅದನ್ನು ಮಾಡುತ್ತಿರುತ್ತಾಳೆ. ಇದಕ್ಕೆ ಇನ್ನೊಬ್ಬರ ಅಪ್ಪಣೆಯನ್ನು ಅವಳು ಯಾವತ್ತೂ ಕಾಯುವುದಿಲ್ಲ. ಇದಕ್ಕೆ ಯಾವುದೇ ಪ್ರತಿರೋಧವನ್ನು ಗಂಡನಾದ ರಶೀದ ವ್ಯಕ್ತಪಡಿಸದೆ ಅವಳಿಗೆ ಸಹಕಾರವನ್ನು ಕೊಡುತ್ತಿರುತ್ತಾನೆ. ಅವಳ ಬೆನ್ನೆಲುಬಾಗಿ ಅವನು ಸದಾ ಅವಳ ಜೊತೆ ಇರುತ್ತಾನೆ. ಹುಚ್ಚಿಯ ಮಗುವನ್ನು ಹಮೀದಾ ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. 'ಜಾವೇದ ಎರಡು ವರ್ಷ ಪೂರ್ತಿ ಎದೆ ಹಾಲು ಕುಡಿದಿದ್ದ. ಒಟ್ಟು ಹೆಚ್ಚು ದಿನ ಆಗಿರಲಿಲ್ಲ. ಬಿಳಿ ಜೀರಿಗೆ ತಿಂದರೆ ಎದೆ ಹಾಲು ಬರುತ್ತದೆಂದು ಹಮೀದಾ ಕೇಳಿ ತಿಳಿದಿದ್ದಳು. ಒಂದು ಲೋಟ ಹಾಲಿನ ಜೊತೆ ಒಂದು ಹಿಡಿ ಜೀರಿಗೆ ತಿಂದಳು. ಒಂದೆರೆಡು ದಿನಗಳಲ್ಲಿ ಅವಳೆದೆ ಹಾಲಿನಿಂದ ತುಂಬಿತು. ಆ ಹುಚ್ಚಿಯ ಮಗುವನ್ನು ತನ್ನದೇ ಮಗುವೇನೋ ಎಂಬಂತೆ ಅವಳು ಹಾಲೂಡಿಸಿದಳು.'[೧]

ಈ ಘಟನೆಯಿಂದ ಹಿಂದೂ ಮುಸ್ಲಿಂ ಒಳಜಗಳಗಳು ಮತ್ತಷ್ಟು ಹೆಚ್ಚಾಯಿತು. ಹಿಂದೂಗಳ ಎದುರಿಗೆ ಹಿಂದೂ ಮಗುವೊಂದು ಮುಸ್ಲಿಂ ಆಗಿ ಪರಿವರ್ತನೆ ಆಗುತ್ತಿದೆ ಎಂದು ಅವರ ತಿಳುವಳಿಕೆಯಾಗಿತ್ತು. ಇದರಿಂದ ತಾಯಿ ಮಗುವನ್ನು ಬೇರೆ ಮಾಡಲಾಯಿತು. ಈ ರೀತಿಯ ಘಟನೆಗಳು ತಾಯಿ ಮಗುವಿಗೆ ಭರಿಸಲಾಗದ ನೋವನ್ನು ತಂದೊಡ್ಡಿತ್ತು. 'ಹಮೀದಾ ಗೋಡೆಗೆ ತಲೆಚಚ್ಚಿಕೊಂಡು ಕಣ್ಣೀರು ಸುರಿಸಿದಳು. ಅವಳ ಎದೆ ಹಾಲಿನಿಂದ ಬಿಗಿದು ನೋಯುತ್ತಿತ್ತು. ಮಗುವನ್ನು ಹಾಲು ಬಿಡಿಸಿ ಒಯ್ಯಲಾಗಿತ್ತು. ಅವಳ ಹಾಲಿನಿಂದ ಬಿಗಿದು ನೋಯುವ ಎದೆಗೂ, ಹಸಿವಿನಿಂದ ಅಳುವ ಮಗುವಿನ ತುಟಿಗಳಿಗೂ ನಡುವೆ ಆಳವಾದ ಕಂದಕ ಬಾಯ್ದೆರೆದಿತ್ತು.'[೨] ಈ ಸ್ತ್ರೀ ತಾಯ್ತನದ ಬಗ್ಗೆ ತೀವ್ರಗಾಮಿ ಸ್ತ್ರೀವಾದಿಗಳು ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತಾರೆ. ತಾಯಿಯರ ಪಾತ್ರದಲ್ಲೇ ಒಂದು ರೀತಿಯ ದ್ವಂದ್ವ ವರ್ಗೀಕರಣವನ್ನು ಸೃಷ್ಟಿಸಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರು ತಾಯ್ತನ ಎಂಬ ಸೆರೆಯ ಬಂಧಿಗಳಾಗಿದ್ದಾರೆ.

ತಾಯ್ತನ

ತಾಯ್ತನವನ್ನು ಕುರಿತಂತೆ ಇದುವರೆಗೂ ಪ್ರಸ್ತುತ ಪಡಿಸಿದ ವಿಚಾರಧಾರೆಗಿಂತ ಭಿನ್ನವಾದಂಥ ವಿಚಾರಧಾರೆಯನ್ನು ಜೆಫನರ್ ಆಲೆನ್ನಳ ಮದರ್‌ಹುಡ್ ದಿ ಅನ್‌ಹಿಲೇಷನ್ ಆಫ್ ವಿಮೆನ್(೧೯೮೬) ಎಂಬ ಲೇಖನದಲ್ಲಿ ಕಾಣಬಹುದು. 'ಸಾವಿರಾರು ವರ್ಷಗಳಿಂದ ಸ್ತ್ರೀಯರು ತಾಯ್ತನವೆಂಬ ಜವಾಬ್ದಾರಿಯನ್ನು ಹೊರುತ್ತಲೇ ಬಂದಿದ್ದಾರೆ. ಅವರ ಪರಿಸ್ಥಿತಿಯನ್ನು ತಾಯ್ತನ ಮೊಟಕುಗೊಳಿಸುತ್ತದೆ. ಆದ್ದರಿಂದ ಸ್ತ್ರೀಯರು ತಾಯ್ತನವನ್ನು ತಿರಸ್ಕರಿಸಬೇಕು. ಮುಂಬರುವ ಎರಡು ದಶಕಗಳಲ್ಲಿ ಸ್ತ್ರೀಯರು ತಾಯ್ತನದ ಜವಾಬ್ದಾರಿಗಳನ್ನು ಹೊರಲು ನಿರಾಕರಿಸಿದರೆ, ಅವರ ಜೀವನದಲ್ಲಿ ವಿಶಿಷ್ಟವೆನಿಸಬಹುದಾದ

ಬದಲಾವಣೆಗಳುಂಟಾಗುತ್ತದೆ. ಸ್ತ್ರೀಯರನ್ನು ಕುರಿತ ಪುರುಷರ ಚಿಂನೆಯಲ್ಲಿಯು ಬದಲಾವಣೆಗಳು ತಲೆದೋರುತ್ತದೆ'[5] ಎಂಬ ಅಭಿಪ್ರಾಯಗಳನ್ನು ಆಲೆನ್ ವ್ಯಕ್ತಪಡಿಸಿದಳು.

ಆಲೆನ್ನಳ ಈ ವಿಚಾರಗಳು ಯಾವುದೋ ಒಂದು ಹಂತದಲ್ಲಿ ಸ್ತ್ರೀ ಶೋಷಣೆಗೆ ಒಂದು ಖಚಿತ ಪರಿಹಾರವನ್ನು ನೀಡುವಂತೆ ಕಂಡರೂ ಕೇವಲ ತಾಯ್ತನವನ್ನು ನಿರಾಕರಿಸುವುದರ ಮೂಲಕ ಸ್ತ್ರೀ ಶೋಷಣೆಯನ್ನು ಅಂತ್ಯ ಮಾಡುವುದು ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರ ಕಂಡು ಕೊಳ್ಳಬೇಕಾಗಿದೆ. ಇನ್ನು ಅನೇಕ ತೀವ್ರಗಾಮಿ ಸ್ತ್ರೀವಾದಿಗಳು ಸ್ತ್ರೀ ಶೋಷಣೆಯ ಮುಖ್ಯ ಅಂಶ ಗಳು ವಿವಾಹ, ಕುಟುಂಬ, ತಾಯ್ತನಗಳೇ ಎಂದು ಹೇಳುತ್ತಾರೆ. 'ಸ್ತ್ರೀಯನ್ನು ಪುರುಷನಿಂದ ಭಿನ್ನವಾಗಿಸುವ ಆಕೆಯ ಸಂತಾನೋತ್ಪಾದನಾ ಸಾಮರ್ಥ್ಯ, ಲೈಂಗಿಕ ದಾಸ್ಯ, ಬಲವಂತದ ತಾಯ್ತನಗಳ ನೆಲೆಯಾದ ಕುಟುಂಬ ಸ್ತ್ರೀ ಶೋಷಣೆಯ ಕೀಲಿಕೈ ಎಂಬುದು ಫೈರ್ ಸ್ಟೋನ್‌ಳ ಮುಖ್ಯ ವಿಚಾರ. ಪುರುಷ ಸಂಬಂಧವನ್ನು ಕಡ್ಡಾಯವಾಗಿ ಹೇರುವ ವಿವಾಹ, ಕುಟುಂಬ, ತಾಯ್ತನಗಳಿಂದ ದೂರವಾಗಿ ತನ್ನ ದೇಹ, ವ್ಯಕ್ತಿತ್ವಗಳ ಮೇಲೆ ಮಹಿಳೆ ಮತ್ತೆ ಸ್ವಾಮ್ಯವನ್ನು ಪಡೆದುಕೊಳ್ಳುವುದೇ ಸ್ತ್ರೀ ವಿಮುಕ್ತಿಯ ಹಾದಿ'[6] ಎನ್ನುವುದು ಫೈರ್ ಸ್ಟೋನ್‌ಳ ವಿಚಾರವಾಗಿದೆ.

ಶೋಷಣೆ

ಪಾಶ್ಚಾತ್ಯ ಚಿಂತಕಿಯರು ತಾಯ್ತನದಿಂದ ಹೆಣ್ಣಿನ ಶೋಷಣೆ ತೀವ್ರವಾಗಿ ನಡೆಯುತ್ತಿದೆ ಎಂದು ಹೇಳುತ್ತಾರೆ. ತಾಯ್ತನವೆಂಬುದು ನಿಸರ್ಗದತ್ತವಾದ ಕ್ರಿಯೆಯಾಗಿದೆ. ಸ್ತ್ರೀಯರು ಮಾನವ ಸಂಬಂಧಗಳಿಗೆ ಭಾವನಾ ಜಗತ್ತಿಗೆ ಪ್ರತಿಸ್ಪಂದಿಸುವುದನ್ನು ಕುರಿತು ಪುರುಷರು ಸ್ತ್ರೀಯರು ಕೀಳೆಂಬ ಒತ್ತಡಗಳನ್ನು ನಿರ್ಮಿಸುತ್ತಿದ್ದಾರೆ. 'ಹೆಣ್ಣು ಮೊದಲಿಗೆ ತಾಯಿ ಎಂಬುದು ನಿಸರ್ಗ ಸಹಜವಾದ ಸಂಗತಿ. ಮಾನವ ಸಂಬಂಧಗಳ ಬಗೆಗೆ ಅವಳಿಗಿರುವ ತೀವ್ರ ಕಾಳಜಿ, ಆ ಬಗೆಗಿನ ಅವಳ ಸೂಕ್ಷ್ಮ ಸಂವೇದನೆ ಪುರುಷನಿಗೆ ಇರುವುದು ಸಹಜವೇನಲ್ಲ. ಅವಳ ಚಿಂತನೆಯೂ, ಪುರುಷರ ಚಿಂತನೆಯಂತೆ ವ್ಯವಹಾರ ಪ್ರಧಾನವಾದ, ಬುದ್ಧಿ ಪ್ರಧಾನವಾದ ಚಿಂತನೆಯಲ್ಲ. ಬದಲಿಗೆ ಭಾವಪ್ರಧಾನವಾದದ್ದು, ಪುರುಷ ಚಿಂತನೆ ಈ ಅಂಶದ ಬೆನ್ನು ಹಿಡಿದು ಅವಳ ಚಿಂತನೆಯ ದಿಕ್ಕು ತಪ್ಪಿಸುವ ಹುನ್ನಾರಗಳನ್ನು ರೂಪಿಸುತ್ತಿದೆ.'[7]

ಎಚ್.ಎಸ್. ಶ್ರೀಮತಿಯವರು ಪುರುಷ ಹಾಗೂ ಸ್ತ್ರೀಯರಿಗೆ ವಿಭಿನ್ನ ಮನಸ್ಥಿತಿಗಳಿರುತ್ತವೆ ಮತ್ತು ಅವು ಸಹಜವಾಗಿರುತ್ತವೆ ಎಂದು ಹೇಳುತ್ತಾರೆ. ಈ ಕಾರಣಗಳಿಂದಲೂ ಲಿಂಗಭೇದ ಶುರು ವಾಗಿರಬಹುದಾಗಿದೆ. ಲಿಂಗಭೇದವೆಂಬುದು ಅನಾದಿಯಿಂದಲೂ ನಡೆದು ಬಂದ ಆಚರಣೆಯಾಗಿದೆ. ಅನಾದಿಯಿಂದಲೂ ಸ್ತ್ರೀ ಪುರುಷರು ಸಮಾನ ಸಂಖ್ಯೆಯಲ್ಲಿದ್ದರೂ ಮನಸ್ಥಿತಿಯನ್ನು ಮಾತ್ರ ಅನಾದಿ ಯಿಂದ ಹಿಡಿದು ಈಗಿನವರೆಗೂ ಯಾವುದೇ ಸಮಾನತೆಯಿಂದ ಗುರುತಿಸಿಕೊಂಡಿಲ್ಲ. ಗ್ರೀಕ್ ದಾರ್ಶನಿಕ

ಎಂದೇ ಕರೆಸಿಕೊಳ್ಳುವ ಅರಿಸ್ಟಾಟಲ್ ಹೆಣ್ಣಿನ ಬಗ್ಗೆ ಹೀಗೆ ಹೇಳುತ್ತಾನೆ. ಹೆಣ್ಣು ತನ್ನಲ್ಲಿರುವ ಕೆಲವು ಕೊರತೆಗಳಿಂದಾಗಿ ಹೆಣ್ಣಾಗಿದ್ದಾಳೆ ಮತ್ತು ಹೆಣ್ಣಿನ ಸ್ವಭಾವವು ಕೆಲವು ನಿಸರ್ಗದತ್ತ ಮಿತಿಗಳಿಂದ ರೂಪಿಸಲ್ಪಟ್ಟಿದೆ. ಈ ವಾಕ್ಯವನ್ನು **The Other** (ಪು:೧೬) ಕೃತಿಯಿಂದ ತೆಗೆದುಕೊಳ್ಳಲಾಗಿದೆ.

ಲಿಂಗಭೇದ

ಲಿಂಗಭೇದವು ಕತೆಯಲ್ಲಿಯೂ ಮೂಡಿಬಂದಿದೆ. ಪಿಂಜರ್ ಕಾದಂಬರಿಯಲ್ಲಿ 'ತಾರೋ' ಪಾತ್ರ ಸತತವಾಗಿ ಲಿಂಗಾಧಾರಿತ ಕಾರಣದಿಂದ ದೌರ್ಜನ್ಯಕ್ಕೊಳಗಾಗುವ ಪಾತ್ರವಾಗಿದೆ. ತಾರೋ ಗಂಡನನ್ನು ಬಿಟ್ಟು ತವರಿನಲ್ಲಿ ಉಳಿದಿದ್ದಾಳೆ. ಅವಳ ನೋವು ಬೇರೆಯವರಿಗೆ ಗೊತ್ತಿದ್ದರೂ ಏನೂ ಮಾಡಲಾಗದ ಪರಿಸ್ಥಿತಿಯಲ್ಲಿ ಅವರು ಉಳಿದಿದ್ದಾರೆ. ಹುಡುಗಿ ಮದುವೆಯಾದ ಮೇಲೆ ದೇವರು ಅವಳ ನಾಲಗೆಯನ್ನು ಕಿತ್ತುಕೊಂಡು ಬಿಡುತ್ತಾನೆ. ಹಾಗಾಗಿ ಅವಳು ದೂರು ಹೇಳುವಂತಿಲ್ಲ ಎಂದು ಹೇಳುವ ತಾರೋ ತನ್ನ ನೋವಿಗೆ ಬೇರೆಯವರು ಕಾರಣ ಎಂದು ಕೊರಗುವುದಿಲ್ಲ. ತನ್ನ ನೋವುಗಳಿಗೆ ತಾನೇ ಕಾರಣ. ಇಲ್ಲದಿದ್ದರೆ ಆ ದೇವರು ಕಾರಣ. ದೇವರ ಸಂಕೋಲೆ ನನ್ನ ಕಾಲಿಗೆ ಮಾತ್ರ ಇರುವುದು ಎಂದು ಅವಳ ಅಭಿಪ್ರಾಯ. ಅವಳ ನೋವನ್ನು ಹೀಗೆ ವ್ಯಕ್ತಪಡಿಸುತ್ತಾಳೆ. 'ಪೂರ್ತಿ ಎರಡು ವರ್ಷ ನನ್ನ ದೇಹವನ್ನು ಒಂದು ಹಿಡಿ ಅನ್ನ ಎರಡು ಜೊತೆ ಬಟ್ಟೆಗಾಗಿ ಮಾರಿಕೊಂಡೆ. ಒಬ್ಬ ವೇಶ್ಯೆ, ಬೀದಿಸೂಳೆಯಂತೆ. ತಾರೋ ಪ್ರಜ್ಞೆ ಬಂದ ನಂತರವೂ ಗೊಣಗಾಟ ಮುಂದುವರೆಸಿದಳು. ನನ್ನನ್ನು ಮುಟ್ಟಬೇಡಿ, ನಾನು ಕೊಳಕಿ, ಕಾಣ್ತಾ ಇಲ್ವ ನಾನು ವೇಶ್ಯೆ. ಸಾಮಾನ್ಯ ಸೂಳೆ. ಪಾಪದ ಹುಡುಗಿ ಮೂರ್ಖ ಮಾತುಗಳನ್ನು ಬಡಬಡಿಸುತ್ತಿದ್ದಾಗ ಅವಳ ತಾಯಿ ಒಳಬಂದಳು.'[೬]

ಅಪ್ಪ ಅಮ್ಮ ಮಗಳನ್ನು ಮದುವೆ ಮಾಡಿ ಕಳುಹಿಸುವಾಗ ಅವಳ ಕೊರಳಿಗೆ ಉರುಳೊಂದನ್ನು ಹಾಕಿ ಆ ಹಗ್ಗದ ತುದಿಯನ್ನು ತಮಗಿಷ್ಟ ಬಂದ ವ್ಯಕ್ತಿಗೆ ಕೊಡುತ್ತಾರೆ ಎಂದು ಹೇಳುವ ತಾರೋಳ ಮಾತು ನಿಜವಾಗಿದೆ. ಗಂಡ, ಗಂಡಸು ಏನು ಮಾಡಿದರೂ ಸರಿಯಾಗಿರುತ್ತದೆ ಹಾಗೂ ಅದು ಅವರ ಹಕ್ಕಾಗಿರುತ್ತದೆ. ಇದು ಎಲ್ಲರ ಅಭಿಪ್ರಾಯ ವಾಗಿರುವುದರಿಂದಲೇ ನಮ್ಮ ಸಾಮಾಜಿಕ ವ್ಯವಸ್ಥೆ ಬದಲಾಗುತ್ತಿಲ್ಲ. ಇದನ್ನು ತಾರೋಳ ತಾಯಿಯ ಮಾತಿನಿಂದ ಸ್ಪಷ್ಟಪಡಿಸಬಹುದು. 'ನಾವು ಮಗಳನ್ನು ಕೊಟ್ಟ ಮೇಲೆ ನಮ್ಮ ಜವಾಬ್ದಾರಿ ಮುಗಿಯಿತು. ನಾವು ಮಾತಾಡುವಂತಿಲ್ಲ. ಅವಳ ಗಂಡ ಅವನಿಗೆ ಬೇಕಾದಂತೆ ಮಾಡ್ತಾನೆ. ಅದು ಗಂಡಸಿನ ಹಕ್ಕು.'[೭]

ಲಿಂಗ ತಾರತಮ್ಯದ ಬಗ್ಗೆ ಇನ್ನಷ್ಟು ಸ್ಪಷ್ಟ ಉದಾಹರಣೆ ಸಿಗುವುದು 'ಒಂದು ನಿಟ್ಟುಸಿರು' ಕಥೆಯಲ್ಲಿ. ಮದುವೆ ಮಾಡಿಕೊಂಡ ಚಿಕ್ಕ ವಯಸ್ಸಿನ ಹುಡುಗಿಯನ್ನು ಮನೆಗೆ ತರುತ್ತಾನೆ ಸರದಾರ.

ಚಿಕ್ಕ ವಯಸ್ಸಿನ ಹುಡುಗಿ ವೀರೋ ಬಾಣಂತನಕ್ಕೆ ತವರಿಗೆ ಆಗಮಿಸಿದಾಗ ಅವಳ ಅತ್ತಿಗೆ ಆಡುವ ಮಾತುಗಳು ಲಿಂಗ ತಾರತಮ್ಯದ ಸ್ಪಷ್ಟ ಉದಾಹರಣೆಗಳು. 'ಸುಮ್ಮನೆ ಹೆದರ್ತಿದ್ದೀಯಾ, ಹೆರಿಗೇಲಿ ಏನು ತಾನೆ ಕಷ್ಟ ಆಗುತ್ತೆ. ಒಂದು ಸಲ ಜೋರಾಗಿ ಕಿರುಚಿದರೆ ಆಯಿತು. ಮಗ ಹುಟ್ಟಿ ಬಿಡುತ್ತಾನೆ. ನಿಹಾಲ್ ಕೌರ್ ನಗುತ್ತ – ಒಂದು ಸಲ ಚೀರಿದರೆ ಮಗ ಹುಟ್ಟುತ್ತಾನೆ. ಒಂದು ವೇಳೆ ಮಗಳನ್ನು ಹೆರುವುದಾದರೆ? ವೀರೋಳ ಅತ್ತಿಗೆ ಗಟ್ಟಿಯಾಗಿ ನಗುತ್ತಾ ಎರಡು ಸಲ ಚೀರಿದರೆ ಮಗಳನ್ನು ಹೆತ್ತು ಬಿಡಬಹುದು ಎಂದಳು. ಮಗಳಿಗೆ ಎರಡು ಸಲ ಚೀರಬೇಕೆ? ನಿಹಾಲ್ ಕೌರ್ ನಕ್ಕು ಕೇಳಿದಳು. ಒಂದು ಸಲ ಚೀರುವುದು ನೋವಿಗಾಗಿ, ಇನ್ನೊಂದು ಸಲ ಚೀರುವುದು ದುಃಖಕ್ಕಾಗಿ ಎಂದು ವೀರೋಳ ಅತ್ತಿಗೆ ಹೇಳಿದಳು. ಖುಷಿ ಏನಿದ್ದರೂ ಗಂಡು ಮಕ್ಕಳದು. ಹೆಣ್ಣು ಮಕ್ಕಳದೇನು ಖುಷಿ ಇರುತ್ತೆ!'[೮]

ಮತ್ತೊಂದು ಉದಾಹರಣೆ ನೋಡುವುದಾದರೆ 'ಗಿಡಮೂಲಿಕೆ' ಕಥೆಯಲ್ಲಿ ಅಂಗೂರಿ ಮಾತನಾಡುವ ಬಗೆ ಅವಳು ನೆಲೆಸಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಲಿಂಗತಾರತಮ್ಯವೆಂಬುದು ಚಾಲ್ತಿಯಲ್ಲಿರುವ ಹಾಗೂ ಅದನ್ನು ಎಲ್ಲರೂ ಒಪ್ಪಿರುವ ಸಂಗತಿಯಂತೆ ಗೋಚರಿಸುತ್ತದೆ. ನಿರೂಪಕಿ ಬೇವಿನ ಮರದ ಕೆಳಗೆ ಕುಳಿತು ಪುಸ್ತಕ ಓದುತ್ತಿದ್ದಾಗ ಅಂಗೂರಿ ಅದನ್ನು ಗಮನಿಸುತ್ತಿರುತ್ತಾಳೆ. ನೀನು ಓದುತ್ತೀಯಾ ಎಂದು ನಿರೂಪಕಿ ಅಂಗೂರಿಗೆ ಕೇಳಿದ ಪ್ರಶ್ನೆಗೆ ಅವಳು ಈ ರೀತಿ ಉತ್ತರಿಸುತ್ತಾಳೆ. 'ಹೆಂಗಸರು ಓದಿದರೆ ಪಾಪ ಬರುತ್ತೆ. ಗಂಡಸಿಗೆ ಪಾಪ ಬರಲ್ಲ.'[೯]

ಲಿಂಗತಾರತಮ್ಯ ವಿಚಾರವಾಗಿ ನೋಡುವುದಾದರೆ ಉದಾರವಾದಿ ಸ್ತ್ರೀವಾದದಲ್ಲಿ ಹೆಚ್ಚು ಮಾಹಿತಿ ಸಿಗುತ್ತದೆ. ಉದಾರವಾದಿ ಸ್ತ್ರೀವಾದಿಗಳು ಲಿಂಗ ಸಮಾನತೆಯನ್ನು ಕುರಿತಂತೆ ಇತರ ದೃಷ್ಟಿಕೋನಗಳನ್ನು ಪ್ರತಿಪಾದಿಸಿದ್ದಾರೆ. ಇಂತಹ ದೃಷ್ಟಿಕೋನಗಳಲ್ಲಿ ಪ್ರಮುಖವಾದುದು ಸ್ತ್ರೀ ಪುರುಷ ಸಮಾನತೆಯ ಸ್ಥಾಪನೆಗಾಗಿ 'ದ್ವಿಲಿಂಗಿ' ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದಕ್ಕೆ ಸಂಬಂಧಿಸಿದ್ದು. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಇರುವ ಸ್ತ್ರೀ ಮತ್ತು ಪುರುಷ ಗುಣಗಳೆರಡನ್ನು ಸ್ತ್ರೀ ಪುರುಷರಿಬ್ಬರೂ ಬೆಳೆಸಿಕೊಂಡರೆ ಪುರುಷ ಮೇಲೂ ಅಥವಾ ಸ್ತ್ರೀ ಕೀಳು ಎಂಬ ಭಾವನೆಗಳು ಸಮಾಜದಲ್ಲಿ ಬೇರೂರಲು ಅವಕಾಶವಿರುವುದಿಲ್ಲ. "ಲಿಂಗಾಧಾರಿತ ಅಸಮಾನತೆ ಯನ್ನು ಕೊನೆಗಾಣಿಸಬೇಕಾದರೆ ಸಾಂಸ್ಕೃತಿಕ ಮೌಲ್ಯಗಳಿಂದ ರಚಿತವಾಗಿ ಪೋಷಿಸಲ್ಪಡುತ್ತಿರುವ 'ಪುರುಷ ಸಂಕೇತ'ವಾದ ಅಥವಾ 'ಸ್ತ್ರೀ ಸಂಕೇತ'ವಾದ ವ್ಯಕ್ತಿತ್ವಗಳನ್ನು ಬೆಳೆಸಿಕೊಳ್ಳದೆ ದ್ವಿಲಿಂಗಿ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕಾಗಿದೆ ಎಂಬುದು ಹಲವು ಉದಾರವಾದಿ ಸ್ತ್ರೀವಾದಿಗಳ ಒಂದು ನಿಲುವು."[೧೦]

ಗರ್ಭಕೋಶ

ಸ್ತ್ರೀಗೆ ಗರ್ಭಕೋಶವಿರುವುದರ ಅರ್ಥ ಅವಳ ಬದುಕಿನ ಮುಖ್ಯ ಉದ್ದೇಶ ಸಂತಾನ ವೃದ್ಧಿ, ಸ್ತ್ರೀ ಮುಖ್ಯವಾಗಿ ಭಾವನಾ ಜೀವಿ, ಸ್ತ್ರೀಗೆ ಪುರುಷನಷ್ಟು ದೈಹಿಕ ಶಕ್ತಿ ಇಲ್ಲ ಇತ್ಯಾದಿ ಅನಿಸಿಕೆಗಳ ಕುರಿತು ಸ್ತ್ರೀ ಪುರುಷ ಭಿನ್ನತೆಯನ್ನು ಬೋವಾ ಒಪ್ಪಿಕೊಂಡು ಹೀಗೆ ಹೇಳುತ್ತಾಳೆ. 'ಒಟ್ಟಿನಲ್ಲಿ ಜೈವಿಕವಾಗಿ ಸ್ತ್ರೀ ನಿಸರ್ಗ ಶಪಿತಳೇ ಹೌದು. ಮಾಸಿಕ ಋತುಸ್ರಾವ, ಗರ್ಭಧಾರಣೆ, ಪ್ರಸವ ವೇದನೆ, ಪ್ರಸವ ಇತ್ಯಾದಿ ಅವ್ಯಾಹತ ಸಂಕಟಗಳನ್ನು ಸ್ತ್ರೀ ಸದಾ ಎದುರಿಸಬೇಕಾಗುತ್ತದೆ. ಸ್ತ್ರೀ ಪುರುಷನಂತೆ ವೇಗವಾಗಿ ಓಡಲಾರಳು, ಅವನಷ್ಟು ಭಾರ ಎತ್ತಲಾರಳು, ದುರ್ಬಲಳು ಮತ್ತು ಮಾನಸಿಕವಾಗಿ ಅವಳಿಗೆ ಪುರುಷನಿಗಿರುವಷ್ಟು ಸಂಕಲ್ಪ ಶಕ್ತಿಯಿಲ್ಲ.'[೧೧]

ಪಾಶ್ಚಾತ್ಯ ಚಿಂತಕಿಯರು ಸ್ತ್ರೀಯನ್ನು ಸಂತಾನೋತ್ಪತ್ತಿಯ ಒಂದು ಯಂತ್ರದಂತೆ ಕಾಣುತ್ತಿರುವುದೇ ಆಕೆಯ ಶೋಷಣೆಯ ಮೂಲ ಎಂದು ಗುರುತಿಸುತ್ತಾರೆ. ಶೂಲಮಿಥ್ ಫಯರ್ ಸ್ಟೋನ್ನಳು ದಿ ಡೈಲೆಕ್ಟಿಕ್ ಆಪ್ ಸೆಕ್ಸ್(೧೯೭೦) ಕೃತಿಯಲ್ಲಿ 'ಬಸಿರು', 'ಶಿಶು ಜನನ' ಮುಂತಾದ ಕಲ್ಪನೆಗಳನ್ನು ಧಿಕ್ಕರಿಸುತ್ತಾಳೆ.

ಸ್ತ್ರೀಯ ಗರ್ಭಕೋಶಕ್ಕೆ ಪೂಜ್ಯನೀಯ ಭಾವವಿರುವ ನಮ್ಮ ಸುತ್ತಲಿನ ಸಮಾಜದಲ್ಲಿ ಸ್ತ್ರೀಯ ಗರ್ಭಕೋಶದಿಂದ ಹೆಣ್ಣು ಮಗುವಿನ ಜನನವಾದಾಗ ಶೋಷಣೆಗೆ ಗುರಿಯಾಗುತ್ತಾಳೆ. ಯಾವುದೇ ಪ್ರದೇಶದಲ್ಲಿಯೂ ಹೆಣ್ಣು ಮಗು ಹುಟ್ಟಿದೆ. ಲಕ್ಷ್ಮೀ ಮನೆಗೆ ಬಂದಳು ಎಂದು ಸಂತೋಷ ಪಡುವ ಪ್ರಸಂಗವಂತು ಎಲ್ಲೂ ಕಾಣಿಸುವುದಿಲ್ಲ. ಎಲ್ಲರೂ ಹಂಬಲಿಸುವುದು ಗಂಡು ಮಗು ಜನನಕ್ಕಾಗಿ. ತೀವ್ರಗಾಮಿ ಸ್ತ್ರೀವಾದವು ಸಹ ತಾಯ್ತನವನ್ನು ವಿರೋಧಿಸುತ್ತದೆ. ಸ್ತ್ರೀಯ ಗರ್ಭಕೊಶದ ಶೋಷಣೆಯು ಅಮೃತಾ ಪ್ರೀತಂ ಅವರ ಒಂದು ನಿಟ್ಟುಸಿರು ಕಥೆಯಲ್ಲಿಯೂ ಕಾಣುತ್ತದೆ. ವೀರೋಳ ಅತ್ತಿಗೆಯ ಸಮರ್ಥನೆ ಹೀಗಿದೆ. ಒಂದು ಸಲ ಚೀರುವುದು ನೋವಿಗಾಗಿ, ಇನ್ನೊಂದು ಸಲ ಚೀರುವುದು ದುಃಖಕ್ಕಾಗಿ, ಖುಷಿ ಏನಿದ್ದರೂ ಗಂಡು ಮಕ್ಕಳದು. ಹೆಣ್ಣು ಮಕ್ಕಳದೇನು ಖುಷಿ ಇರುತ್ತೆ? ಸ್ತ್ರೀಯ ಗರ್ಭಕೋಶದ ಶೋಷಣೆಯನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಸ್ತ್ರೀಯು ತನ್ನ ಯಾವುದೇ ತಪ್ಪು ಇಲ್ಲದಿದ್ದರೂ ಇಲ್ಲಿ ಶೋಷಣೆಗೆ ಒಳಗಾಗುತ್ತಾಳೆ.

ತಾರೋ, ವೀರೋ, ಅಂಗೂರಿ ಈ ಪಾತ್ರಗಳನ್ನು ಇನ್ನಷ್ಟು ಹತ್ತಿರದಿಂದ ನೋಡುವುದಾದರೆ, ತಾರೋ ತನ್ನ ಅಸ್ಮಿತೆಗಾಗಿ ಹೋರಾಡುತ್ತಿರುವ ಪಾತ್ರವಾಗಿ ಗೋಚರಿಸುತ್ತಾಳೆ. ಅವಳು ಸದಾ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. ಗಂಡನನ್ನು ಬಿಟ್ಟು ಬದುಕಲು ಹೊರಟವಳಿಗೆ ನೂರಾರು ಕಣ್ಣುಗಳು, ಸಾವಿರಾರು ಧನಿಗಳು ವಿರುದ್ಧವಾಗಿ ಮಾತಾಡುತ್ತವೆ. ಸ್ವತಃ ತವರು

ಮನೆಯಲ್ಲಿಯೇ ಅವಳಿಗೆ ನೆಮ್ಮದಿಯ ವಾತಾವರಣವಿಲ್ಲ. ಇದರ ಮಧ್ಯೆಯೂ ಅವಳು ಬಲವಂತವಾಗಿ ತನ್ನ ಗಂಡನ ಮನೆಗೆ ಹೋಗುವುದಿಲ್ಲ. ಏನೇ ಆದರೂ ಗಂಡನೇ ದೇವರು ಎನ್ನುವ ಸಮಾಜದಲ್ಲಿ ಬದುಕುತ್ತಿರುವ ತಾರೋಳಿಗೆ ಗಂಡನ ಮೋಸವನ್ನು ಸಹಿಸಿಕೊಂಡಿರಲು ಸಾಧ್ಯವಾಗುವುದಿಲ್ಲ. ಈ ಮಧ್ಯೆ ಅವಳಿಗೆ ಮೂರ್ಛೆ ರೋಗವೂ ಬಾಧಿಸುತ್ತದೆ. ಇದು ಅವಳು ತಾನೇ ತಂದುಕೊಂಡ ರೋಗ ವಾಗಿರುತ್ತದೆ. ಯಾರು ಎಷ್ಟೇ ಹೇಳಿದರೂ ಅವಳು ಗಂಡನ ಮನೆಗೆ ಹೋಗುವುದಿಲ್ಲ. ಅವಳ ನೋವು ಯಾರಿಗೆ ಕಾಣಿಸಲು ಸಾಧ್ಯ? 'ನನ್ನ ಬಾಯಿ ಮಾತ್ರ ಹೊಲಿಯಲ್ಪಟ್ಟಿದೆ. ನನ್ನ ಕಾಲುಗಳಿಗೆ ಮಾತ್ರ ಸಂಕೋಲೆಗಳನ್ನು ತೊಡಿಸಿದ್ದಾರೆ. ಈ ಪ್ರಪಂಚದಲ್ಲಿ ನ್ಯಾಯವೆಂಬುದೇ ಇಲ್ಲ. ಯಾವ ದೇವರೂ ಇಲ್ಲ. ಅವನು ಮನಸ್ಸಿಗೆ ಬಂದದ್ದನ್ನು ಮಾಡ್ತಾನೆ. ಅವನನ್ನು ತಡೆಯಲು ಯಾವ ದೇವರು ಇಲ್ಲ. ದೇವರ ಸಂಕೋಲೆ ನನ್ನ ಕಾಲಿಗೆ ಮಾತ್ರ ಇರುವುದು. ತಾರೋಗೆ ಮೂರ್ಛೆ ಬಂದಿತು. ಮತ್ತೆ ಅವಳು ಮುಷ್ಟಿ ಬಿಗಿದಳು. ಕಾಲುಗಳು ಸೆಟೆದುಕೊಂಡವು. ಅವಳಮ್ಮ ಮಗಳ ಮುಖಕ್ಕೆ ನೀರು ಚಿಮುಕಿಸಿದಳು. ಬಾಯಿಗೂ ನೀರು ಹಾಕಿದಳು.'[೧೨] ಗಂಡನಿಗೆ ಒಂದು ನ್ಯಾಯ ಹೆಂಡತಿಗೆ ಒಂದು ನ್ಯಾಯ. ಹೆಣ್ಣಿನ ದೌರ್ಜನ್ಯ ಶುರುವಾಗುವುದು ಮೊದಲು ಕೌಟುಂಬಿಕ ಹಿನ್ನಲೆಯಿಂದ. ನಂತರ ಸಮಾಜದ ಎಲ್ಲೆಡೆ ಯಿಂದಲೂ ದೌರ್ಜನ್ಯಗಳು ಇದ್ದದೇ. ಹೆಣ್ಣಿನ ಸಂಕಷ್ಟಗಳನ್ನು ಅರ್ಥಮಾಡಿಕೊಳ್ಳಬೇಕಾದ ತಾಯಿಯೇ ತಾರೋಳಿಗೆ ಬೆನ್ನುಲುಬಾಗಿ ಇರುವುದಿಲ್ಲ. 'ತಾರೋ ಗಾಳಿ ಹೋದ ಬಲೂನಿನಂತೆ ಕುಸಿದು ಕೂತಳು. ಗಂಡನ ಮನೆಗೆ ಮರಳಿ ಹೋದ ಮೇಲೆ ಈ ಬಗೆಯ ಮೂರ್ಖ ಮಾತುಗಳನ್ನು ಮತ್ತೆ ಆಡಬೇಡ ಎಂದು ಅಮ್ಮ ಮುಂದುವರೆಸಿದಳು. ಅವನು ಗಂಡಸು ಹೇಗೆ ಬೇಕಾದರೂ ನಡೆದುಕೊಳ್ಳಬಹುದು. ಅಲ್ಲಾ ಇದ್ದಾನೆ ತಪ್ಪು ಮಾಡಿದವರನ್ನು ನೋಡಿಕೊಳ್ಳಲು. ನಿನ್ನ ಮದುವೆಗೆ ಅಲ್ಲಾನೆ ಸಾಕ್ಷಿ.'[೧೩] ಇಷ್ಟೆಲ್ಲಾ ಆದರೂ ಮದುವೆ ಗಂಡನನ್ನು ಉಳಿಸಿಕೊಳ್ಳುವ ಪ್ರಯತ್ನವಂತು ತಾರೋ ಮಾಡುವುದಿಲ್ಲ. ತನಗೆ ಸರಿ ಅನಿಸಿದ್ದನ್ನು ಮಾಡುವ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಅವಳು ಮಾಡುತ್ತಾಳೆ. 'ಅಮ್ಮ ಅಲ್ಲಾ ನನ್ನ ಮದುವೆಗೆ ಸಾಕ್ಷಿಯಾದರೆ ಅವನು ಸುಳ್ಳು ಸಾಕ್ಷಿ, ನನಗೆ ಮದುವೆ ಆಗೇ ಇಲ್ಲ, ಇಲ್ಲ, ಯಾವಾಗಲೂ ಇಲ್ಲ, ತಾರೋ ಭಾವಣಿಯ ತೊಲೆಯನ್ನು ದಿಟ್ಟಿಸುತ್ತ ಸುಮ್ಮನಾದಳು.'[೧೪]

ಇನ್ನು ಅಂಗೂರಿ ಮುಗ್ಧತೆಯನ್ನು ಉಳಿಸಿಕೊಂಡಿರುವ ಪಾತ್ರವಾಗಿದೆ. ತನ್ನ ಅಸ್ಮಿತೆಯನ್ನು ಹುಡುಕುವ ಹೆಣ್ಣಾಗಿ ನಮಗೆ ಕಾಣಿಸುತ್ತಾಳೆ. ತನಗೆ ಇಷ್ಟವಾದದ್ದು ಒಂದಿದೆ, ತನಗೆ ಏನೋ ಬೇಕು ಎಂದು ಅವಳಿಗೆ ಅನಿಸುತ್ತಿದ್ದರೂ, ಮುಗ್ದತೆಯ ಸಲುವಾಗಿ ಅವಳು ಸರಿ ತಪ್ಪುಗಳ ಹುಡುಕಾಟದಲ್ಲಿ ತೊಡಗುತ್ತಾಳೆ. ಮದುವೆಗೆ ಮೊದಲು ಹುಡುಗಿ ಹುಡುಗನನ್ನು ಇಷ್ಟಪಡುವುದು, ಪ್ರೇಮಿಸುವುದು ಅವಳ ಲೆಕ್ಕದಲ್ಲಿ ಪಾಪ ಮಾಡಿದಂತೆ. ಇದು ಅವಳು ನೆಲೆಸಿರುವ ಸಮಾಜದ ಒಂದು ನಂಬಿಕೆ ಆಗಿದೆ. ಇದನ್ನು ಅವಳು ಪ್ರಬಲವಾಗಿ ನಂಬಿರುತ್ತಾಳೆ. ಹಾಗಾಗಿ ಮದುವೆಯ ನಂತರ ಅವಳು ರಾಮ್ ತಾರ್‌ನನ್ನು ಇಷ್ಟ

ಪಟ್ಟರೂ ಅವಳೇ ಅವನನ್ನು ಒಪ್ಪಲು ತಯಾರಿರುವುದಿಲ್ಲ. ಅವಳಿಗೆ ಸರಿ ತಪ್ಪುಗಳು ಕಾಡುತ್ತಿರುತ್ತವೆ. ಗಿಡಮೂಲಿಕೆ ಏನಾದರೂ ತನಗೆ ತಿನ್ನಿಸಿರುತ್ತಾನೋ ಎಂದು. ತನ್ನ ಅಸ್ತಿತ್ವವನ್ನು ಅಂಗೂರಿ ಹುಡುಕುವ ಪ್ರಯತ್ನವನ್ನು ಮಾಡುತ್ತಾಳೆ. 'ಅಂಗೂರಿಯ ಕಣ್ಣುಗಳಿಂದ ನೀರು ಎರಡು ಧಾರೆಯಾಗಿ ಹರಿದು ತುಟಿಗಳ ಮೇಲಿಂದ ಸಾಗಿ ಅವಳ ಬಾಯ ಹತ್ತಿರ ಮಡುಗಟ್ಟಿ ನಿಂತಿತು. ಅಂಗೂರಿಯ ಬಾಯಿಂದ ಹೊರಟ ಅಕ್ಷರಗಳು ನೆನೆದಿದ್ದವು. ಗದ್ಗದ ಕಂಠದಿಂದ ಹೇಳತೊಡಗಿದಳು. ನಾನು ಅಡಕೆಲೆ ಕೂಡ ತಗೊಂಡಿರಲಿಲ್ಲ. ಕೇವಲ ಟೀ ಮಾತ್ರ.. ಅವನು ಟೀನಲ್ಲೇ.. ಗೊತ್ತಿಲ್ಲ.. ಅವಳಿಗೆ ತನ್ನ ಮಾತನ್ನು ಪೂರ್ತಿ ಮಾಡಲಿಲ್ಲ. ಅಂಗೂರಿಯ ಮಾತುಗಳೆಲ್ಲವೂ ಕಣ್ಣೀರಿನಲ್ಲಿ ಮುಳುಗಿ ಹೋದವು.'[೧೫]

ಇನ್ನು ವೀರೋಳ ಪಾತ್ರವನ್ನು ನೋಡುವುದಾದರೆ ಕತೆಯಲ್ಲಿ ಹೇಗೆ ಮುಖ್ಯ ಪಾತ್ರವೋ, ಗಟ್ಟಿತನ ಉಳ್ಳ ಪಾತ್ರವೂ ಆಗಿದೆ. ವೀರೋ ಎರಡನೆ ಹೆಂಡತಿಯಾಗಿ ಸರದಾರನ ಮನೆ ಸೇರಿದಾಗ ಯಾವ ಸಂತೋಷವೂ ಅವಳಿಗೆ ಪ್ರಾಪ್ತವಾಗಿರಲಿಲ್ಲ. ಬಡತನದ ಕಾರಣಕ್ಕಾಗಿ ಅವಳನ್ನು ಒಬ್ಬ ಮುದುಕನಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ. ಅವಳಿಗೆ ಏನು ಬೇಕೊ ಅದೆಲ್ಲವನ್ನು ತಾಯಿ, ಅತ್ತೆ, ಸವತಿ ಎಲ್ಲಾ ಪಾತ್ರವನ್ನು ಒಬ್ಬಳೇ ನಿಭಾಯಿಸುತ್ತಿರುವ ನಿಹಾಲ್ ಕೌರಳು ಒದಗಿಸುತ್ತಿರುತ್ತಾಳೆ. 'ಇದು ಬಯಕೆಯ ಸಮಯವಾಗಿತ್ತು. ವೀರೋ ಒಂದು ವೇಳೆ ಬಯಸಿದ್ದರೆ, ದೇಶ, ವಿದೇಶಗಳಿಂದ ತನಗೆ ಇಷ್ಟವಾದ ವಸ್ತುಗಳನ್ನು ತರಿಸಿಕೊಂಡು ಬಯಕೆ ಗಳನ್ನು ಈಡೇರಿಸಿಕೊಳ್ಳಬಹುದಿತ್ತು. ಆದರೆ ಉಪ್ಪಿನ ಕಾಯಿಯ ಒಂದು ಸಣ್ಣ ಹೋಳಿಗಾಗಿ, ಸಂಕೋಚದಿಂದ ಎರಡೆರಡು ಸಲ ಮುಖ ನೋಡುತ್ತಿದ್ದಳೆಂದು ನಿಹಾಲ್ ಕೌರಳಿಗೆ ಗೊತ್ತಿತ್ತು. ಹೀಗಾಗಿ ಸ್ವತಃ ನಿಹಾರ್ ವೀರೋಳ ಬಯಕೆಗಳ ನಿಗಾ ವಹಿಸುತ್ತಿದ್ದಳು.'[೧೬] ಸರದಾರ ವೀರೋಳನ್ನು ಮದುವೆಯಾದದ್ದೆ ಗಂಡು ಮಗುವನ್ನು ಪಡೆ ಯುವುದಕ್ಕಾಗಿ. ಆ ಕಾಲವು ಬಂದಿತು. ವೀರೋ ಗರ್ಭಿಣಿಯಾದಳು. ಮಗುವನ್ನು ಪಡೆದಳು. ಆದರೆ ಮಗು ಸರದಾರನದ್ದಾಗಿರಲಿಲ್ಲ. ಗುಮಾಸ್ತ ಮದನಸಿಂಹನದ್ದಾಗಿತ್ತು. 'ನಾನು ಊರಿಗೆ ಬಂದ ಮೇಲೆ, ಪ್ರತಿಯೊಬ್ಬರು ನನ್ನ ಸರದಾರ ಎಷ್ಟು ಮುದುಕ ಎಂದು ಹೇಳತೊಡಗಿದರು. ನಾನು ಅವರ ಕಾಟ ತಪ್ಪಿಸಿಕೊಳ್ಳಲು ನಿಮ್ಮ ಗುಮಾಸ್ತ ಒಳ್ಳೆಯ ಯುವಕ, ಸುಂದರವಾಗೂ ಇದ್ದ. ಅವನನ್ನು ತೋರಿಸಿ ಇವನೇ ನನ್ನ ಯಜಮಾನ ಎಂದು ಹೇಳಿದೆ. ನಾನು ಐದಾರು ದಿನ ಇಲ್ಲಿದ್ದೆ. ದಿನವೂ ನಗುತ್ತಾ ನಗುತ್ತಾ ಇದ್ದ ಕಾರಣ ನನ್ನ ಮದುವೆ ಅವರ ಜೊತೇನೆ ಆಗಿತ್ತೇ ಹೊರತು, ಬೇರೆ ಇನ್ಯಾರ ಜೊತೆಯಲ್ಲೂ ಅಲ್ಲ ಎಂದು ನನಗು ಅನ್ನಿಸತೊಡಗಿತು. ಅವನು ಎಲ್ಲೇ ಇರಲಿ, ಸಂತೋಷ ವಾಗಿರಲಿ ಎಂದು ನನಗೂ ಅನ್ನಿಸತೊಡಗಿತು. ಅವನು ಎಲ್ಲೇ ಇರಲಿ, ಸಂತೋಷ ವಾಗಿರಲಿ, ಯೌವನವಂತ ವ್ಯಕ್ತಿ ಹೇಗೆ ಇರುತ್ತಾನೆ ಅಂತ ನಾನು ಒಂದು ಸಲವಂತೂ ನೋಡಿದೆ.'[೧೭] ಇಲ್ಲಿ ವೀರೋಳದ್ದು ವಿಶೇಷ ಪಾತ್ರ. ಮುದುಕನಿಂದ ಯಾವುದೇ ಸುಖವನ್ನು ಮಗುವನ್ನು ಪಡೆಯದ ವೀರೋ ಸುಂದರ ಯುವಕನಿಗೆ ಮನ

ಸೋಲುತ್ತಾಳೆ. ಅವಳು ಸರಿ ತಪ್ಪುಗಳ ಗೊಡವೆಗೆ ಹೋಗುವುದಿಲ್ಲ. ಅಂಗೂರಿ ಹಾಗೂ ವೀರೋ ಪಾತ್ರಗಳಿಗಿರುವ ವ್ಯತ್ಯಾಸ ಅಜಗಜಾಂತರ ಎಂದು ಹೇಳಬಹುದಾಗಿದೆ. ಮುಗ್ಧ ಅಂಗೂರಿಯು ಮದುವೆಯ ನಂತರ ಒಬ್ಬನನ್ನು ಇಷ್ಟಪಡುತ್ತಾಳೆ. ಅದನ್ನು ಅಂಗೂರಿಯೇ ಒಪ್ಪುವುದಿಲ್ಲ. ವೀರೋಳದ್ದು ಇದೇ ಕಥೆಯೇ ಮದುವೆಯ ನಂತರ ಅವಳಿಗೆ ಮದನಸಿಂಹ ಇಷ್ಟವಾಗುತ್ತಾನೆ. ಅವನಿಂದ ಮಗುವನ್ನು ಪಡೆಯುತ್ತಾಳೆ. ಅವಳಿಗೆ ಸರಿ ತಪ್ಪುಗಳು ಬೇಕಾಗಿಲ್ಲ. ಇಲ್ಲಿ ಅವಳು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಂತೆ ನಮಗೆ ಕಾಣುತ್ತಾಳೆ. ಅವಳಿಗೆ ಏನು ಬೇಕೋ ಅದನ್ನು ಅವಳು ಪಡೆದಿದ್ದಾಳೆ. ತಾನು ತಪ್ಪು ಮಾಡಿದೆ ಎಂದು ಅವಳಿಗೆ ಅನಿಸುವುದಿಲ್ಲ. ಈ ರೀತಿಯ ವಿಷಮ ದಾಂಪತ್ಯಗಳು ನಮಗೆ ಗೋಚರಿಸಿದರೂ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪಾತ್ರವಾಗಿ ವೀರೋ ನಮಗೆ ಕಾಣಿಸುತ್ತಾಳೆ. ಲೈಂಗಿಕತೆಯ ಪ್ರಶ್ನೆ ಗಳು ಇಲ್ಲಿ ಗೋಚರವಾಗುವುದರಿಂದ ಮನೋವಿಶ್ಲೇಷಣಾತ್ಮಕ ಸ್ತ್ರೀವಾದ ಹಾಗೂ ಲೆಸ್ಬಿಯನ್ ಸ್ತ್ರೀವಾದ ಈ ಎರಡು ಸ್ತ್ರೀವಾದಗಳನ್ನು ಇಲ್ಲಿ ಚರ್ಚಿಸಬೇಕಾಗುತ್ತದೆ.

ಮನೋವಿಶ್ಲೇಷಣಾತ್ಮಕ ಸ್ತ್ರೀವಾದದ ಸಿದ್ಧಾಂತವು ಲೈಂಗಿಕತೆಯ ಪರಿಕಲ್ಪನೆಗೆ ಸಂಬಂಧಿಸಿ ದಂತೆ ಹೆಣೆದಿರುವ ಒಂದು ಸ್ತ್ರೀವಾದಿ ಧೋರಣೆಯಾಗಿದೆ. 'ಲಿಂಗ ವ್ಯವಸ್ಥೆ ಎನ್ನುವುದು ಲೈಂಗಿಕ ಪಕ್ವತೆಯ ಒಂದು ಸೃಷ್ಟಿ. ವಿಭಿನ್ನವಾದ ಲೈಂಗಿಕ ಅನುಭವಗಳಿಗೆ ಒಳಪಡುವ ಬಾಲಕ ಬಾಲಕಿಯರು ವಿಭಿನ್ನವಾದ ಲಿಂಗ ಪಾತ್ರಗಳನ್ನು ಸ್ವೀಕರಿಸುತ್ತಾರೆ ಎಂಬುದು ಫ್ರಾಯ್ಡ್‌ನ ವಿಶ್ಲೇಷಣೆ ಯಾಗಿತ್ತು.'[೧೮] ಫ್ರಾಯ್ಡನ ವಿಚಾರ ಸರಣಿಯನ್ನು ಅನೇಕ ಸ್ತ್ರೀವಾದಿಗಳು ಕಟುವಾಗಿ ಟೀಕಿಸಿದ್ದಾರೆ. ಪುರುಷ ಪ್ರಾಧಾನ್ಯ ಅಥವಾ ಸ್ತ್ರೀಯ ಪರಾಧೀನತೆಗಳೆರಡೂ ಸಮಾಜದ ರಚನೆಗಳೇ ಹೊರತು ಸ್ತ್ರೀಯ ಜೈವಿಕತೆಗೆ ಸಂಬಂಧಿಸಿದ್ದಲ್ಲ. ಆದುದರಿಂದ ಫ್ರಾಯ್ಡನ ವಿಚಾರಧಾರೆಯೇ ಅಸಂಗತ ಎಂಬ ವಿಚಾರವನ್ನು ಬೆಟ್ಟಿಫ್ರಿಡನ್, ಶೂಲಮಿಥ್ ಫೈರ್‌ಸ್ಟೋನ್ ಮತ್ತು ಕೇಟ್ ಮಿಲೆಟ್ ಅವರ ವಿಮರ್ಶೆಗಳಲ್ಲಿ ಕಾಣ ಬಹುದು. ಲೈಂಗಿಕತೆಗೆ ನೀಡಿರುವ ಅತಿಯಾದ ಪ್ರಾಶಸ್ತ್ಯವೇ ಸ್ತ್ರೀಯನ್ನು ಸಾರ್ವಜನಿಕ ಜೀವನ ಹಾಗೂ ಸಂಸ್ಥೆಗಳಿಂದ ದೂರವಿರಿಸಲು ಪ್ರಮುಖ ಕಾರಣವಾಗಿದ್ದು, ಸ್ತ್ರೀಯಲ್ಲಿ ಕೀಳರಿಮೆಯ ಭಾವನೆಯನ್ನು ಮೂಡಿಸಿದೆ. 'ಪುರುಷತ್ವದ ಸಂಕೇತವಾದ ಅಂಗಾಂಗಗಳನ್ನು ತಾನು ಪಡೆದಿಲ್ಲವೆಂಬ ಕಾರಣಕ್ಕಾಗಿ ಸ್ತ್ರೀಯು ತಾಯ್ತನದಲ್ಲಿ ತನ್ನ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುತ್ತಾಳೆ ಎಂಬ ಭಾವನೆಯನ್ನೇ ಸುಳ್ಳು ಎಂದು ಕರೆದಿರುವ ಫ್ರೀಡನ್ ಲೈಂಗಿಕತೆಯೇ ಸ್ತ್ರೀಯ ಜೀವನದ ಪರಮಗುರಿ ಎಂಬಂತೆ ಪರಿಗಣಿಸಿರುವ ಫ್ರಾಯ್ಡನನ್ನು ಕಟುವಾಗಿ ಟೀಕಿಸಿದ್ದಾಳೆ.'[೧೯]

ಇಲ್ಲಿ ಫ್ರಾಯ್ಡ್‌ನ ವಿಚಾರಗಳು ಅಷ್ಟು ಸಮಂಜಸವಾಗಿಲ್ಲ. ಲೈಂಗಿಕತೆಯು ಒಂದು ನೈಸರ್ಗಿಕ ಕ್ರಿಯೆಯಾಗಿದ್ದು, ಇದನ್ನು ಪುರುಷ ಪ್ರಾಧಾನ್ಯದಿಂದಲೂ, ಸ್ತ್ರೀ ಪರಾಧಿನತೆಯಿಂದಲೂ ನೋಡುವುದು ಸರಿಯಲ್ಲ.

ವೀರೋಳ ಲೈಂಗಿಕತೆಯ ಸಂಬಂಧದ ಸ್ವತಂತ್ರ ಬದುಕು ಸರಿಯಾಗಿಯೇ ಇದೆ. ಅವಳು ತನ್ನ ಅಸ್ತಿತ್ವವನ್ನು ಕಂಡುಕೊಂಡಿದ್ದಾಳೆಂದು ಲೆಸ್ಬಿಯನ್ ಸ್ತ್ರೀವಾದವನ್ನು ಗಮನಿಸಿದಾಗ ನಮಗೆ ತಿಳಿಯುತ್ತದೆ. ಹೆಣ್ತನದ ಸತ್ವ ಮತ್ತು ಲೈಂಗಿಕ ವ್ಯತ್ಯಾಸಕ್ಕೆ ಅತಿಯಾಗಿ ಒತ್ತುಕೊಟ್ಟು ಸ್ತ್ರೀವಾದಿ ಪಂಥಗಳಲ್ಲಿ ಸ್ತ್ರೀವಾದಿಗಳ ನಡುವೆಯೂ ತಮ್ಮ ಅಸ್ತಿತ್ವ ಸ್ಥಾಪಿಸಲಿಕ್ಕಾಗಿ ಬಲವಾದ ಹಕ್ಕೊತ್ತಾಯ ಮಾಡಿ, ತಮ್ಮನ್ನು ಗುರುತಿಸುವಂತೆ ಮಾಡಿದ್ದು, ಲೆಸ್ಬಿಯನ್ ಸ್ತ್ರೀವಾದಿಗಳ ವಿಶೇಷತೆಯಾಗಿದೆ. ಸ್ತ್ರೀಯರ ನಡುವಿನ ಲೈಂಗಿಕ ಸಂಬಂಧಕ್ಕೆ ಆದ್ಯತೆ ನೀಡಿ, ಪುರುಷರ ಹೊರತಾಗಿಯು ತಮ್ಮ ವ್ಯಕ್ತಿತ್ವದ ಪರಿಪೂರ್ಣತೆ ಸಾಧ್ಯವೆಂದು ಸಮರ್ಥಿಸಿಕೊಳ್ಳುವುದಕ್ಕಾಗಿ ಲೆಸ್ಬಿಯನ್ ಸ್ತ್ರೀವಾದ ಹುಟ್ಟಿತು ಎಂದು ಹೇಳಬಹುದಾಗಿದೆ. 'ಭಿನ್ನ ಲಿಂಗೀಯ ಸಂಬಂಧ ಲೈಂಗಿಕ ಸಂಬಂಧಗಳ ಅನೇಕ ಸಾಧ್ಯತೆಗಳಲ್ಲಿ ಒಂದು ಅಷ್ಟೆ. ಅದು ಜನಪ್ರಿಯ ಎಂಬುದಕ್ಕಾಗಿ ಅದೊಂದೇ ಸರಿಯಾದದ್ದು ಎಂಬುದು ತಪ್ಪು ಕಲ್ಪನೆ. ವ್ಯಕ್ತಿಯ ಆಯ್ಕೆಗೆ ಸ್ವಾತಂತ್ರವಿರಬೇಕು. ಬಂಧನಗಳಿಂದ ಹೊರಬಂದು ಮಹಿಳೆಯರು ತಮ್ಮ ಬದುಕಿಗೆ ತಾವೇ ಜವಾಬುದಾರರಾಗಲೆಂಬುದು ಲೆಸ್ಬಿಯನ್ನರ ವಾದವಾಗಿದೆ. ಸ್ತ್ರೀಯರ ನಡುವಿನ ಲೈಂಗಿಕ, ಲೈಂಗಿಕೇತರ ಸಂಬಂಧಗಳ ಬಲದಿಂದ ಸ್ವಂತವಾದ, ಸ್ವತಂತ್ರವಾದ ಬದುಕನ್ನು ಬಾಳುವ ಜವಾಬ್ದಾರಿಯನ್ನು ಹೊತ್ತರೆ, ಸ್ತ್ರೀಯರು ಅವಲಂಬನೆ, ಶೋಷಣೆಗಳಿಂದ ಬಿಡುಗಡೆ ಹೊಂದಬಹುದೆಂಬುದು ಲೆಸ್ಬಿಯನ್ನರ ವಾದವಾಗಿದೆ.'[೨೦]

ಮನೋವಿಶ್ಲೇಷಣಾತ್ಮಕ ಸ್ತ್ರೀವಾದದಲ್ಲಿ ಫ್ರಾಯ್ಡ್ ಲೈಂಗಿಕತೆಯೇ ಸ್ತ್ರೀಯ ಜೀವನದ ಪರಮಗುರಿ ಎಂಬಂತೆ ಬಿಂಬಿಸುತ್ತಾನೆ. ಲೆಸ್ಬಿಯನ್ ಸ್ತ್ರೀವಾದವು ಸ್ತ್ರೀಯರ ನಡುವಿನ ಲೈಂಗಿಕ, ಲೈಂಗಿಕೇತರ ಸಂಬಂಧಗಳ ಬಲದಿಂದ ಸ್ವಂತವಾದ, ಸ್ವತಂತ್ರವಾದ ಬದುಕನ್ನು ಬಾಳುವ ಜವಾಬ್ದಾರಿಯನ್ನು ತೋರುತ್ತದೆ.

ಅಮೃತಾ ಪ್ರೀತಂ ಅವರ ಕಥನದಲ್ಲಿ ಸ್ತ್ರೀ ಅಸ್ಮಿತೆಯ ಚಹರೆಗಳನ್ನು, ಅಸ್ತಿತ್ವವನ್ನು ಉಳಿಸಿಕೊಂಡಿರುವ ಪಾತ್ರಗಳಾದ ಹಮೀದಾ, ತಾರೋ, ವೀರೋ ಪಾತ್ರಗಳಲ್ಲಿ ಗಮನಿಸಿದ್ದೇವೆ. ಈಗ ಅವರ ಕತೆಗಳಲ್ಲಿಯೇ ಕಾಣಸಿಗುವ ಇನ್ನೂ ಎರಡು ಪಾತ್ರಗಳ ಚರ್ಚೆ ಮಾಡಬೇಕಾಗಿದೆ. ಅವರೆಂದರೆ ಮೂರ್ತಿ ಹಾಗೂ ಧನ್ನೋ. ಈ ಪಾತ್ರಗಳು ಗಟ್ಟಿತನ ಉಳಿಸಿಕೊಂಡಿರುವ ಪಾತ್ರಗಳಾಗಿವೆ. ಮೂರ್ತಿ ಒಬ್ಬನನ್ನು ಪ್ರೀತಿಸಿ ಅವನಿಂದ ಮೋಸ ಹೋಗಿ ಅನಿವಾರ್ಯವಾಗಿ ಇನ್ನೊಬ್ಬನನ್ನು ಮದುವೆ ಆಗುತ್ತಾಳೆ. ಅವನಿಂದ ಮಗುವನ್ನು ಪಡೆಯುತ್ತಾಳೆ. ನಂತರ ಅವನನ್ನು ಕಳೆದುಕೊಂಡ ಮೇಲೆ ಅವಳಿಗೆ

ಅಷ್ಟೊಂದು ದುಃಖವೇನೂ ಆಗುವುದಿಲ್ಲ. ತನ್ನ ಅಕ್ಕನದು ಇದೇ ಪರಿಸ್ಥಿತಿ ಇರುವುದರಿಂದ ಇಬ್ಬರೂ ಜೊತೆಗೂಡಿ ಟೀಯನ್ನು ಮಾರಿ ಬದುಕುತ್ತಿರುತ್ತಾರೆ. ಇಬ್ಬರೂ ಗಂಡಸಿನಂತೆ ದುಡಿಯುತ್ತಿರುತ್ತಾರೆ. ಇದು ಅವರು ಬದುಕಿಗೇ ಹಾಕಿರುವ ಸವಾಲಾಗಿದೆ. ಇಬ್ಬರೂ ಒಬ್ಬನನ್ನೇ ಮದುವೆ ಆಗುವ ಅನಿವಾರ್ಯತೆ ಅವರದ್ದಾಗಿತ್ತು. ಇದಕ್ಕೆ ಇಬ್ಬರ ಹೊಂದಾಣಿಕೆ ಬಹಳ ಮುಖ್ಯವಾಗಿತ್ತು. ಮೂರ್ತಿಯನ್ನು ಮೆಚ್ಚಿದ ರಾಜ್ ಬಕ್ಷಿ ಮೂರ್ತಿಯನ್ನು ಮದುವೆ ಆಗಲು ಕೇಳಿದಾಗ ತನ್ನ ಅಕ್ಕ ರುಕ್ಮಿಯನ್ನೂ ಮದುವೆ ಆಗಬೇಕೆಂದು ಷರತ್ತು ಹಾಕುತ್ತಾಳೆ. ಈ ಷರತ್ತು ವಿಚಿತ್ರವಾಗಿದ್ದರೂ ತನಗೆ ದೊರಕುವ ಸುಖ ಅವಳಿಗೂ ಸಿಗಬೇಕು ಎನ್ನುವುದು ಅವಳ ಆಸೆಯಾಗಿದೆ. ತನ್ನ ಸುಖವನ್ನಷ್ಟೆ ನೋಡಿಕೊಳ್ಳುವ ಮೂರ್ತಿ ಇಷ್ಟು ವರ್ಷಗಳು ಜೊತೆಗಿದ್ದ ತನ್ನ ಅಕ್ಕನ ಸುಖವನ್ನು ಮನದಲ್ಲಿರಿಸಿಕೊಂಡಿದ್ದಾಳೆ. ತನ್ನ ವೈಯಕ್ತಿಕ ಬದುಕಿನ ಆಯ್ಕೆಯನ್ನು ಸರ್ವ ಸ್ವತಂತ್ರವಾಗಿ ಆರಿಸಿದ ಮೂರ್ತಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವ ಪಾತ್ರವಾಗಿ ನಮಗೆ ಕಾಣಿಸುತ್ತಾಳೆ. 'ರಾಜ್ ಬಕ್ಷಿಯವರು ಹೌದೆನ್ನುವಂತೆ ತಲೆ ಆಡಿಸಿದರು. ಮೂರ್ತಿಗೆ ಬಹುಶಃ ಈ ಹೌದನ್ನು ಇನ್ನೊಮ್ಮೆ ಕೇಳಬೇಕೆನಿಸಿರಬೇಕು. ಹಾಗಾಗಿ ಅವಳ ಬಾಯಿಂದ 'ಅಂದರೆ ರುಕ್ಮಿಯನ್ನೂ....?' ರಾಜ್ ಬಕ್ಷಿಯವರು ಮೂರ್ತಿಯ ಹಣೆಯ ಸನಿಹಕ್ಕೆ ತಮ್ಮ ತಲೆಯನ್ನು ತಂದು ಅವಳ ಹಣೆಯನ್ನು ಯಾವ ರೀತಿ ಚುಂಬಿಸಿದರೆಂದರೆ ಅವರ 'ಹೌದು' ಅವಳ ನಂಬಿಕೆಯೇ ಆಗಿಬಿಟ್ಟಿದೆ ಎನಿಸಿತು.'[೨೧]

ಧನ್ನೋ ಒಳ್ಳೆ ಛಾತಿವಂತ ಹೆಣ್ಣಾಗಿ ಹೆಸರು ಮಾಡಿದ್ದಳು. ಧನ್ನೋ ಒಳ್ಳೆ ಸುಖ ಸಮೃದ್ಧಿಯಿಂದ ಕೂಡಿದ ಮನೆತನದ ಹೆಣ್ಣು ಮಗಳು. ಅವಳನ್ನೂ ತೌರು ಮನೆಯಿಂದ ಓಡಿಸಿಕೊಂಡು ಬಂದವನೊಬ್ಬ ವೈಲಿ ಪಂಗಡದ ದಷ್ಟಪುಷ್ಟ ಯುವಕ. ಹತ್ತು ಹದಿನೈದು ದಿವಸ ಅವಳ ಜೊತೆಯಲ್ಲಿ ತಿರುಗಾಡಿ ಅವಳನ್ನು ಎಲ್ಲಿಗೋ ಮಾರಿ ಬಿಡುವ ಹಂಚಿಕೆ ಹಾಕಿದ್ದ. ಇದು ಧನ್ನೋಗೆ ಗೊತ್ತಾಗಿ ಅವನ ಮುಖಕ್ಕೆ ಹೊಡೆಯೋ 'ಹಾಗೆ ಮದುವೆ ಮಾಡಿಕೊಂಡ ಮೇಲೂ 'ಧೇಲಿ' (ಎಂಟಾಣೆ) ಮುರಿಸಿಕೊಂಡೇ ಅನ್ನ ಸಂಪಾದನೆ ಮಾಡಬೇಕು ಅನ್ನೋದಾದರೆ, ಹೋಗೋ ಹೊತ್ತಿನಲ್ಲಿ ನಿನ್ನ ಜೇಬನ್ನು ನಾನು ಯಾಕೆ ತುಂಬಿಸಲಿ....? ಎಂದು ಕೇಳಿಬಿಟ್ಟಳು.'[೨೨] ಯಾರಾದರೂ ಅವಳ ತಂಟೆಗೆ ಬಂದರೆ ಅವಳು ಸುಮ್ಮನಿರುತ್ತಿರಲಿಲ್ಲ. ಅವರ ಗ್ರಹಚಾರ ಬಿಡಿಸುತ್ತಿದ್ದಳು. ಯಾವ ಗಂಡಸಿಗೂ ಧನ್ನೋಳತ್ತ ತಲೆ ಎತ್ತಿ ನೋಡುವ ತಾಕತ್ತಿರಲಿಲ್ಲ. ಧನ್ನೋ ಒಳ್ಳೆ ಛಾತಿವಂತೆ ಹೆಣ್ಣಾಗಿ ಬದುಕು ಸಾಗಿಸಿದ್ದಳು. ಅವಳಿಗೆ ಬೇಕಾದ ಸ್ವತಂತ್ರ ಜೀವನವನ್ನು ಅವಳು ಪಡೆದಿದ್ದಳು. ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದಳು.

ಧನ್ನೋ ಹಾಗೂ ಮೂರ್ತಿ ಈ ಎರಡು ಪಾತ್ರಗಳು ಗಟ್ಟಿತನ ಉಳಿಸಿಕೊಂಡಿರುವ ಪಾತ್ರಗಳಾಗಿವೆ. ಹಾಗೆಯೇ ತಮ್ಮ ಜೀವನ ತಮ್ಮ ಆಯ್ಕೆ ಎನ್ನುವಂತೆ ಬದುಕು ಸಾಗಿಸಿದ ಪಾತ್ರಗಳಾ

ಗಿವೆ. ಇನ್ನೊಬ್ಬರ ಹಂಗು ಇಲ್ಲದೆ ಸ್ವತಂತ್ರ ಜೀವನವನ್ನು ತಮಗೆ ಬೇಕಾದಂತೆ ಬದುಕಿರುವ ಪಾತ್ರಗಳಾಗಿ ಗೋಚರಿಸುತ್ತವೆ.

ಸ್ತ್ರೀ ಅಸ್ಮಿತೆ, ಚಹರೆಗಳನ್ನು ಚರ್ಚಿಸುವಾಗ ಬೋವಾಳ ವಾದಗಳನ್ನು ಗಮನಿಸ ಬೇಕಾಗುತ್ತದೆ. ಇದುವರೆಗೂ ಕೆಲವು ಪಾತ್ರಗಳನ್ನು ವಿವಿಧ ಸ್ತ್ರೀವಾದ ಪಂಥಗಳೊಂದಿಗೆ ಸಮೀಕರಿಸಿ ನೋಡಲಾಗಿದೆ. ಇನ್ನು ಸ್ತ್ರೀ ಅಸ್ಮಿತೆಯ ಬಗ್ಗೆ ಬೋವಾ ಹೇಳುವ ಕೆಲವು ಮಾತುಗಳನ್ನು ನೋಡೋಣ. "ಸಮಾಜ ರಚನೆಗಳಲ್ಲಿಯೂ ಮತ್ತು ಪುರಾಣಗಳಲ್ಲಿಯೂ 'ತಾನು ಅನ್ಯ'(**The Self -The Other**) ಎಂಬ ಪರಿಕಲ್ಪನೆ ಹೇಗೆ ಅನಿವಾರ್ಯವಾಗುತ್ತದೆಂದು ಬೋವಾ ಚರ್ಚಿಸುತ್ತಾಳೆ. 'ಹೆಣ್ಣು ಹೇಗೆ ಅನ್ಯಳು, ಹೊರಗಿನವಳು ಆದಳು? ಎಂಬ ಪ್ರಶ್ನೆಯನ್ನೆತ್ತಿ, ಉತ್ತರಗಳನ್ನು ಇತಿಹಾಸ, ಧರ್ಮಶಾಸ್ತ್ರ, ಪುರಾಣಗಳು ಇವೆಲ್ಲವನ್ನು ವಿಶ್ಲೇಷಿಸುತ್ತಾಳೆ. ಇಂತಹ ವಿಶ್ಲೇಷಣೆಯಿಂದ ಬೋವಾ ತೀರ್ಮಾನಿಸುವುದೇನೆಂದರೆ, ಇತಿಹಾಸದ ಪ್ರಾರಂಭಿಕ ಘಟ್ಟದಿಂದಲೂ ಪುರುಷರ ಮಧ್ಯೆ ಹಂಚಿಹೋಗಿರುವ ಸ್ತ್ರೀಗೆ ಪ್ರತ್ಯೇಕ ಚರಿತ್ರೆಯಿಲ್ಲ. ಪ್ರತ್ಯೇಕ ಸಂಘಟನೆಯಿಲ್ಲ. ಪ್ರತ್ಯೇಕ ಅಸ್ತಿತ್ವವಿಲ್ಲ. ಇತಿಹಾಸದುದ್ದಕ್ಕೂ ಅವಳು ಪುರುಷನ ನೆರಳಾಗಿ ಬದುಕುತ್ತಾ ಬಂದಿದ್ದಾಳೆ. ಹೀಗೆ ಆದಿಯಿಂದಲೂ ಸ್ತ್ರೀಗೆ ಯಾವ ಅಸ್ತಿತ್ವವೂ ಇಲ್ಲ ಎಂದು ತೀರ್ಮಾನಿಸುವ ಬೋವಾ ಅಸ್ಮಿತೆಯನ್ನು ಉಳಿಸಿಕೊಳ್ಳಲು ಮಾಡಬೇಕಾದ್ದನ್ನು ಹೇಳುತ್ತಾಳೆ. ಸಂಪೂರ್ಣ ಸ್ತ್ರೀ ಸ್ವಾತಂತ್ರವನ್ನು ಬೋವಾ ಹೀಗೆ ಗುರುತಿಸುತ್ತಾಳೆ. ಅಸ್ತಿತ್ವವಾದದ ನೆಲೆಯಲ್ಲಿ ವಿವಿಧ ಸ್ವಾತಂತ್ರಗಳನ್ನು ಸತತವಾಗಿ ಶೋಧಿಸುವುದರ ಮೂಲಕವೇ ಪ್ರತಿಯೊಬ್ಬನೂ ಸ್ವತಂತ್ರನಾಗುತ್ತಾನೆ. ಅಜ್ಞಾತ, ಅಪಾರ ಭವಿಷ್ಯದತ್ತ ಗರಿಗೆದರಿ ಹಾರುವ ಸಾಧ್ಯತೆಯೊಂದೇ ನಮ್ಮ ಅಸ್ತಿತ್ವಕ್ಕೆ ಸಮರ್ಥನೆ. ಪ್ರತಿಯೊಬ್ಬಳ/ನ ಅಸ್ತಿತ್ವವು ಅರ್ಥಪೂರ್ಣವಾಗುವುದು ತನ್ನ ಮಿತಿಗಳನ್ನು ಮೀರಿ ಹೊರಬರುವ, ಸ್ವತಂತ್ರವಾಗಿ ಆಯ್ಕೆ ಮಾಡಿಕೊಂಡ ಯೋಜನೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ಅದಮ್ಯ ಬಯಕೆಯಲ್ಲಿ ಮಾತ್ರ."[೨೩]

ಇದುವರೆಗೂ ಅಮೃತಾ ಪ್ರೀತಂ ಅವರ ಕಥನದಲ್ಲಿ ಸ್ತ್ರೀ ಪಾತ್ರಗಳಲ್ಲಿನ ಸ್ತ್ರೀ ಅಸ್ಮಿತೆಗಾಗಿ ಹೋರಾಡುವ ಪಾತ್ರಗಳನ್ನು ಹಾಗೂ ಆ ಪಾತ್ರಗಳೊಂದಿಗೆ ಅನೇಕ ಸ್ತ್ರೀವಾದಗಳನ್ನು ಸಮೀಕರಿಸಿ ನೋಡಲಾಯಿತು. ಅಮೃತಾ ಪ್ರೀತಂ ಅವರ ಬದುಕು ಹೇಗೆ ದಿಟ್ಟತನದಿಂದ ಕೂಡಿದೆಯೋ ಅವರ ಕಥನದಲ್ಲಿನ ಸ್ತ್ರೀ ಪಾತ್ರಗಳೂ ಅಷ್ಟೇ ದಿಟ್ಟತೆಯನ್ನು ಉಳಿಸಿಕೊಂಡಿರುವ ಪಾತ್ರಗಳಾಗಿ ಗೋಚರಿಸುತ್ತವೆ.

ಟಿಪ್ಪಣಿಗಳು

೧ ಅಮೃತಾ ಪ್ರೀತಂ, ಪಿಂಜರ್, ಅನು: ಎಲ್.ಸಿ. ಸುಮಿತ್ರಾ, ಅಂಕಿತ ಪುಸ್ತಕ, ೨೦೦೬, ಪುಟ:೪೧

೨ ಅದೇ; ಪುಟ: ೪೧

೩ ಆರ್. ಇಂದಿರಾ, ಸ್ತ್ರೀವಾದ ದಿಕ್ಸೂಚಿ, ಸಮತಾ ಅಧ್ಯಯನ ಕೇಂದ್ರ, ೧೯೯೯, ಪುಟ : ೩೦-೩೧

೪ ಬಿ.ಎನ್. ಸುಮಿತ್ರಾಬಾಯಿ, ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೯, ಪುಟ : ೪೪-೪೫

೫ ಎಚ್.ಎಸ್. ಶ್ರೀಮತಿ, ಚಹರೆ, ಇಳಾ ಪ್ರಕಾಶನ, ಪುಟ : ೪

೬ ಅಮೃತಾ ಪ್ರೀತಂ, ಪಿಂಜರ್, ಅನು – ಎಲ್.ಸಿ. ಸುಮಿತ್ರ, ಅಂಕಿತ ಪುಸ್ತಕ, ೨೦೦೬, ಪುಟ : ೩೫

೭ ಅದೇ; ಪುಟ: ೩೫

೮ ಅಮೃತಾ ಪ್ರೀತಂ, ಅಮೃತಾ ಪ್ರೀತಂ ಅವರ ಆಯ್ದ ಕತೆಗಳು, ಅನು – ಡಾ. ಆರ್. ಲಕ್ಷ್ಮೀನಾರಾಯಣ, ಭಾವಯಿತ್ರಿ ಪ್ರಕಾಶನ, ೨೦೧೧, ಪುಟ : ೨೭

೯ ಅದೇ; ಪುಟ: ೩

೧೦ ಆರ್. ಇಂದಿರಾ, ಸ್ತ್ರೀವಾದ ದಿಕ್ಸೂಚಿ, ಸಮತಾ ಅಧ್ಯಯನ ಕೇಂದ್ರ, ೧೯೯೯, ಪುಟ: ೧೭, ೧೮

೧೧ ಡಾ.ಸಿ.ಎನ್. ರಾಮಚಂದ್ರನ್, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೧೦, ಪುಟ: ೮೭

೧೨ ಅಮೃತಾ ಪ್ರೀತಂ, ಪಿಂಜರ್, ಅನು – ಎಲ್.ಸಿ. ಸುಮಿತ್ರಾ, ಅಂಕಿತ ಪ್ರಕಾಶನ, ೨೦೦೬, ಪುಟ: ೩೫ – ೩೬

೧೩ ಅದೇ; ಪುಟ: ೩೬

೧೪ ಅದೇ; ಪುಟ: ೩೬

೧೫ ಅಮೃತಾ ಪ್ರೀತಂ, ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಅನು – ಡಾ. ಆರ್. ಲಕ್ಷ್ಮೀನಾರಾಯಣ, ಭಾವಯಿತ್ರಿ ಪ್ರಕಾಶನ, ೨೦೧೧, ಪುಟ : ೯

೧೬ ಅದೇ; ಪುಟ: ೨೬

೧೭ ಅದೇ; ಪುಟ: ೨೮, ೨೯

೧೮ ಆರ್. ಇಂದಿರಾ, ಸ್ತ್ರೀವಾದ ದಿಕ್ಸೂಚಿ, ಸಮತಾ ಅಧ್ಯಯನ ಕೇಂದ್ರ, ೧೯೯೯, ಪುಟ: ೩೫

೧೯ ಅದೇ; ಪುಟ: ೩೪, ೩೫

೨೦ ಬಿ.ಎನ್. ಸುಮಿತ್ರಾಬಾಯಿ, ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೯, ಪುಟ: ೫೪ – ೫೫

೨೧ ಅಮೃತಾ ಪ್ರೀತಂ, ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಅನು – ಡಾ. ಆರ್. ಲಕ್ಷ್ಮೀ ನಾರಾಯಣ, ಭಾವಯಿತ್ರಿ ಪ್ರಕಾಶನ, ೨೦೧೧, ಪುಟ: ೧೦೩

೨೨ ಅದೇ; ಪುಟ: ೧೧೪

೨೩ ಡಾ. ಸಿ.ಎನ್. ರಾಮಚಂದ್ರನ್, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೧೦, ಪುಟ ; ೮೬, ೮೭

ಆ) ಹೆಣ್ಣು – ದೇಹ – ಮನಸ್ಸು

ಸಮಾಜ ಹೆಣ್ಣನ್ನು ನೋಡುವುದು ಭೋಗದ ವಸ್ತುವಾಗಿಯೇ. ಹೆಣ್ಣಿನ ಶೋಷಣೆ ಅವರ ಆರ್ಥಿಕತೆ ಹಾಗೂ ಲೈಂಗಿಕತೆಗಳೆರಡನ್ನೂ ಆಕ್ರಮಿಸುವ ದುರಂತವೆಂಬಂತೆ. ಮಹಿಳೆಯರ ಮೇಲಿನ ಈ ಶೋಷಣೆಯೂ ಹೊಸದೇನಲ್ಲ. ಲೈಂಗಿಕ ಕಿರುಕುಳ, ಹಿಂಸೆ, ದೌರ್ಜನ್ಯಗಳು ಮೊದಲಿನಿಂದಲೂ ಇದ್ದೇ ಇದೆ. ಹಿಂಸೆ, ದೌರ್ಜನ್ಯಗಳು ಬರಿಯ ಹೆಣ್ಣಿನ ಮೇಲೆ ನಡೆಯುತ್ತಿಲ್ಲ. ಅವಳ ದೇಹ ಹಾಗೂ ಮನಸ್ಸಿನ ಮೇಲು ನಡೆಯುತ್ತಲಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಹೆಣ್ಣು, ದೇಹ, ಮನಸ್ಸು ಈ ಮೂರೂ ಬೇರೆ ಬೇರೆ ಅಂಶಗಳಾಗಿವೆ. ಹೆಣ್ಣಿನ ದೇಹಕ್ಕೆ, ದೇಹ ಸೌಂದರ್ಯಕ್ಕೆ ಅತಿಯಾದ ಪ್ರಾಮುಖ್ಯತೆಯನ್ನು ಕೊಡುವ ಸಮಾಜವು ಅವಳ ಮಾನಸಿಕ ಸ್ಥಿತಿಯ ಬಗ್ಗೆ ಎಂದೂ ಯೋಚಿಸುವುದಿಲ್ಲ. ಅಮೃತಾ ಪ್ರೀತಂ ಅವರ ಕಥನದಲ್ಲಿ, ಕೆಲವು ಪಾತ್ರಗಳಲ್ಲಿ ಹೆಣ್ಣು, ದೇಹ, ಮನಸ್ಸು ಬೇರೆ ಬೇರೆಯಾಗಿರುವುದನ್ನು ಗುರುತಿಸ ಬಹುದಾಗಿದೆ. ಇಲ್ಲಿ ಮೊದಲಿಗೆ ಹೆಣ್ಣು, ಅವಳ ಸ್ವಭಾವವನ್ನು ಕುರಿತ ಕೆಲವು ಚರ್ಚೆಗಳನ್ನು ಮಾಡಲಾಗುತ್ತದೆ. ಹೆಣ್ಣಿನ ಸ್ವಭಾವವನ್ನು ಕುರಿತ ವೈಜ್ಞಾನಿಕ ನಿಲುವುಗಳನ್ನು ಸಹ ನೋಡ ಲಾಗುತ್ತದೆ.

ಹೆಣ್ಣಿನ ಸ್ವಭಾವ ಕುರಿತು 'ವೈಜ್ಞಾನಿಕವಾಗಿ' ಸಾಕಷ್ಟು ಸಂಶೋಧನೆಗಳು ನಡೆದಿವೆ. ಅವಳ ವರ್ತನೆ ಹಾಗೂ ಸ್ವಭಾವಗಳು ಒಂದಕ್ಕೆ ಒಂದು ಹೊಂದಾಣಿಕೆ ಆಗುವುದಿಲ್ಲ ಎಂಬ ಸತ್ಯವನ್ನು ಇತ್ತೀಚಿನ ಸಂಶೋಧನೆಗಳು ದೃಢೀಕರಿಸಿವೆ. 'ನೋಮಿ ವೀಸ್ಟನ್' ಎಂಬಾಕೆ ಅಮೇರಿಕದ ಹಲವು ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಮನಃಶಾಸ್ತ್ರದ ಪ್ರೊಫೆಸರಳಾಗಿ ಪ್ರತಿಭೆ, ಪ್ರಜ್ಞೆಗಳಂತಹ ಕ್ಷೇತ್ರಗಳಲ್ಲಿ ಸಂಶೋಧನೆಯಲ್ಲಿ ನಿರತಳಾದಳು. ಮನೋವಿಜ್ಞಾನದಲ್ಲಿ ತಜ್ಞಳೆನಿಸುತ್ತಾ ಹೋದಂತೆಲ್ಲಾ ಆಕೆಗೆ ಆ ಜ್ಞಾನಕ್ಷೇತ್ರವು ಈವರೆಗೆ ನಡೆಸಿರುವ ಹಲವು ಮುಖ್ಯ ಚಿಂತನೆಗಳು ಸಾಕ್ಷ್ಯಾಧಾರಗಳೇ ಇಲ್ಲದ ಪೊಳ್ಳು ಭ್ರಮೆಗಳೆಂಬುದು ಹೊಳೆಯತೊಡಗಿತು. ಅದರಲ್ಲೂ ವ್ಯಕ್ತಿಯ ವರ್ತನೆಗಳನ್ನು ಅಧ್ಯಯನ ಮಾಡುವ ಮೂಲಕ ಆ ವ್ಯಕ್ತಿಯ ಮೂಲ ಸ್ವಭಾವಗಳನ್ನು ಗ್ರಹಿಸಬಹುದು ಎಂಬ ಚಿಂತನೆ ಯಂತೂ ಅದೆಷ್ಟು ಭ್ರಮಾತ್ಮಕವಾದುದು ಎಂಬುದರ ಅರಿವಿನೊಂದಿಗೆ, ಈ ಚಿಂತನೆಯು ಹೆಣ್ಣಿಗೆ ಮಾಡಿರುವ ತೀವ್ರ ಅನ್ಯಾಯವೂ ಸ್ಪಷ್ಟವಾಗಿ ಕಾಣತೊಡಗಿತು. ಅಮೃತಾ ಪ್ರೀತಂ ಅವರ 'ಮೂರನೆ ಹೆಣ್ಣು' ಕತೆಯಲ್ಲಿ ಮೀನೂ ಗಂಡನನ್ನು ಕಳೆದುಕೊಂಡು ತವರಿನಲ್ಲಿ ಇರುತ್ತಾಳೆ. ಅವಳು ಸಾಕಿರುವ ಗಂಡನ ಪ್ರತಿ ರೂಪದಂತೆ ಇರುವ ಅಕ್ಕನ ಮಗ ಅವಿನಾಶನೊಂದಿಗೆ ಒಂದು ರಾತ್ರಿ ಕಳೆಯುತ್ತಾಳೆ. ಬೆಳಿಗ್ಗೆ ಅವಳು ಮೂರನೇ ಹೆಣ್ಣಾಗಿ ಹೊರಬರುತ್ತಾಳೆ. ನಿಜದಲ್ಲಿ ಅವಳ ಸ್ವಭಾವ ಈ ರೀತಿಯಲ್ಲಿ ಇರುವುದಿಲ್ಲ. ಗಂಡ ತೀರಿಕೊಂಡ ನಂತರ ಯಾವ ಹುಡುಗನಿಗೂ ಮನಸೋತಿರುವುದಿಲ್ಲ. ಮೇಲಿನ ಘಟನೆಯು ಆಕಸ್ಮಿಕ

ವಾಗಿ ಸಂಭವಿಸುತ್ತದೆ. 'ಇದು ಆತ್ಮವು ಆತ್ಮವನ್ನು ಸ್ಪರ್ಶಿಸುವಂತ ಶಾಂತ ಕ್ಷಣವಲ್ಲ. ಬದಲಿಗೆ ಒಂದು ಹೆಣ್ಣು ತನ್ನ ಮನಸ್ಸಿನ ಸಂಸ್ಕಾರಗಳ ಮೇಲೆ ಹೆಜ್ಜೆ ಇಟ್ಟು ಅಲಭ್ಯವಾದ್ದನ್ನು ಹುಡುಕುತ್ತಿರುವಂಥ ಹಾಗೂ ಒಂದು ಗಂಡು ಬಹಳ ಗಾಬರಿಗೊಂಡು ತನ್ನ ವಯಸ್ಸಿಗಿಂತಲೂ ಬಹಳ ದೊಡ್ಡವನಾಗಿಬಿಟ್ಟಂಥ ಪ್ರಳಯದ ಒಂದು ಕ್ಷಣ. ಆ ಮೇಲೆ ಅಂದು ಬೆಳಿಗ್ಗೆ ಕೊಠಡಿಯಿಂದ ಹೊರ ಹೊರಟ ಹೆಣ್ಣು, ಅವಳು ಒಬ್ಬ ಮೂರನೇ ಹೆಣ್ಣಾಗಿದ್ದಳು.'[1] ಹೀಗೆ ಅವಳ ಸ್ವಭಾವ ಇರುವುದು ಒಂದಾದರೆ ಆಕಸ್ಮಿಕವಾಗಿ ನಡೆದ ಘಟನೆಯಿಂದ ಅವಳ ವರ್ತನೆ ಬದಲಾಯಿತು. ವರ್ತನೆಗಳಿಗೂ, ಸ್ವಭಾವಗಳಿಗೂ ಸಂಬಂಧವೇ ಇರುವುದಿಲ್ಲ ಎಂದು ಇದರಿಂದ ತಿಳಿಯುತ್ತದೆ.

ಇನ್ನು ಮಹಿಳೆಯ ಸ್ವಭಾವವನ್ನು ವಿವರಿಸುವ ಕೆಲವು ಪ್ರಸಿದ್ಧ ಮನೋವೈಜ್ಞಾನಿಕ ಚಿಂತನೆಗಳನ್ನು ಗಮನಿಸಿ ಅದರಿಂದ ಅಮೃತಾ ಪ್ರೀತಂ ಕಥನದಲ್ಲಿನ ಪಾತ್ರಗಳನ್ನು ಸಮೀಕರಿಸಿ ಇಲ್ಲಿ ನೋಡಲಾಗುತ್ತದೆ. ಎರಿಕ್‌ಸನ್ ಎಂಬ ಮನೋವಿಜ್ಞಾನಿಯಂತೂ 'ಹೆಣ್ಣು ಮಕ್ಕಳು ತಾವು ಮದುವೆಯಾಗುವುದು ಯಾರನ್ನು ಮತ್ತು ತಾವು ಯಾರಿಗಾಗಿ ಮನೆಯನ್ನು ನಡೆಸಬೇಕಾಗಿದೆ ಎಂಬುದು ತಿಳಿಯುವವರೆಗೂ ಸ್ವಂತ ಅಸ್ತಿತ್ವವೇ ಇಲ್ಲದವರಂತೆ ಪರದಾಡುತ್ತಾರೆ ಎನ್ನುತ್ತಾನೆ. ಹಾಗೆಯೇ ತನ್ನ ಪಾಲಿಗೆ ದೊರೆತ ಪುರುಷನ ಅಂಶವನ್ನು ತನ್ನೊಳಗೆ ಧಾರಣೆ ಮಾಡಿ, ಅದಕ್ಕೆ ಸೂಕ್ತ ಪೋಷಣೆ ನೀಡಿ ಸಂತಾನವನ್ನು ಈ ಭೂಮಿಗೆ ತರುವ ಅವಳ ಅಂತಃ ಸಾಮರ್ಥ್ಯ ಮತ್ತು ಅನಂತರದಲ್ಲಿ ಆ ಸಂತಾನವನ್ನು ಸೂಕ್ತವಾಗಿ ಸಂಗೋಪನ ಮಾಡುವಲ್ಲಿ ಅವಳು ತೋರುವ ದೈಹಿಕ, ಮಾನಸಿಕ, ನೈತಿಕ ಸಾಮರ್ಥ್ಯಗಳು ಅವಳಿಗೆ ಪ್ರೌಢ ಬದುಕಿನ ಸಾರ್ಥಕತೆಯ ಭಾವವನ್ನು ನೀಡುತ್ತದೆ. ಇದು ಅವಳಿಗೆ ಆಕರ್ಷಣೆಯ ವ್ಯಕ್ತಿತ್ವವನ್ನು ಒದಗಿಸುವ ಮುಖ್ಯ ಸಂಗತಿಯಾಗುತ್ತದೆ.'[2] ಮೂರನೇ ಹೆಣ್ಣು ಕತೆಯಲ್ಲಿ ವಿಧವೆ ಮೀನಾ ಗಂಡನನ್ನು ಕಳೆದುಕೊಂಡು ಮಗುವಿಗಾಗಿ ಪರಿತಪಿಸುವುದಿದೆ. ಸಾಮಾನ್ಯ ಎಲ್ಲ ಮಹಿಳೆಯರಿಗೂ ತಾಯಿ ಆಗುವ, ತನ್ನ ಅಂಶವನ್ನು ಭೂಮಿಗೆ ತರುವ ಆಸೆ ಇರುತ್ತದೆ. ಮೀನಾಳ ಸಂತಾನ ಅಪೇಕ್ಷೆಯನ್ನು ನೋಡಿದಾಗ ಮನೋವಿಜ್ಞಾನಿ ಎರಿಕ್‌ಸನ್‌ರವರ ವಿಚಾರವು ಸರಿ ಅನಿಸುತ್ತದೆ. ಮೀನಾಳೇ ಹೇಳುವ ಹಾಗೆ ಗಂಡು ಸತ್ತನೆಂದರೆ ಹೆಣ್ಣಿನ ಎಲ್ಲ ಅಂಗಗಳೂ ಜೀವಂತವಾಗಿದ್ದರೂ ಅವಳ ಗರ್ಭವಂತೂ ಖಂಡಿತ ಸಾಯುತ್ತದೆ. ಮೀನಾಳಿಗಂತೂ ತನ್ನ ಸತ್ತ ಗರ್ಭದ ದುರ್ನಾತ ಮೂಗಿಗೆ ಅಡರಿದಂತೆನಿಸುತ್ತಿತ್ತು. ಅವಳು ಯೋಚನೆ ಮಾಡುತ್ತಿರುವುದು ಒಂದು ವೇಳೆ ತನ್ನ ಚೆಲುವ ಯೋಧನನ್ನು ಗರ್ಭದಲ್ಲಿ ಧರಿಸಿದ್ದಿದ್ದರೆ ಅವನ ಒಂದು ಅಂಶ ಈ ಪ್ರಪಂಚದಲ್ಲಿ ಬದುಕಿರುತ್ತಿತ್ತು ಎಂದು. ಮೀನಾಳ ಯೋಚನೆಯೆಲ್ಲವೂ ಮಗುವಿಗಾಗಿ. 'ಆ ಗಳಿಗೆಯಲ್ಲಿ ಅವಿನಾಶನ ಮುಖದ ಚಹರೆಯಲ್ಲಿ ಎರಡು ಚಹರೆಗಳು ಬೆರೆತಿದ್ದವು. ಒಂದು ಮೀನಾಳ ಪತಿಯ ಚಹರೆಯಾದರೆ ಇನ್ನೊಂದು ಆ ಪತಿಯಿಂದ ಹುಟ್ಟಬಹುದಾದ ಮಗುವಿನದು. ಒಬ್ಬ ಈ ಜಗತ್ತಿನಲ್ಲಿ ಈ ಬದುಕುಳಿದಿಲ್ಲ ಮತ್ತು ಇನ್ನೊಬ್ಬ ಈ ಜಗತ್ತಿಗೆ ಬರುವಂತಿಲ್ಲ

ಎಂಬುದು ಮೀನಾಳಿಗೆ ಗೊತ್ತಿತ್ತು. ಆದರೆ ಈ ಎರಡು ಚಹರೆಗಳು ತನ್ನ ಕಣ್ಮುಂದೆ ನೆರಳಿನ ಹಾಗೆ ಏಕೆ ಸುಳಿದಾಡುತ್ತಿವೆ ಎಂದು ಮೀನಾ ವಿಸ್ಮಯದಿಂದ ನೋಡುತ್ತಿದ್ದಳು.'[೨] ತಾಯಿ ಆಗುವ ಬಯಕೆಯನ್ನು 'ರಂಧ್ರಗಳು' ಕಥೆಯಲ್ಲಿಯೂ ನೋಡಬಹುದು. ಶೀನಾ ಈಗಾಗಲೇ ಗಂಡನ ಖಾಯಿಲೆಯಿಂದ ನೊಂದಿರುವ ಮಹಿಳೆ. ಮಗುವನ್ನು ಪಡೆಯಬೇಕೆಂಬ ಹೆಬ್ಬಯಕೆಯಿಂದಿರುವ ಮಹಿಳೆ. ಮಗುವನ್ನು ಪಡೆಯಬೇಕೆಂಬ ಹೆಬ್ಬಯಕೆಯಿಂದ ಬದುಕುತ್ತಿರುತ್ತಾಳೆ. 'ವೀರೇಂದ್ರನ ಒಂದು ಸಣ್ಣ ಅಂಶವನ್ನು ತನ್ನ ಗರ್ಭದಲ್ಲೂ ಧರಿಸಬೇಕೆಂದು ಶೀನಾಳ ಮನಸ್ಸು ಆಶಿಸುತ್ತಿತ್ತು. ಆದರೆ ಈಗಂತೂ ತೀರಾ ತಡವಾಗಿ ಬಿಟ್ಟಿತ್ತು. ಇಂಥ ಹೃದ್ರೋಗಿಗೆ ಶರೀರ ಸ್ವಲ್ಪ ಉದ್ರಿಕ್ತಗೊಂಡರೂ ಅದೇ ಮೃತ್ಯುವಿನ ಆಘಾತವಾಗಿ ಬಿಡಬಹುದು. ಒಂದು ವೇಳೆ ಗೊತ್ತಾಗಿದ್ದರೆ ಎಂದು ಶೀನಾಳ ಮನಸ್ಸಿನಲ್ಲಿ ಆಸೆ ಆಗುತ್ತಿತ್ತು. ಆದರೆ ಈಗ ಎಂಥ ಆಸೆಯಾದರೂ, ಕಳೆದುಕೊಳ್ಳಲು ಅರ್ಹವಾದ ಗಳಿಗೆ ಇರಲಿಲ್ಲ. ಈಗೇನಿದ್ದರೂ ವೀರೇಂದ್ರನ ಮೊಗದ ಕಡೆ ನೋಡುತ್ತಿರುವುದಷ್ಟೆ ಆಗುತ್ತಿತ್ತು.'[೪]

ಇಂತಹ ವಾದಗಳನ್ನು ಕೇಳಿ ಹೆಣ್ಣಿನ ಮೇಲೆ ಇಂತಹ ನಿರ್ದೇಶನಗಳನ್ನು ಒತ್ತಾಯವಾಗಿ ಹೇರಲಾಗುತ್ತಿದೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಹೆಣ್ಣು ಅಂತರ್ಗತವಾಗಿ ಈ ಪಾತ್ರಗಳನ್ನು ಸ್ವ ಇಚ್ಛೆಯಿಂದ ಒಪ್ಪಿ ಆಯ್ಕೆ ಮಾಡುತ್ತಾಳೆ. ಇನ್ನು ಮನೋವಿಜ್ಞಾನಿಗಳು ಹೆಣ್ಣಿನ ಬಗ್ಗೆ ಈ ರೀತಿ ಚಿತ್ರಣ ಕೊಡುತ್ತಾರೆ. ಹೆಣ್ಣಿನ ಬದುಕಿನ ಸಾರ್ಥಕತೆಯ ಗುಟ್ಟು ಅವಳ ಆಕರ್ಷಣೆಯೇ ಆಗಿದೆ. ಅವಳ ಆಕರ್ಷಣೆ ಎಂದರೆ ತನ್ನ ಗಂಡನ ಅಂಶವನ್ನು ಧಾರಣೆ ಮಾಡುವ, ಪೋಷಿಸುವ ಅವಳ ಸಾಮರ್ಥ್ಯ. ಇದೇ ಆಕರ್ಷಣೆಯೇ ಅವಳಿಗೆ ಅರ್ಹವಾದೊಂದು ಮನೆಯನ್ನು ದೊರಕಿಸಿ ಕೊಡುವ, ತನ್ನಲ್ಲಿನ ಪೋಷಕ ಗುಣವನ್ನು ಮೆರೆಯಲು ಅವಕಾಶವನ್ನೂ ಕಲ್ಪಿಸಿಕೊಡುವ ಮೂಲ ಬಂಡವಾಳವೂ ಹೌದು ಎಂದು ಹೇಳುತ್ತಾರೆ.

ಇನ್ನು ಹೆಣ್ಣಿನ ಬಗ್ಗೆ ಸ್ಪಷ್ಟ ಅಂಶಗಳನ್ನು ತಿಳಿಯಬೇಕಾದರೆ ಸ್ತ್ರೀವಾದಿಗಳ ಮೆಲುಕನ್ನು ಹಾಕಬೇಕಾಗುತ್ತದೆ. ಕೌಟುಂಬಿಕ ಜವಾಬ್ದಾರಿಗಳನ್ನು ಬಿಟ್ಟು ಮಹಿಳೆ ಪರಾರಿಯಾಗುವುದಿಲ್ಲ. ಕೌಟುಂಬಿಕ ಜವಾಬ್ದಾರಿಗಳನ್ನು ಅತ್ಯಂತ ಜವಾಬ್ದಾರಿಯುತವಾಗಿ ನಿರ್ವಹಿಸುತ್ತಾಳೆ. ಸ್ತ್ರೀವಾದಿಗಳು ಇದಕ್ಕೆ ಪೂರಕ ವಾಗಿರುವುದನ್ನು ಗಮನಿಸಬಹುದು. 'ತಾಯ್ತನ ಹಾಗೂ ಕೌಟುಂಬಿಕ ಜವಾಬ್ದಾರಿಗಳ ಮಾತಿನಲ್ಲಿ, ಸ್ತ್ರೀವಾದಿಗಳು ತಾಯ್ತನವನ್ನೂ, ಕುಟುಂಬವನ್ನೂ ದ್ವೇಷಿಸುತ್ತಾರೆ. ಸ್ತ್ರೀ ಪುರುಷ ಸಮಾನತೆಯನ್ನು ಘೋಷಿಸಿ, ಸಂಸ್ಕೃತಿಯ ನಾಶಕ್ಕೆ ಕಾರಣರಾಗುತ್ತಾರೆ ಎಂಬ ಆಪಾದನೆಯೂ ಇದೆ. ಆದರೆ ಇದು ತೀರಾ ಹುರುಳಿಲ್ಲದ ಆಪಾದನೆ. ಅನೇಕ ಸ್ತ್ರೀವಾದಿಗಳು ವಿವಾಹಿತರೂ ಹೌದು, ತಾಯಂದಿರು ಹೌದು. ಅವರು ಕುಟುಂಬಗಳ ಹೊರಗಡೆ ವಾಸಿಸುತ್ತಿಲ್ಲ. ತಾಯ್ತನದ ಜವಾಬ್ದಾರಿ ಎಂಬುದನ್ನು ಸ್ತ್ರೀಯ ಮೇಲೆಯೇ

ಹೊರಿಸಿ, ಅದರ ಹೆಸರಿನಲ್ಲಿ ಸ್ತ್ರೀಯ ಪ್ರತಿಭೆ, ವ್ಯಕ್ತಿತ್ವ ಹಾಗೂ ಸ್ವಾಭಿಮಾನಿಗಳ ಹರಣವಾಗುತ್ತಿರುವುದನ್ನು ಸ್ತ್ರೀವಾದಿಗಳು ವಿರೋಧಿಸುತ್ತಾರೆ.'[೫]

ಮನೋವೈಜ್ಞಾನಿಕ ನೆಲೆ ಹಾಗೂ ಸ್ತ್ರೀವಾದಗಳ ನೆಲೆಯಲ್ಲಿ ಹೆಣ್ಣು ಹಾಗೂ ಹೆಣ್ಣಿನ ಸ್ವಭಾವಗಳ ಚರ್ಚೆಯನ್ನು ಅಮೃತಾ ಪ್ರೀತಂ ಅವರ ಕಥೆಗಳಲ್ಲಿನ ಕೆಲವು ಪಾತ್ರಗಳ ಹಿನ್ನಲೆಯಲ್ಲಿ ಕೈಗೊಳ್ಳಲಾಗಿದೆ. ಈಗ ಹೆಣ್ಣಿನ ದೇಹದ ಬಗ್ಗೆ ಕೆಲವು ಅಂಶಗಳನ್ನು ಚರ್ಚಿಸಬೇಕಾಗುತ್ತದೆ.

ಹೆಣ್ಣಿನ ದೇಹ ಸಂಬಂಧದಲ್ಲಿ ಮಂಡನೆಯಾಗುತ್ತಿರುವ ಹೊಸ ಚಿಂತನೆಗಳ ಹಿನ್ನಲೆಯಲ್ಲಿ ಭಾರತೀಯ ಪಾರಂಪರಿಕ ಗ್ರಹಿಕೆಗಳನ್ನು ಮರಳಿ ವಿವೇಚಿಸಬೇಕಾದ ಅವಶ್ಯಕತೆಯಿದೆ. 'ಮೊಲೆ ಮೂಡಿ ಬಂದರೆ ಹೆಣ್ಣೆಂಬರು' ಎಂಬ ಹೆಣ್ಣಿನ ದೇಹದ ಬಗೆಗಿನ ಚರ್ಚೆಗಳು ೧೨ನೇ ಶತಮಾನದಲ್ಲಿಯೇ ನಡೆದಿವೆ. ಹೆಣ್ಣುತನ ಎಂಬುದು ನಿಸರ್ಗದತ್ತ ಫಲಿತವಾದ್ದರಿಂದ ಹೆಣ್ಣೆಂದರೆ ಇನ್ನೇನಾಗಲೂ ಸಾಧ್ಯವಿಲ್ಲ ಎಂಬ ತೀರ್ಪು ನೀಡುವ ಹಳೆಯ ಸಿದ್ಧಾಂತಗಳು ನಮ್ಮಲ್ಲಿ ಸಾಕಷ್ಟಿವೆ. ಹೆಣ್ಣು ದೇಹದ ಋತುಚಕ್ರ, ಬಸಿರು, ಹೆರಿಗೆಗಳಂತಹ ಗುಣಲಕ್ಷಣಗಳನ್ನು ಅವಳ ದೌರ್ಬಲ್ಯಗಳೆಂದು ಬಿಂಬಿಸುವ ನಮ್ಮ ಸಮಾಜದಲ್ಲಿ ಇವತ್ತಿಗೆ ಅಲ್ಪಸ್ವಲ್ಪ ಬದಲಾವಣೆ ಆಗಿರುವುದನ್ನು ಕಾಣಬಹುದಾಗಿದೆ. 'ಮನೋವಿಜ್ಞಾನವು ಇದಕ್ಕೆ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತಾ, ಹೆಣ್ಣು ಕೆಳದರ್ಜೆಯ ತಳಿ ಎಂಬಂತೆ ಈವರೆಗೆ ನೀಡಿದ ವಿವರಣೆಯನ್ನು ಪಲ್ಲಟಗೊಳಿಸುತ್ತಾ, ಹೆಣ್ಣಿನ ಈಸ್ಟ್ರೋಜನ್ ರಸಗ್ರಂಥಿ, ಅವಳ ಅಂಡಾಶಯ, ಅವಳ ಮೆದುಳಿನ ಕಾರ್ಟೆಕ್ಸ್ ಇವೇ ಮೊದಲಾದವು ಅವಳ ಶಕ್ತಿ ಕೇಂದ್ರಗಳು ಎಂದು ಹೇಳತೊಡಗಿದೆ.'[೬] ಹೆಣ್ಣು, ಅವಳ 'ದೇಹ' ಲಕ್ಷಣಕ್ಕೆ ಪ್ರತಿನಿಧಿಯಾಗಬಹುದಾದಂಥದು. ಹೆಣ್ಣು ಎಂದರೆ ತೀರ ನಗಣ್ಯಳು, ಮುಟ್ಟು, ಬಸಿರು, ಹೆರಿಗೆಗಳ ತಾಪತ್ರಯಗಳಲ್ಲಿ ತನ್ನ ಜೀವವನ್ನು ಸವೆಸುವವಳು. ಇನ್ನು ಪ್ರಾಚೀನ ಕನ್ನಡ ಸಾಹಿತ್ಯವನ್ನು ನೋಡಿದಾಗಲೂ ನಮಗೆ ಕಾಣಿಸುವುದು ಹೆಣ್ಣಿನ ದೇಹದ ವರ್ಣನೆಯನ್ನು ಶೃಂಗಾರಕ್ಕಾಗಿ ಬಳಸಿರುವುದು ಕಾಣುತ್ತದೆ. ಶೃಂಗಾರ ರಸವನ್ನು ಸೃಷ್ಟಿಸುವುದಕ್ಕಾಗಿ ಸ್ತ್ರೀಯ ದೇಹ ಸಮೃದ್ಧಿಯನ್ನು ವರ್ಣಿಸುವುದು, ರಾಜಶೇಖರರ ವಿಲಾಸದ ಬದುಕಿನ ವೈಭವ, ವಿರಕ್ತ ಧರ್ಮದ ಕೊಂಡಾಟಕ್ಕಾಗಿ ಸ್ತ್ರೀ ನಿಂದನೆ, ಅವಹೇಳನವನ್ನು ಧಾಳಾಗಿ ಪ್ರತಿಪಾದಿಸುವುದನ್ನು ನೋಡ ಬಹುದಾಗಿದೆ. ಇದುವರೆಗೂ ಸ್ತ್ರೀ ದೇಹದ ಬಗ್ಗೆ ನಡೆದ ಚರ್ಚೆಯನ್ನು ಅಮೃತಾ ಪ್ರೀತಂ ಕಥನಕ್ಕೆ ಅನ್ವಯಿಸಲಾಗುತ್ತದೆ.

ಹಮೀದಾಳನ್ನು ಅವಳ ಒಪ್ಪಿಗೆ ಇಲ್ಲದೆ ರಶೀದ ಕರೆ ತಂದಿರುತ್ತಾನೆ. ಹಮೀದಾಳ ಒಪ್ಪಿಗೆ ಇಲ್ಲದೆ ಮದುವೆಯಾಗುತ್ತಾನೆ. ಅವಳ ಕೈಯ ಮೇಲೆ ಹಚ್ಚೆ ಹಾಕಿಸುತ್ತಾನೆ. ತನ್ನ ಮಗುವಿನ ತಾಯಿಯಾಗಿ ಮಾಡುತ್ತಾನೆ. ಅವಳ ಒಪ್ಪಿಗೆ ಅವನಿಗೆ ಬೇಕಾಗುವುದೇ ಇಲ್ಲ. ಹೆಣ್ಣಿಗೆ ಅವಳ ದೇಹ ತರಬಹುದಾದ ಅನಾನುಕೂಲಗಳನ್ನು ಎರಡು ಘಟನೆಗಳಿಂದ ಇಲ್ಲಿ ತಿಳಿಯಬಹುದು. ಒಂದು ಹಚ್ಚೆಯ ಪ್ರಸಂಗ,

ಇನ್ನೊಂದು ಗಂಡ ಹಾಗೂ ಮಗ ಅವಳ ದೇಹವನ್ನು ಹಿಂಡಿ ಹಿಪ್ಪೆ ಮಾಡುವುದು. 'ಅವಳಿಗಿನ್ನೂ ಹೊಸ ಅನುಭವಗಳು ಕಾದಿದ್ದವು. ಇಲ್ಲಿಯವರೆಗೆ ರಶೀದ ಅವಳನ್ನು ಪುರೋ ಎಂದೇ ಕರೆಯುತ್ತಿದ್ದ. ಒಂದು ದಿನ ಅವನೊಬ್ಬ ಅಪರಿಚಿತ ವ್ಯಕ್ತಿಯನ್ನು ಕರೆತಂದು ಪುರೋ ಮುಂದೆ ನಿಲ್ಲಿಸಿ ಅವಳ ತೋಳನ್ನು ಮುಂದೆ ಚಾಚುವಂತೆ ಹೇಳಿದ. ಮದುವೆಯ ದಿನ ಅವಳಿಗಿಟ್ಟ ಹೊಸ ಹೆಸರನ್ನು ಆ ಮನುಷ್ಯ ಪುರೋಳ ಕೈಮೇಲೆ ಹಚ್ಚೆಯಲ್ಲಿ ಮೂಡಿಸಿದ. ಆ ದಿನದಿಂದ ಹಮೀದಾ ಕೇವಲ ಅವಳ ಚರ್ಮದಲ್ಲಿನ ಕಡು ಹಸಿರು ಬಣ್ಣನ ಅಕ್ಷರವಾಗಿರದೆ, ಎಲ್ಲರೂ ಅದೇ ಹೆಸರಿನಿಂದ ಅವಳನ್ನು ಕರೆಯತೊಡಗಿದರು.'[೭] ಪುರೋಳ ಕನಸುಗಳಲ್ಲಿ ಅವಳ ಹಳೆಯ ಗೆಳತಿಯರು ಅವಳನ್ನು ಪುರೋ ಎಂದೇ ಕರೆಯುತ್ತಿದ್ದರು. ಈಗ ಅವಳು ಹಮೀದಾ ಆಗಿದ್ದಾಳೆ. ಅವಳದ್ದು ದ್ವಿಸ್ತರದ ಬದುಕಾಗಿದೆ. ಹಗಲು ಹಮೀದಾ, ರಾತ್ರಿ ಪುರೋ. ವಾಸ್ತವದಲ್ಲಿ ಅವಳು ಎರಡೂ ಆಗಿರದೆ ಕೇವಲ ಅಸ್ಥಿಪಂಜರವಾಗಿದ್ದಳು. ಯಾವ ರೂಪ, ಯಾವ ಚಹರೆಯೂ ಇಲ್ಲದ, ಕಾಣಿಸದ ಅಸ್ಥಿಪಂಜರವಾಗಿದ್ದಳು. ಅವಳ ದೇಹದ ಮೇಲಿನ ಹಚ್ಚೆಯು ಅವಳ ದೇಹದ ಮೇಲೆ ರಾರಾಜಿಸುತ್ತಿದೆ.

ಇದೇ ರೀತಿ ಅವಳಿಗೆ ಒಪ್ಪಿಗೆ ಇಲ್ಲದ ಗಂಡ, ಮಗು ತನ್ನ ದೇಹವನ್ನು ಕಚ್ಚಿ ತಿನ್ನುವಂತೆ ಭಾಸವಾಗುತ್ತದೆ. ಹಮೀದಾಳಿಗೆ ಹೆರಿಗೆಯಾದರೂ ಅವಳಿಗೆ ಅದು ಸಂಭ್ರಮ ತರುವಂಥ ವಿಚಾರವಾಗಿರುವುದಿಲ್ಲ. 'ಹಮೀದಾಗೆ ಸ್ವಲ್ಪ ಶಕ್ತಿ ಬಂದಂತಾಗಿ ಕಣ್ಣು ತೆರೆದಳು. ಪಕ್ಕದಲ್ಲಿ ಮಲಗಿದ್ದ ಮಗುವಿನ ಕೆನ್ನೆಯ ಮೃದು ಸ್ಪರ್ಶ ಅವಳ ನಗ್ನ ತೋಳಿಗೆ ಹೊಸ ಅನುಭವ ನೀಡುತ್ತಿತ್ತು. ಆ ತಣ್ಣನೆಯ ಸ್ಪರ್ಶ ಅವಳ ನರನಾಡಿಗಳಲ್ಲಿ ಹರಿದಾಡಿತು. ತಣ್ಣನೆಯ ಹುಳು ವೊಂದು ಮೈಮೇಲೆ ಹರಿದಾಡಿದ ಅನುಭವ. ಅವಳು ಕಚ್ಚಿದಳು. ಅದನ್ನು ದೂರ ಮಾಡಲು ಬಯಸಿದಳು. ಮೈಗೆ ಚುಚ್ಚಿದ ಮುಳ್ಳನ್ನು ಉಗುರಿನಿಂದ ತೆಗೆದುಹಾಕುವಂತೆ, ಮೈಗೆ ಕಚ್ಚಿದ ಉಣುಗನ್ನು ತೆಗೆದೆಸೆಯುವಂತೆ ಎಸೆಯಬೇಕೆನಿಸಿತು.'[೮]

ಹಮೀದಾಳ ದೇಹದ ಮೇಲೆ ಆಗುತ್ತಿರುವ ಈ ಬದಲಾವಣೆಗಳು ಅವಳಿಗೆ ಇಷ್ಟವಾಗುತ್ತಿಲ್ಲ. 'ಮಾತೃತ್ವ'ದ ಕಲ್ಪನೆಯನ್ನು ಅವಳು ನಿರಾಕರಿಸುತ್ತಿದ್ದಾಳೆ. ಸ್ತ್ರೀತ್ವ, ಮಾತೃತ್ವದ ದಿಕ್ಕರಣೆಯನ್ನು ನಾವು ಪುರುಷ ಸಮಾಜ ವ್ಯವಸ್ಥೆಯಲ್ಲಿ ನೋಡುವುದು ಕಷ್ಟ. ಅಂತೆಯೇ ಯಾವ ಕ್ಷೇತ್ರದಲ್ಲಿ ಮುಂದುವರೆದವರಾದರೂ ಸ್ತ್ರೀಯ ವಿಶಿಷ್ಟ ಅಂಶಗಳನ್ನು ನಿರಾಕರಿಸುವುದನ್ನು ನೋಡುವುದು ಕಷ್ಟವೇ ಆಗಿದೆ.

ಆನ್ ಓಕ್ಲೆ ತನ್ನ ವುಮನ್ಸ್ ವರ್ಕ್, ದಿ ಹೌಸ್ ವೈಫ್, ಪಾಸ್ಟ್ ಅಂಡ್ ಪ್ರೆಸೆಂಟ್ (೧೯೭೪) ಎಂಬ ಗ್ರಂಥದಲ್ಲಿ ತಾಯ್ತನಕ್ಕೆ ಸಂಬಂಧಿಸಿದ ಹಲವಾರು ಹುಸಿ ಕಲ್ಪನೆಗಳನ್ನು ಪ್ರಶ್ನಿಸಿದ್ದಾಳೆ. 'ಓರ್ವ ಸ್ತ್ರೀಯ ಮೇಲೆ ತಾಯ್ತನದ ಸದ್ಗುಣಗಳನ್ನು ಬಲತ್ಕಾರವಾಗಿ ಹೇರಿ, ತಾಯ್ತನವನ್ನು ತಿರಸ್ಕರಿಸುವ ಸ್ತ್ರೀಯನ್ನು ಕಡೆಗಣ್ಣಿನಿಂದ ನೋಡುವುದು ಪುರುಷ ಪ್ರಧಾನ ವ್ಯವಸ್ಥೆಯ ಬಳುವಳಿ. ಸ್ತ್ರೀಯ ಸಹಜ

ಪ್ರತಿಭೆಯನ್ನು ತಾಯ್ತನವೆಂಬ ಗೋರಿಯಲ್ಲಿ ಸಮಾಧಿ ಮಾಡಲು ಹೇಸದ ಪುರುಷ ಪ್ರಧಾನ ಸಮಾಜ ಭಿನ್ನ ಧೋರಣೆಗಳನ್ನು ತಾಳುತ್ತದೆ. ಸಮಾಜದ ಈ ದ್ವಿಮುಖ ಮೌಲ್ಯ ವ್ಯವಸ್ಥೆಯಿಂದ ಹೊರಬರ ಬೇಕಾದರೆ ಸ್ತ್ರೀ, ಈ ಬಲತ್ಕಾರದ ತಾಯ್ತನವನ್ನು ತಿರಸ್ಕರಿಸಿ, ಆಯ್ಕೆಯ ಸ್ವಾತಂತ್ರವನ್ನು ಹೊಂದಲೇ ಬೇಕು.'[೯]

ಸ್ತ್ರೀವಾದದ ನೆಲೆಯ ಮಾತೃತ್ವ ಕಲ್ಪನೆಯ ನಿರಾಕರಣೆಯನ್ನು ಹಮೀದಾಳಲ್ಲಿಯು ಕಾಣ ಬಹುದು. ಹಮೀದಾಳ ಮಗು ಅವಳ ಎದೆ ಹಾಲನ್ನು ಅವಳಿಷ್ಟಕ್ಕೆ ವಿರುದ್ಧವಾಗಿ ಕುಡಿಯುತ್ತಿರುವುದು ಅವಳಿಗೆ ಮನದಲ್ಲೊಂದು ಅಹಿತಕರ ಭಾವನೆ ಉಂಟುಮಾಡುತ್ತಿತ್ತು. ಈ ಮಗು, ಅದರಪ್ಪ, ಎಲ್ಲಾ ಗಂಡಸರು ಹೆಣ್ಣಿನ ದೇಹವನ್ನು ಕಚ್ಚಿ ತಿನ್ನುತ್ತಾರೆ. ನಾಯಿ ಮೂಳೆಯನ್ನು ಕಡಿದು ತಿನ್ನುವಂತೆ. ಹೆಣ್ಣಿನ ದೇಹವನ್ನು ಅವಳ ಇಚ್ಛೆಯ ವಿರುದ್ಧವಾಗಿ ಯಾರು ಬಳಸಿದರೂ ಅವರಿಗೆ ಯಾವ ಶಿಕ್ಷೆಯೂ ಆಗು ವುದಿಲ್ಲ. ನಮ್ಮ ಸಮಾಜವೇ ಹಾಗಿದೆ. ಎಲ್ಲರೂ ಇದನ್ನು ಒಪ್ಪಿರುವುದರಿಂದ ಇದು ಹೀಗೇ ಸಾಗುತ್ತಿದೆ.

ಹೆಣ್ಣಿನ ದೇಹಕ್ಕಾಗಿ ಕಾಮಿಸುವ ಈ ಸಮಾಜವು ಅವಳ ಒಪ್ಪಿಗೆಯನ್ನು ಪಡೆಯುವುದೇ ಇಲ್ಲ. ಅದು ಹೆಣ್ಣಿನ ದೇಹವಾಗಿದ್ದರೆ ಸರಿ. ಅವಳು ಮಾನಸಿಕ ಅಸ್ವಸ್ಥೆಯಾದರೂ ಅದನ್ನು ಕೇಳುವವರು ಯಾರು? 'ಪಿಂಜರ್' ಕಾದಂಬರಿಯಲ್ಲಿ ಬರುವ ಹುಚ್ಚಿಯ ಪ್ರಸಂಗವು ಇದಕ್ಕೆ ನಿದರ್ಶನವಾಗಿದೆ. 'ಸತ್ಕಾರ್‌ನ ಬೀದಿಗಳಲ್ಲಿ ಅವಳು ಮೊದಲಿನಂತೇ ತಿರುಗುತ್ತಿದ್ದಳು. ಅವಳ ಹುಚ್ಚು ನಗೆ ಬಯಲಿನಲ್ಲಿ ಜೋರಾಗಿ ಕೇಳುತ್ತಿತ್ತು. ಯಾವ ಗಂಡಸು ಇವಳನ್ನು ಈ ಸ್ಥಿತಿಗೆ ತಂದವನು? ಸತ್ಕಾರ್‌ನ ಸ್ತ್ರೀಯರು ಪ್ರಶ್ನಿಸಿಕೊಂಡರು. ಹುಚ್ಚಿಯೊಬ್ಬಳನ್ನು ಈ ಸ್ಥಿತಿಗೆ ತಳ್ಳಿರುವವನು ಶುದ್ಧ ಅನಾಗರಿಕ ಪಶು. ಅವಳು ತರುಣಿಯೂ ಅಲ್ಲ. ಸುಂದರಿಯೂ ಅಲ್ಲ. ಮನಸ್ಸೂ ಇಲ್ಲದ ಬರೀ ಮಾಂಸದ ಮುದ್ದೆ. ಜೀವವಿರುವ ಅಸ್ಥಿಪಂಜರ. ಗಿಡುಗಗಳೂ, ಹದ್ದುಗಳೂ ಬಡಪಾಯಿಯ ಮಾಂಸ ತಿಂದು ಮುಗಿಸಿವೆ. ಹುಚ್ಚು ಹೆಂಗಸಿನ ಹೊಟ್ಟೆ ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋಯಿತು.'[೧೦]

ಹೆಣ್ಣಿನ ದೇಹದ ಶೋಷಣೆಯ ಕುರಿತು ಜ್ಯಾಗರ್‌ಳ ಮಾತನ್ನು ಇಲ್ಲಿ ನೋಡಬೇಕು. ತನ್ನ ಫೆಮಿನಿಸ್ಟ್ ಪಾಲಿಟಿಕ್ಸ್ ಅಂಡ್ ಹ್ಯೂಮನ್ ನೇಚರ್ (೧೯೮೩) ಎಂಬ ಗ್ರಂಥದಲ್ಲಿ ಮಾರ್ಕ್ಸ್‌ನ 'ಅನ್ಯಾಕ್ರಾಂತತೆ'ಯ ಪರಿಕಲ್ಪನೆಯನ್ನು ಮೂಲವಾಗಿಟ್ಟುಕೊಂಡು ಜ್ಯಾಗರ್ ಸ್ತ್ರೀ ಶೋಷಣೆಯನ್ನು ವಿವರಿಸುತ್ತಾಳೆ. 'ತಾವು ಉತ್ಪಾದಿಸುವ ವಸ್ತುಗಳಿಂದ ಹೇಗೆ ಶ್ರಮಿಕರು ಪ್ರತ್ಯೇಕಿಸಲ್ಪಡುತ್ತಾರೋ ಅದೇ ರೀತಿಯಲ್ಲಿ ಸ್ತ್ರೀಯರೂ ಕೂಡ ತಮ್ಮ ದೇಹದಿಂದ ಪ್ರತ್ಯೇಕಿಸಲ್ಪಡುತ್ತಾರೆ. ಸ್ತ್ರೀ ದೇಹ ಆಕೆಗೆ ಸೇರಿದ್ದು, ಆ ದೇಹಕ್ಕಾಗಿಯೇ ಆಕೆ ಶ್ರಮಿಸುತ್ತಾಳೆ ಎಂಬ ಭಾವನೆ ಪ್ರಚಲಿತವಾಗಿದ್ದರೂ ವಾಸ್ತವದಲ್ಲಿ ಆಕೆ ಶ್ರಮಿಸುತ್ತಿರುವುದು ಪುರುಷರಿಗಾಗಿ. ತನ್ನ ದೇಹ ಯಾತಕ್ಕಾಗಿ, ಯಾರಿಂದ ಹಾಗೂ ಹೇಗೆ

ಬಳಸಲ್ಪಡಬೇಕು ಎಂದು ನಿರ್ಧರಿಸುವಲ್ಲಿ ಆಕೆಗೆ ಸ್ವಾತಂತ್ರವೇ ಇಲ್ಲ. ಯಾವ ರೀತಿ ಒಬ್ಬ ಶ್ರಮಿಕನ ದೇಹ ಕೇವಲ ಶ್ರಮವನ್ನು ಹೊರಸೂಸುವ ಯಂತ್ರದಂತೆ ಪರಿಗಣಿಸ ಲ್ಪಡುತ್ತದೆಯೋ ಅದೇ ರೀತಿಯಲ್ಲಿ ಸ್ತ್ರೀಯು ಕೂಡ ಪುರುಷನ ಇಚ್ಛೆಗಳಿಗನುಸಾರವಾಗಿ ತನ್ನ ದೇಹವನ್ನು ಒತ್ತೆಯಿಡುವಂಥ ಪರಿಸ್ಥಿತಿಯನ್ನು ತಲುಪಿದ್ದಾಳೆ.'[೧೧]

ಹೆಣ್ಣು, ದೇಹದ ಕುರಿತ ಚರ್ಚೆಗಳು ಇದುವರೆಗೂ ನಡೆದಿವೆ. ಈಗ ಮನಸ್ಸಿನ ಕುರಿತ ಚರ್ಚೆಯನ್ನು ಮಾಡಬೇಕಾಗಿದೆ. ಮೊದಲು ಮನಸ್ಸನ್ನು ಕುರಿತು ವೈಜ್ಞಾನಿಕ ಅಂಶಗಳು ಏನಾದರೂ ಇವೆಯೇ ಎಂದು ನೋಡಬೇಕಾಗುತ್ತದೆ. 'ಮನೋವಿಜ್ಞಾನಿ ಫ್ರಾಯ್ಡ್‌ನ ವಿಚಾರಗಳು ಭ್ರಮಾತ್ಮಕವಾಗಿವೆ ಎಂದು ಇತ್ತೀಚಿನ ಸಂಶೋಧನೆಗಳು ದೃಢೀಕರಿಸಿವೆ. 'ವೈಜ್ಞಾನಿಕ' ಎಂಬ ಹೆಸರಿನಲ್ಲಿ ನಡೆಯುವ ಸಂಶೋಧನೆಗಳು ಅನುಸರಿಸುವ ವಿಧಿ ವಿಧಾನಗಳೇ ದೋಷ ಪೂರಿತವಾಗಿವೆ. ಹಾಗೆ ವೈಜ್ಞಾನಿಕ ವಾದದ್ದೇನೂ ಇವುಗಳ ಹಿನ್ನಲೆಗಿಲ್ಲ. ಫ್ರಾಯ್ಡ್ ಮತ್ತು ನಂತರದ ಅವನ ನಿಷ್ಠ ಅನುಯಾಯಿಗಳೆಲ್ಲರೂ 'ಮನೋರೋಗಿ'ಗಳ ಪರಿಶೀಲನೆ ಮತ್ತು ಚಿಕಿತ್ಸೆಗಳಲ್ಲಿ ತೊಡಗಿದ್ದ ಡಾಕ್ಟರುಗಳು. ಮನೋವೈಕಲ್ಯಗಳಿಂದ ಬಳಲುವ ಅಸಂಖ್ಯ ರೋಗಿಗಳೊಂದಿಗಿನ ದಶಕಗಳ ದೀರ್ಘ ಅನುಭವದಿಂದಾಗಿ ತಮಗೆ ಮನುಷ್ಯನ ಮನಸ್ಸನ್ನು ಅರಿಯುವ ಅರ್ಹತೆ ಉಂಟಾಗಿದೆ ಎಂಬ ಭ್ರಮೆಗೆ ಒಳಗಾಗಿದ್ದ ಈ ಡಾಕ್ಟರುಗಳು ತಮ್ಮ ಡಾಕ್ಟರಿಕೆಯ ಅನುಭವವನ್ನೇ ಸಂಶೋಧನಾ ಮಾಹಿತಿಯನ್ನಾಗಿ ಬಳಸಿದರು. ಮೂಲ ಸ್ವಭಾವಗಳು ಆಯಾ ವ್ಯಕ್ತಿಯ ಬಾಲ್ಯದಲ್ಲೆ ನಿರ್ಧಾರಿತವಾಗಿರುವಂಥವು ಎಂಬಂತಹ ತೀರ್ಮಾನಗಳನ್ನು ಮಾಡಿ ಬಿಟ್ಟರು. ರೋಗಿಗಳು ತೋರಿದ ವರ್ತನೆಗಳಿಗೆ ವ್ಯಕ್ತಿಯ ಪರಿಸರದಲ್ಲಿಯೂ ಕಾರಣಗಳಿರಬಹುದು ಎಂಬುದನ್ನು ಈ ಸಂಶೋಧನೆಗಳು ಗಮನಕ್ಕೆ ತಂದುಕೊಳ್ಳಲಿಲ್ಲ.'[೧೨] ಮನಸ್ಸನ್ನು ಕುರಿತ ವಿಚಾರಗಳು ಹೀಗೆ ಎಂದು ಅಷ್ಟು ಸುಲಭವಾಗಿ ಹೇಳಲು ಸಾಧ್ಯವಿಲ್ಲ. ಇದುವರೆಗೂ ನಾವು 'ಹೆಣ್ಣು' ಬೇರೆ 'ದೇಹ' ಬೇರೆ ಎಂದು ಚರ್ಚಿಸಿದ್ದೇವೆ. ಹಾಗೆಯೇ ಅವಳ ಮನಸ್ಸು ಸಹ ಬೇರೆಯೇ ಆಗಿರುತ್ತದೆ.

ಅಮೃತಾ ಪ್ರೀತಂ ಅವರ ಕತೆ 'ಜನವರಿ ಇಪ್ಪತ್ತೈದು, ಇಪ್ಪತ್ತಾರು, ಇಪ್ಪತ್ತೇಳು' ಇದರಲ್ಲಿ ಒಬ್ಬ ಹುಡುಗಿ ವರ್ಷದಲ್ಲಿ ಮೂರು ದಿನ ಪೂರಾ ನಿರ್ಜೀವಳಾಗಿ ಬಿಡುತ್ತಾಳೆ. ಪ್ರತಿವರ್ಷ ಈ ಮೂರು ದಿನ ಗಳಲ್ಲಿ ಅವಳು ಪ್ರೀತಿಸಿದ ಹುಡುಗನ ಜೊತೆ ಕೂಡಿರುತ್ತಾಳೆ. ಅವನ ಮರಣದ ನಂತರವೂ ಅವರ ಆತ್ಮ, ಮನಸ್ಸುಗಳು ಆ ಮೂರು ದಿನಗಳಲ್ಲಿ ಸಮಾಗಮವಾಗುತ್ತಿರುತ್ತವೆ. ಬರಿಯ ದೇಹದ ಮಿಲನವು ಇಲ್ಲಿ ಸಂಭವಿಸುತ್ತಿಲ್ಲ. ಮನಸ್ಸುಗಳ ಮಿಲನವೂ ನಡೆಯುತ್ತಿದೆ. 'ಮತ್ತೆ ಮುಂದಿನ ಜನವರಿ ಇಪ್ಪತ್ತೈದನೇ ತಾರೀಖು ಬಂದಾಗ ನನ್ನ ಹೆಸರಿಗೆ ಆ ಹುಡುಗಿಯ ಶೋಕಭರಿತ ಪತ್ರ ಬಂದಿತು. ಅದರಲ್ಲಿ ಆಕೆ ಯಾವ ಕೊಠಡಿಯಲ್ಲಿ ಹಿಂದಿನ ವರ್ಷ ಅವರಿಬ್ಬರೂ ಉಳಿದುಕೊಂಡಿದ್ದರೋ ಆ ಕೊಠಡಿಯನ್ನು

ಪ್ರವೇಶಿಸಲು ಬೇರೆ ಯಾರಿಗೂ ನಾನು ಬಿಡಕೂಡದು ಎಂದು ಕೋರಿದ್ದಳು. ಅವಳ ಪತ್ರದೊಂದಿಗೆ ಲಕೋಟೆಯಲ್ಲಿ ಎರಡು ಚೆಂಡು ಹೂವನ್ನು ಕಳಿಸಿ ನಾನು ಆ ಹೂಗಳನ್ನು ಆ ಕೊಠಡಿಯಲ್ಲಿ ಅವಳ ಪ್ರಣಯ ಶಯ್ಯೆಯಾಗಿದ್ದ ಆ ಮಂಚದ ಮೇಲೆ ಇಟ್ಟುಬಿಡಬೇಕೆಂದು ತಿಳಿಸಿದ್ದಳು. ಅವರಿಬ್ಬರ ಆತ್ಮಗಳು ಮೂರು ದಿನಗಳ ಕಾಲ ಆ ಕೊಠಡಿಯಲ್ಲಿರುತ್ತವೆಂದೂ ಬರೆದಿದ್ದಳು.'[೧೩]

ಇದಕ್ಕೆ ವೈಜ್ಞಾನಿಕ ದೃಷ್ಟಿಯಲ್ಲಿ ಯಾವುದೇ ಸಾಕ್ಷ್ಯ, ಪುರಾವೆಗಳು ಸಿಗದಿರಬಹುದು. ಆದರೆ ಹೆಣ್ಣಿನಲ್ಲಿ ದೇಹ, ಮನಸ್ಸುಗಳು ಬೇರೆ ಬೇರೆಯೇ ಆಗಿರುತ್ತವೆ ಎಂದು ಇದರಿಂದ ಹೇಳಬಹುದಾಗಿದೆ. ಇನ್ನೂ ವಿಶೇಷವಾದ ವರ್ತನೆಯನ್ನು ಆ ಹುಡುಗಿಯಲ್ಲಿ ನೋಡಬಹುದು. ಅವಳು ಮದುವೆ ಆಗಲು ತಯಾರಿದ್ದಾಳೆ. ಕೇವಲ ಮುನ್ನೂರಾ ಅರವತ್ತೆರಡು ದಿನಗಳಿಗೆ ಮಾತ್ರ. ಉಳಿದ ಮೂರು ದಿನಗಳು ಅವಳು ಪ್ರೀತಿಸಿದ ವ್ಯಕ್ತಿಯ ಆತ್ಮ, ಮನಸ್ಸಿನ ಜೊತೆಗೆ ಮಿಲನವಾಗುವುದಕ್ಕೆ ಕಾಯುತ್ತಿರುತ್ತಾಳೆ. ಮುನ್ನೂರ ಅರವತ್ತೆರಡು ದಿನ ಒಬ್ಬರೊಂದಿಗೆ ಮೂರು ದಿನಗಳು ಇನ್ನೊಬ್ಬರೊಂದಿಗೆ. ಈ ಮಾನಸಿಕ ಸ್ಥಿತಿ ವಿಚಿತ್ರವಾಗಿದ್ದರೂ ಮನಸ್ಸಿನ ಸ್ಥಿತಿಯನ್ನು ತಿಳಿಯಲು ಈ ಕಥೆಯು ಒಳ್ಳೆಯ ಉದಾಹರಣೆ ಯಾಗಿದೆ. 'ನೀನು ಹೇಳುತ್ತಿರುವುದು ಸರಿ. ಪೂರ್ಣ ಮೂರು ದಿನ ಅವನ ಆತ್ಮ ನಿನ್ನ ಆತ್ಮದೊಂದಿಗೆ ನಿನ್ನ ಆತ್ಮ ಅವನ ಆತ್ಮದೊಂದಿಗೆ ಇರುತ್ತದೆ. ಆದರೆ ವರ್ಷದ ಬಾಕಿ ಮುನ್ನೂರಾ ಅರವತ್ತೆಡು ದಿನ? ಯಾರು ವರ್ಷದ ಮುನ್ನೂರಾ ಅರವತ್ತೆರಡು ದಿನಕ್ಕೆ ನನ್ನನ್ನು ಮದುವೆಯಾಗಲು ಬಯಸುತ್ತಾನೊ ಅಂಥ ವ್ಯಕ್ತಿಯನ್ನು ನಾನು ಮದುವೆ ಆಗುತ್ತೀನಿ ಅಂತ ಹೇಳಿ, ನಮ್ಮ ತಂದೆ ತಾಯಿಗಳನ್ನು ಒಪ್ಪಿಸಿ ಎಂದು ಹೇಳಿದಳು.'[೧೪]

ಇದೇ ರೀತಿ ಇನ್ನೊಂದು ಘಟನೆಯನ್ನು ನೋಡಬಹುದು. 'ಋಣ' ಕಥೆಯಲ್ಲಿ ಮೂರ್ತಿ ಹಾಗೂ ಅಕ್ಕ ರುಕ್ಮಿ ಎರಡು ದೇಹ ಒಂದು ಮನಸ್ಸಿನಂತೆ ಇರುತ್ತಾರೆ. ಇಬ್ಬರು ಒಬ್ಬರನ್ನೇ ಮದುವೆ ಆಗುತ್ತಾರೆ. ಇಬ್ಬರ ಮದುವೇನೂ ಒಬ್ಬ ವ್ಯಕ್ತಿಯ ಜೊತೆಯಲ್ಲಿ ಆಗೋಕೆ ಸಾಧ್ಯ. ಆದರೆ ಮಗು ಯಾವ ಥರಾ ಎನ್ನುವುದು ರಾಜ್ ಬಕ್ಷಿಯ ಪ್ರಶ್ನೆಯಾಗುತ್ತದೆ. ಅದಕ್ಕೆ ಮೂರ್ತಿ ಕೊಡುವ ಉತ್ತರ, 'ದೇಹ ಮನಸ್ಸುಗಳಲ್ಲಿ ಎಷ್ಟು ಮಹಾ ವ್ಯತ್ಯಾಸ ಇರತ್ತೇ ಸಾಹೇಬರೇ? ಇಷ್ಟಂತೂ ತಿಳಿದುಕೊಳ್ಳಿ ಮನಸ್ಸು ಮಾತ್ರ ಅವಳದ್ದಾಗಿತ್ತು. ನನ್ನದಾಗಿರಲಿಲ್ಲ. ದೇಹ ಮಾತ್ರ ನನ್ನದ್ದಾಗಿತ್ತು.'[೧೫]

ಈ ಎರಡು ಘಟನೆಗಳಿಂದಲೂ 'ಮನಸ್ಸು' ಬೇರೆಯೇ ಎಂದು ತಿಳಿದುಕೊಳ್ಳಬಹುದಾಗಿದೆ. ಹೆಣ್ಣು ಬೇರೆ, ದೇಹವೂ ಬೇರೆ. ಮನಸ್ಸು ಬೇರೆಯೇ ಆಗಿರುತ್ತದೆ. ಇವು ಕೃತಿಗಳಲ್ಲಿಯೂ ಕಾಣುತ್ತವೆ. ಸಮಾಜದ ಸುತ್ತ ಕಣ್ಣು ಹಾಯಿಸಿದರೂ ಕಾಣುತ್ತವೆ. ನಮ್ಮ ಸುತ್ತ ಸಾವಿರಾರು ಹೆಣ್ಣುಗಳಲ್ಲಿ ದೇಹವೂ ಮನಸ್ಸೂ ಬೇರೆ ಬೇರೆಯಾಗಿರುತ್ತದೆ. ದೇಹಕ್ಕೆ ಹತ್ತಿರ ಆದವರು ಮನಸ್ಸಿಗೆ ಹತ್ತಿರವಾಗುತ್ತಾರೆ ಎಂದು

ಹೇಳಲು ಸಾಧ್ಯವಾಗುವುದಿಲ್ಲ. ಕೆಲವರು ಮದುವೆಯಾದ ಮೇಲೆ ಗಂಡನಿಗೆ 'ದೇಹ' ತ್ಯಾಗ ಮಾಡುತ್ತಾರೆ. ಮನಸ್ಸಿನಲ್ಲಿ ಇರುವವನನ್ನು ಮನಸ್ಸಿನಲ್ಲಿಯೇ ಹೂತಾಕುತ್ತಾರೆ. ಇದು ನಮ್ಮ ಸುತ್ತಣ ಪ್ರದೇಶದಲ್ಲಿ ಸಂಪ್ರದಾಯಸ್ಥ ಮನಸ್ಸುಗಳು ಇದ್ದಾಗಿನ ಸ್ಥಿತಿ. ಆದರೆ ಇದರ ಹೊರತಾಗಿ ದೇಹಕ್ಕೂ, ಮನಸ್ಸಿಗೂ ಹಿಡಿಸದವರು ಯಾರಿಗೂ ತಲೆಬಾಗದೆ, ಯಾವುದೇ ಬಂಧನಕ್ಕೆ ಒಳಗಾಗದೆ, ತಮ್ಮ ಸ್ವಾತಂತ್ರವನ್ನು ಉಳಿಸಿಕೊಂಡು ಬದುಕನ್ನು ಸಾಗಿಸಿದವರು ಇದ್ದಾರೆ.

ಟಿಪ್ಪಣಿಗಳು

೧ ಅಮೃತಾ ಪ್ರೀತಂ, ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಅನು – ಡಾ. ಆರ್. ಲಕ್ಷ್ಮೀನಾರಾಯಣ, ಭಾವಯಿತ್ರಿ ಪ್ರಕಾಶನ, ಪುಟ: ೧೫

೨ ಎಚ್.ಎಸ್. ಶ್ರೀಮತಿ, ಚಹರೆ, ಇಳಾ ಪ್ರಕಾಶನ, ಪುಟ: ೭೬, ೭೭

೩ ಅಮೃತಾ ಪ್ರೀತಂ, ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಅನು – ಡಾ. ಆರ್. ಲಕ್ಷ್ಮೀನಾರಾಯಣ, ಭಾವಯಿತ್ರಿ ಪ್ರಕಾಶನ, ೨೦೧೧, ಪುಟ: ೧೪

೪ ಅದೇ; ಪುಟ: ೮೭

೫ ಆರ್. ಇಂದಿರಾ, ಸ್ತ್ರೀವಾದ ದಿಕ್ಸೂಚಿ, ಸಮತಾ ಅಧ್ಯಯನ ಕೇಂದ್ರ, ೧೯೯೯, ಪುಟ: ೯

೬ ಎಚ್.ಎಸ್. ಶ್ರೀಮತಿ, ಚಹರೆ, ಇಳಾ ಪ್ರಕಾಶನ, ಪುಟ: ೧೧೩, ೧೧೪

೭ ಅಮೃತಾ ಪ್ರೀತಂ, ಪಿಂಜರ್, ಅನು – ಎಲ್.ಸಿ. ಸುಮಿತ್ರಾ, ಅಂಕಿತ ಪ್ರಕಾಶನ, ೨೦೦೬, ಪುಟ: ೨೩

೮ ಅದೇ; ಪುಟ: ೨೮

೯ ಆರ್. ಇಂದಿರಾ, ಸ್ತ್ರೀವಾದ ದಿಕ್ಸೂಚಿ, ಸಮತಾ ಅಧ್ಯಯನ ಕೇಂದ್ರ, ೧೯೯೯, ಪುಟ: ೨೯

೧೦ ಅಮೃತಾ ಪ್ರೀತಂ, ಪಿಂಜರ್, ಅನು – ಎನ್.ಸಿ. ಸುಮಿತ್ರಾ, ಅಂಕಿತ ಪ್ರಕಾಶನ, ೨೦೦೬, ಪುಟ: ೩೯

೧೧ Alison M. Jaggar, Feminist Politics and Human Nature, N.J. Rowman and Allan held, Zotowai, 1983.

೧೨ ಎಚ್.ಎಸ್. ಶ್ರೀಮತಿ. ಚಹರೆ, ಇಳಾ ಪ್ರಕಾಶನ, ಪುಟ: ೭೮, ೭೯

೧೩ ಅಮೃತಾ ಪ್ರೀತಂ, ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಅನು – ಡಾ. ಆರ್. ಲಕ್ಷ್ಮೀನಾರಾಯಣ, ಭಾವಯಿತ್ರಿ ಪ್ರಕಾಶನ, ೨೦೧೧, ಪುಟ: ೧೧೦

೧೪ ಅದೇ; ಪುಟ: ೧೧೨

೧೫ ಅದೇ; ಪುಟ: ೯೭

ಇ) ಸ್ತ್ರೀ ಶಿಕ್ಷಣ

ಅಮೃತಾ ಪ್ರೀತಂ ಅವರ ಎರಡು ಕಥೆಗಳಲ್ಲಿ ಸ್ತ್ರೀ ಶಿಕ್ಷಣವನ್ನು ಕುರಿತ ಅಂಶಗಳನ್ನು ನೋಡಬಹುದಾಗಿದೆ. ಕತೆಗಳನ್ನು ನೋಡುವ ಮೊದಲು ಭಾರತದ ಮಹಿಳೆಗೆ ಶಿಕ್ಷಣಾವಕಾಶ ಒದಗಿ ಬಂದದ್ದು ಹೇಗೆ ಎಂಬುದನ್ನು ಮೊದಲು ನೋಡಬೇಕಾಗುತ್ತದೆ. ಹತ್ತೊಂಬತ್ತನೆಯ ಶತಮಾನದ ಸುಧಾರಣಾವಾದಿಗಳಿಂದಾಗಿ ಮಹಿಳೆಗೆ ಸ್ತ್ರೀ ಶಿಕ್ಷಣಾವಕಾಶಗಳು ತೆರೆದು ಕೊಳ್ಳಲಾರಂಭಿಸಿತ್ತು. ಉನ್ನತ ಜಾತಿಗಳಲ್ಲಿ ಎಳೆಯ ವಯಸ್ಸಿನ ವಿಧವೆಯರಿಗೆ ಜೀವನದ ಗುರಿಯೊಂದನ್ನು ಕಾಣಿಸುವ ಪ್ರಯತ್ನವಾಗಿ ಕಲ್ಕತ್ತದ ಅಂದಿನ ಸುಧಾರಣಾವಾದಿಗಳು ಸ್ತ್ರೀಗೆ ಶಿಕ್ಷಣದ ಅವಕಾಶ ದೊರೆಯುವಂತೆ ಮಾಡಿದರು. ನಮ್ಮ ಮಹಿಳೆಯರಲ್ಲಿ ಮೊದಲು ಶಿಕ್ಷಣದ ಅವಕಾಶಗಳು ದೊರೆತದ್ದು ಈ ಬಾಲ ವಿಧವೆಯರಿಂದ ಎಂದು ಹೇಳಬಹುದಾಗಿದೆ. ಇದು ಒಂದೆಡೆ ಆದರೆ ಉನ್ನತ ಪದವಿಗಳನ್ನು ಪಡೆದು ದೊಡ್ಡ ಹುದ್ದೆಗಳಲ್ಲಿದ್ದ ಪುರುಷರು ವಿದ್ಯೆಯ ಗಂಧವಿಲ್ಲದ ಮಹಿಳೆಯರನ್ನು ವಿವಾಹವಾಗುವುದನ್ನು ನಿರಾಕರಿಸುತ್ತಿದ್ದರು. ಉನ್ನತ ವರಗಳೆನಿಸಿದ ಇವರ ಅಪೇಕ್ಷೆಗಳಿಗೆ ಅನುಗುಣವಾಗಿ ಹೆಣ್ಣು ಮಕ್ಕಳ ಮನೆ ಯವರು ತಮ್ಮ ಹೆಣ್ಣು ಮಕ್ಕಳನ್ನೂ ಶಾಲಾ ಕಾಲೇಜುಗಳಿಗೆ ಕಳುಹಿಸುವುದು ಅನಿವಾರ್ಯವಾಯಿತು. ಹೀಗೆ ವಿದ್ಯೆ ಕಲಿತ ಮಹಿಳೆಯರನ್ನು ನೌಕರಿಗಳಿಗೆ ಅಪೇಕ್ಷಿಸುವಂತೆ ಮಾಡದೆ, ಮನೆಯ ಗೌರವ ಹಾಗೂ ಪರಂಪರೆಗಳನ್ನು ಕಾಯ್ದುಕೊಳ್ಳುತ್ತಾ ಮನೆತನದ ಪ್ರತಿಷ್ಠೆಗೆ ಧಕ್ಕೆ ಬಾರದಂತೆ ಮನೆಮಂದಿಯ ಹಿತವನ್ನು ಸಂರಕ್ಷಿಸುವಲ್ಲಿ ಮುಂಚಿಗಿಂತಲೂ ಹೆಚ್ಚು ಸಮರ್ಥರೆನಿಸಿ ಬಾಳುವ ಗುಣವತಿಯರಾಗು ತ್ತಾರೆಂಬ ಸಾಮಾಜಿಕ ಕಳಕಳಿಯಿಂದ ಓದನ್ನು ಸಾಗಿಸಲು ಬಿಡುತ್ತಿದ್ದರು. ಶಿಕ್ಷಣವನ್ನು ಕುರಿತ ಅಂಶಗಳಿರುವ ಅಮೃತಾ ಪ್ರೀತಂರ ಕತೆ 'ಆ ಮನುಷ್ಯ' ಇದರಲ್ಲಿ ಪೂರಾ ಇಪ್ಪತ್ತು ವರ್ಷಗಳು ಕೆಲಸದ ಒತ್ತಡದಲ್ಲಿ ಕಳೆದು ಹೋಗಿದ್ದ ಮದನ್ ಕುವರ್‌ಗೆ ದಣಿವನ್ನು ನಿವಾರಿಸಿಕೊಳ್ಳಲು ಅವಕಾಶ ಬೇಕಾಯಿತು. ಹಾಗಾಗಿ ಅವನು ಪಕ್ಕಾ ರಸ್ತೆಗಳ ಚುಕ್ತ ಮಾಡಿ ಹಳ್ಳಿಗಾಡಿನ ಕಚ್ಚಾ ರಸ್ತೆಯನ್ನು ಹಿಡಿದನು. ಜಮೀನನ್ನು ಕೊಂಡುಕೊಂಡನು. ತನ್ನ ಅಸ್ತಿತ್ವ ಅವನಿಗೆ ದೂರದ ಬೆಟ್ಟಗಳ ಸಾಲಿನಲ್ಲಿ ಇದ್ದಂತೆ ಕಾಣಿಸುತ್ತಿತ್ತು. ಅವನ ಕೈಕಾಲುಗಳು ವಿಶ್ರಾಂತಿ ಬಯಸಿದ್ದವು. ಒಮ್ಮೊಮ್ಮೆ ಕೈಕಾಲುಗಳು ದಣಿಯದಿದ್ದಾಗ ಮನದಣಿಯುತ್ತದೆ. ಈ ಜಾಗಕ್ಕೆ ಬಂದ ನಂತರ ಅವನ ಇಪ್ಪತ್ತು ವರ್ಷಗಳ ದಣಿವು ಇಳಿಯತೊಡಗಿದೆ. ಈ ಒಂಟಿ ಜೀವನಕ್ಕೆ ಅಂಟಿಕೊಂಡಿದ್ದ ಕುವರ್‌ನ ಜೊತೆಗೆ ಅವನ ತಮ್ಮ ಇಂದ್ರನ ಆಗಮನವಾಗುತ್ತದೆ. ಮೊದಲಿಗೆ ತಮ್ಮನ ಆಗಮನವನ್ನು ಅಷ್ಟೊಂದು ಆತ್ಮೀಯವಾಗಿ ಸ್ವಾಗತಿಸದ ಕುವರ್‌ನಿಗೆ ನಂತರ ಅವನ ಜೊತೆಯು ಆತ್ಮೀಯವಾಗುತ್ತ ಹೋಗುತ್ತದೆ. ಆಕಸ್ಮಿಕವಾಗಿ ಆಗಮಿಸಿದ ಇಂದ್ರನ ಆಗಮನವು ಸದುದ್ದೇಶದಿಂದ ಕೂಡಿದೆ. ಅಣ್ಣನ ಜಮೀನಿನಲ್ಲಿ ಒಂದು ಶಾಲೆಯನ್ನು ತೆರೆಯುವ ಯೋಜನೆ ಯನ್ನು

ಹಾಕಿರುತ್ತಾನೆ. ಇಂದ್ರನು ವಿನೀತವಾಗಿ ಹೇಳಿದ 'ನೀನು ಓದಿದವನು, ಏನಾದರೂ ಕೆಲಸ ಮಾಡು ಅಂತ ನೀವು ಹೇಳುತ್ತಾ ಇದ್ದಿರಲ್ಲ. ಅದಕ್ಕೆ ಇಲ್ಲಿ ಮಕ್ಕಳದೊಂದು ಸ್ಕೂಲ್ ತೆಗೆಯೋಣ ಅಂತ ಯೋಚನೆ ಮಾಡಿದೆ. ಕೆಳಗಡೆ ಯಾವ ಹಳ್ಳಿಯಲ್ಲೂ ಒಂದು ಸ್ಕೂಲಿಲ್ಲ... ಎಂಟು ಆಣೆನೋ ಒಂದು ರೂಪಾಯೋ ಒಂದು ತಿಂಗಳಿಗೆ ಫೀಸ್ ಇಡುತ್ತೀನಿ. ಇಷ್ಟು ಹಣವಂತೂ ಯಾರೂ ಬೇಕಾದರೂ...'[೧] ಇಂದ್ರ ಶಾಲೆಯನ್ನು ತೆರೆಯುವ ಮಹತ್ತರ ಯೋಜನೆಯನ್ನು ಹಾಕಿದ್ದಾನೆ. ಇಷ್ಟು ದಿನ ಯಾವುದಕ್ಕೂ ಯೋಚಿಸದ ಕುವರ್‌ಗೆ ಈ ಯೋಜನೆಯು ಖುಷಿಯನ್ನು ತರುವಂತ ಕೆಲಸವಾಗಿದೆ. ತಮ್ಮನ ಆಗಮನದಿಂದ ನೂರಾರು ಮಕ್ಕಳಿಗೆ ಶಿಕ್ಷಣ ದೊರಕುವಂತೆ ಆಗಿದೆ.

ಶಿಕ್ಷಣದ ಮಹತ್ವ ಮೊದಲು ಸಮಾಜಕ್ಕೆ ಗೊತ್ತಿಲ್ಲದಾಗ ಅವರ ವರ್ತನೆಗಳು ಹೇಗಿದ್ದವು ಎಂದು ತಿಳಿಯಬೇಕಾಗುತ್ತದೆ. ಶಿಕ್ಷಣ ಅಷ್ಟು ಸುಲಭವಾಗಿ ಜನರಿಗೆ ತಲುಪಿಲ್ಲ. ಭಯದ ವಾತಾವರಣದಲ್ಲಿ ಶಿಕ್ಷಣ ಲಭಿಸಿದೆ. ಇದರ ಸ್ಪಷ್ಟ ಚಿತ್ರಣ ಹೆನ್ರಿ ಕುಲೆಟ್‌ರವರ ಕೃತಿ 'ಲೇರಿಯೊಂಕ' (ಕಾಡಿನ ಹುಡುಗನ ಓದಿನ ಹಾದಿ) ದಲ್ಲಿ ಒಡಮೂಡಿದೆ. 'ಅದು ಒಂದು ಜಾಗ, ಅಲ್ಲಿ ನಿನ್ನಂತ ಎಳೆ ಮಕ್ಕಳು ಇರುತ್ತಾರೆ. ಅಲ್ಲಿ ನಿಮಗೆ ಪಾಠಗಳನ್ನು ಹೇಳಿಕೊಡುತ್ತಾರೆ. ಹಾಗೆಂದರೆ ಏನು ಎಂದು ನನಗೂ ತಿಳಿಯದು. ಅದನ್ನು ತಿಳಿಯಲು ನಾನು ಮುದುಕನಾಗಿದ್ದೇನೆ. ಆದರೆ ಯಾರೂ ಅಲ್ಲಿಗೆ ಹೋಗುವುದಿಲ್ಲ. ನೀನಂತೂ ಇಲ್ಲವೆ ಇಲ್ಲ. ನಾನ್ಯಾಕೆ ನನ್ನ ಮಗನನ್ನು ಕಳಿಸಬೇಕು. ಅದೂ ನಾನು ಮುದುಕನಾಗಿರುತ್ತಿರುವಾಗ?'[೨] ಮುಂದೆ ಸಾಗಿದಂತೆ ಅಲ್ಲಿಯ ಸರ್ಕಾರ ಒಬ್ಬ ತಂದೆಯಿಂದ ಒಬ್ಬ ಮಗನನ್ನು ಶಾಲೆಗೆ ಸೇರಿಸುವ ಆಜ್ಞೆಯನ್ನು ಹೊರಡಿಸಿದೆ. ಇಲ್ಲಿನ ಜನರ ಅಹವಾಲು ಒಂದೇ, ಒಂದು ಕೈಯಲ್ಲಿ ಮೊನಚಾದ ಬಾಣಗಳನ್ನು, ಇನ್ನೊಂದು ಕೈಯಲ್ಲಿ ಕೋಲನ್ನು ಹಿಡಿದು, ಪುಸ್ತಕವನ್ನು ಕೂಡ ಅದೇ ಕೈಯಲ್ಲಿ ಹಿಡಿಯಬೇಕೆಂದು ಹೇಳುವುದು ಸರಿಯೇ ಎಂಬುದು. ಏನೇ ಆದರೂ ಶಾಲೆಗೆ ಸೇರಿಸಲು ಒಪ್ಪದ ಅಲ್ಲಿಯ ಜನರು ಸರ್ಕಾರಕ್ಕೆ ಹೆದರುತ್ತಾರೆ. 'ನಮ್ಮ ಜಾನುವಾರುಗಳನ್ನು ಕಳೆದುಕೊಂಡು ಕಷ್ಟ ಅನುಭವಿಸಿ ನಂತರ ಮಕ್ಕಳನ್ನು ಶಾಲೆಗೆ ಕಳಿಸುವುದಕ್ಕಿಂತ, ಮಕ್ಕಳು ಈಗಲೇ ಹೋಗಲಿ. ಈ ಸಾರಿ ಹೋಗಲಿ, ನೀನು ಕರಿಯಂಕೆಯಿ, ಮತ್ತೊಂದು ಹೆಂಗಸನ್ನು ಮದುವೆಯಾಗು, ಅವಳಿಂದ ಇನ್ನಷ್ಟು ಮಕ್ಕಳನ್ನು ಪಡಿ, ಇವನನ್ನು ಶಾಲೆಗೆ ಕಳಿಸು. ಸರ್ಕಾರ ಒಬ್ಬ ತಂದೆಯಿಂದ ಒಂದು ಮಗುವನ್ನು ಮಾತ್ರ ಶಾಲೆಗೆ ಕೇಳುತ್ತಿದೆ.'[೩] ಅಕ್ಷರ ಕ್ಷೀರಕ್ಕೆ ಹಾತೊರೆದ ಮಾನಯಿ ತರುಣನ ಹೃದಯಸ್ಪರ್ಶಿ ಕತೆ ಲೇರಿಯೊಂಕ. ಶಾಲೆಯ ಶಿಕ್ಷಣವು ಜನರಲ್ಲಿದ್ದ ನಂಬಿಕೆಗಳನ್ನು ಬಿಚ್ಚುತ್ತಾ ಹೋಗುತ್ತದೆ.

ಅಮೃತಾ ಪ್ರೀತಂ ಅವರ ಇನ್ನೊಂದು ಕತೆ 'ಧನ್ನೋ'ದಲ್ಲಿ ಸಾಮಾನ್ಯ ಹಳ್ಳಿ ಮಹಿಳೆ ಯಾಗಿರುವ ಧನ್ನೋ ಗಟ್ಟಿಗಿತ್ತಿಯಾದರೂ ಅದು ಮಾತಿಗೆ ಸೀಮಿತವಾಗಿರುತ್ತದೆ. ಮನಸ್ಸಿನಿಂದ ಅವಳು

ಮೃದು. ಧನ್ನೋ ಹೆಣ್ಣನ್ನು ಕುರಿತು ಹೇಳುವಾಗ ಅವಳಲ್ಲಿ ನೋವಿದೆ. 'ಹೆಣ್ಣನ್ನಂತೂ ಆ ದೇವರು ಮೊದಲಿನಿಂದಲೂ ಧೇಲಿ(ಎಂಟಾಣೆ)ಯಾಗಿಯೇ ಸೃಷ್ಟಿಸಿರೋದು. ತಾನು ಇಷ್ಟಪಟ್ಟ ಗಂಡನ್ನು ಗಂಟು ಹಾಕಿಕೊಂಡು ಡಬ್ಬಲ್ ರೂಪಾಯಿಯಾದವಳು ಯಾರೋ ಪುಣ್ಯ ಮಾಡಿದವಳು ಮಾತ್ರ.'[೪] ಇಂಥ ಹೆಣ್ಣು ಮಕ್ಕಳಿಗೆ ಧನ್ನೋ ಏನು ಮಾಡಲು ಸಾಧ್ಯ. ಊರಿನ ಎಲ್ಲಾ ಹೆಂಗಸರು, ಗಂಡಸರಿಗೂ ಇವಳೆಂದರೆ ಭಯ. 'ಆಗತಾನೆ ಮೀಸೆ ಮೂಡುತ್ತಿದ್ದ ಹೈದನೊಬ್ಬ ಅವಳ ತೋಳಿನ ಮೇಲೆ ಲಟಿಕೆ ಮುರಿದು ನಿನ್ನ ಧೇಲಿ ತೋರಿಸು. ಅದೆಷ್ಟು ಸಾಚಾ ಅಂತ ಎಂದು ಹೇಳಿದಾಗ, ಧನ್ನೋ ಅವನ ಕುತ್ತಿಗೆ ಹಿಡಿದು, ನಡೀ ತೋರಿಸ್ತೀನಿ ನಿಮ್ಮ ಅಮ್ಮನ ಲಂಗದಲ್ಲಿದೆ ಎಂದು ಹೇಳಿದ್ದಳು.'[೫] ಈ ರೀತಿಯ ಸಂಭಾಷಣೆಗಳಿಂದ ಊರಿನ ಯಾವ ಗಂಡಸೂ ಧನ್ನೋಳತ್ತ ತಲೆ ಎತ್ತಿ ನೋಡುವ ತಾಕತ್ತು ಮಾಡುತ್ತಿರಲಿಲ್ಲ. ಇಂಥ ಧನ್ನೋ ಸಾಯುವ ಸ್ಥಿತಿಗೆ ಬಂದಾಗ ಊರಿನ ಜನಗಳಿಗೆ ಕುತೂಹಲ. ಅವಳ ಜಮೀನನ್ನು ಯಾರ ಹೆಸರಿಗೆ ಬರೆದಿರುತ್ತಾಳೆ ಎಂದು. ಧನ್ನೋ ಊರಿನ ಹೆಣ್ಣು ಮಕ್ಕಳ ಬಗ್ಗೆ ಯೋಚನೆ ಮಾಡಿರುತ್ತಾಳೆ. ತನ್ನ ಜಮೀನನ್ನು ಊರಿನ ಶಾಲೆಗೆ ಬರೆದುಕೊಟ್ಟಿರುತ್ತಾಳೆ. 'ಆ ಹೊತ್ತು ಮಧ್ಯಾಹ್ನ ಧನ್ನೋ ತೀರಿಕೊಂಡಳು. ಧನ್ನೋಳ ನಾಲ್ಕನೆಯ ದಿನದ ತಿಥಿಯ ನಂತರ ಊರಿನ ಜನ ಅವಳ ಪೆಟ್ಟಿಗೆಯನ್ನು ತೆರೆದಾಗ ಅವರಿಗೆ ಧನ್ನೋಳ ವಿಲ್ಲು ಪತ್ರ ಸಿಕ್ಕಿತು. ಧನ್ನೋ ತನ್ನ ಜಮೀನನ್ನು ಊರಿನ ಶಾಲೆಯ ಹೆಸರಿಗೆ ಮಾಡಿದ್ದಳು ಮತ್ತು ಅದರಲ್ಲಿ ಬರೆಸಿದ್ದಳು. ನನ್ನ ಒಂದೇ ಒಂದು ಆಸೆ ಏನೆಂದರೆ ಹುಡುಗಿಯರ ಕಿವಿಗೂ ನಾಲ್ಕಕ್ಷರ ಬಿದ್ದಿತು ಅಂದರೆ, ಅವರ ಬದುಕು ಹಾಳಾಗಲ್ಲ.'[೬] ಧನ್ನೋ ಊರಿನ ಜನರಿಂದ ಗಟ್ಟಿಗಿತ್ತಿ, ಒಳ್ಳೆ ಭಾತಿ ಹೆಂಗಸು ಎಂದು ಕರೆಸಿಕೊಂಡಿದ್ದಳು. ಅವಳ ಮನದಾಳದ ಆಸೆ ಅವಳ ಸಾವಿನ ನಂತರ ಎಲ್ಲರಿಗೂ ತಿಳಿಯುತ್ತದೆ. ಸ್ತ್ರೀ ಶಿಕ್ಷಣದಿಂದ ಇಡೀ ದೇಶ ಬೆಳಗುತ್ತದೆ. ಒಬ್ಬ ಪುರುಷ ಓದಿದರೆ ಅದು ಅವನಿಗಾಗಿ ಮಾತ್ರ. ಒಬ್ಬ ಸ್ತ್ರೀ ಓದಿದರೆ ಅದು ಒಂದು ಮನೆಗೇ ಬೆಳಕಾಗುತ್ತದೆ. ಇಂತಹ ಶಿಕ್ಷಣವನ್ನು ಎಲ್ಲಾ ಮಕ್ಕಳಿಗೂ ಸಿಗಬೇಕೆಂಬುದು ಬರಿಯ ಕುವರ್, ಇಂದ್ರ ಹಾಗೂ ಧನ್ನೋಳ ಕನಸಲ್ಲ ಇಡೀ ಸಮಾಜದ ಕನಸಾಗಬೇಕು.

ಸ್ತ್ರೀ ಶಿಕ್ಷಣದ ಅವಶ್ಯಕತೆಯನ್ನು ಕುರಿತು ಚರ್ಚಿಸುವಾಗ ಅಮೃತಾ ಪ್ರೀತಂ ಕಥೆಗಳಲ್ಲಿ ಅದರ ಅವಶ್ಯಕತೆಯನ್ನು ನಿರೂಪಿಸುವ ಕ್ರಮವು ವಿಶಾಲವಾದ ಸ್ತ್ರೀ ಅಭ್ಯುದಯದ ಕೆಲಸವನ್ನು ಮಾಡಿದಂತೆ ಗೋಚರಿಸುತ್ತದೆ. ಸ್ತ್ರೀಯ ನಿರಂತರ ಚಲನಶೀಲತೆಗೆ ಅವಳ ಓದು ಸಹ ಧನಿ ಯಾಗುತ್ತದೆ. ಇಂತಹ ಓದಿಗೆ ತಮ್ಮ ಕಥೆಗಳ ಮೂಲಕ ಸ್ಫೂರ್ತಿಯಾಗಿ ಲೇಖಕಿ ನಿಲ್ಲುತ್ತಾರೆ.

ಟಿಪ್ಪಣಿಗಳು

೧ ಅಮೃತಾ ಪ್ರೀತಂ, ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಅನು – ಡಾ. ಆರ್. ಲಕ್ಷ್ಮೀನಾರಾಯಣ, ಭಾವಯಿತ್ರಿ ಪ್ರಕಾಶನ, ೨೦೧೧, ಪುಟ: ೬೯

೨ ಹೆನ್ರಿ ಓಲೆ ಕುಲೆಟ್, ಲೇರಿಯೊಂಕ, ಅನು – ಪ್ರಶಾಂತ್ ಬೀಜಿ, ೨೦೦೮, ಪುಟ: ೧೬

೩ ಅದೇ; ಪುಟ: ೨೧

೪ ಅಮೃತಾ ಪ್ರೀತಂ, ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಅನು – ಡಾ. ಆರ್. ಲಕ್ಷ್ಮೀನಾರಾಯಣ, ಭಾವಯಿತ್ರಿ ಪ್ರಕಾಶನ, ೨೦೧೧, ಪುಟ: ೧೧೩

೫ ಅದೇ; ಪುಟ: ೧೧೫

೬ ಅದೇ; ಪುಟ: ೧೧೭

ಈ) ಸ್ತ್ರೀ – ಪುರುಷ ಮುಖಾಮುಖಿ

ಅಮೃತಾ ಪ್ರೀತಂ ಅವರ ಕಥನದಲ್ಲಿ ಸ್ತ್ರೀ – ಪುರುಷ ಪಾತ್ರಗಳು ವಿಭಿನ್ನವಾಗಿವೆ. ಹಮೀದಾ, ಮಲ್ಲಿಕಾ, ಮೀನೂ, ಅಂಗೂರಿ ಪಾತ್ರಗಳು ಅಥವಾ ಇಂದ್ರ, ಕುವರ್, ಡಾಕ್ಟರ್, ರಶೀದ ಪಾತ್ರಗಳು ಯಾವುದೇ ಆಗಿರಬಹುದು ವಿಭಿನ್ನತೆಗೆ ಸಾಕ್ಷಿಯಾದ ಪಾತ್ರಗಳಾಗಿವೆ. ಈ ಪಾತ್ರಗಳನ್ನು ವಿಶ್ಲೇಷಿಸುವ ಮೊದಲು ಸ್ತ್ರೀ ಪುರುಷರ ನಡುವಿನ ಭಿನ್ನತೆ, ಅಸಮಾನತೆಯ ಬಗ್ಗೆ ತಿಳಿಯಬೇಕಾಗಿದೆ. ಸ್ತ್ರೀ ಪುರುಷರ ನಡುವಿನ ಅಸಮಾನತೆಗಳಲ್ಲಿ ಭಿನ್ನತೆಗಳಿವೆ. ಸ್ತ್ರೀ ಪುರುಷರ ದೇಹ ರಚನೆ ಪ್ರಧಾನವಾದ ಭಿನ್ನತೆಯನ್ನು ಸೂಚಿಸುತ್ತದೆ. ಬುದ್ಧಿ ಹಾಗೂ ಮನೋಭಾವಗಳಲ್ಲಿನ ಭಿನ್ನತೆ ಗೌಪ್ಯವಾಗಿರುತ್ತದೆ. ಈ ಎರಡು ವಿಶೇಷತೆಗಳೂ, ವಿಶೇಷತೆಗಳಾಗಿವೆಯೇ ಹೊರತು ಮೇಲು ಕೀಳಿನ ಅಸಮಾನತೆಗಳು ಇಲ್ಲಿಲ್ಲ. ಆದರೆ ಈ ಭಿನ್ನತೆಗಳನ್ನು ಶತ್ರುಗಳಂತೆ ವ್ಯವಸ್ಥೆ ಕಾಣುತ್ತದೆ. ಈ ವ್ಯವಸ್ಥೆ ಸ್ತ್ರೀ ಪುರುಷರ ನಡುವಣ ಜೈವಿಕ ವ್ಯತ್ಯಾಸಗಳನ್ನು ಅತಿಯಾಗಿ ವೈಭವೀಕರಿಸಿ ಭಿನ್ನ ಜೈವಿಕತೆಯ ಕಾರಣದಿಂದಾಗಿಯೇ ಸ್ತ್ರೀ ಪುರುಷರು ಸಮಾಜದಲ್ಲಿ ಸಮಾನ ಪಾತ್ರಗಳನ್ನು ನಿರ್ವಹಿಸಲು ಸಾಧ್ಯವಿಲ್ಲ ಎಂಬ ಮಿಥ್ಯೆಯನ್ನು ಸೃಷ್ಟಿಸಿದೆ. ಈ ವ್ಯವಸ್ಥೆಯು ಪುರುಷರಿಗೆ ಅತಿ ಪ್ರಾಧಾನ್ಯವನ್ನು ನೀಡಿ, ಸ್ತ್ರೀಯರ ಪಾತ್ರವನ್ನೂ ಅವರು ಮಾಡುವ ಕಾರ್ಯಗಳನ್ನೂ ಗೌಣವಾಗಿ ಕಂಡು, ಸ್ತ್ರೀಯರ ಮೇಲೆ ಹಲವು ನಿಬಂಧನೆಗಳನ್ನು ಹೇರುತ್ತದೆ. ಇದು ಸಹ ಸ್ತ್ರೀ ಪುರುಷರ ಅಸಮಾನತೆಗೆ ಕಾರಣವಾಗಿದೆ. 'ಸ್ತ್ರೀಯ ಮೇಲೆ ತನ್ನ ಅಧಿಕಾರವನ್ನು ಚಲಾಯಿಸಲು ಲೈಂಗಿಕತೆ ಎನ್ನುವ ಅಸ್ತ್ರವನ್ನು ಬಳಸುವ ಪುರುಷರನ್ನು ವೈಭವೀಕರಿಸುವ ಸಾಹಿತಿಗಳನ್ನು, ಸ್ತ್ರೀ ಪುರುಷ ಅಸಮಾನತೆಯನ್ನು ಬೆಂಬಲಿಸುವ ಸಮಾಜ ವಿಜ್ಞಾನಿಗಳನ್ನು ಟೀಕಿಸಿದ ಕೇಟ್ ಮಿಲೆಟ್ ಇಂತಹ ಬರಹಗಳು ಪುರುಷ ಪ್ರಾಧಾನ್ಯವನ್ನು ಎತ್ತಿ ಹಿಡಿಯುವ ಪ್ರಯತ್ನಗಳಾಗಿವೆ'[1] ಎಂದಿದ್ದಾಳೆ.

ಇನ್ನು ಸ್ತ್ರೀ ಪುರುಷ ಸಮಾನತೆಗೆ ಅಡ್ಡಿ ಬಂದಿರುವ ಪ್ರಮುಖ ಕಾರಣ ಆಕೆಯ ದೇಹ ರಚನೆ ಎನ್ನುವುದು. ಪುರುಷನ ಹಾರ್ಮೋನುಗಳು ಆತನನ್ನು ಒಬ್ಬ ಬಲಿಷ್ಠ ವ್ಯಕ್ತಿಯನ್ನಾಗಿ ಮಾಡಿದರೆ, ಸ್ತ್ರೀಯ ಹಾರ್ಮೋನುಗಳು ಆಕೆಯನ್ನು ಓರ್ವ ಸಾಧು ಸ್ವಭಾವದ ಭಾವನೆಗಳನ್ನು ಹೊಂದಿದ ವ್ಯಕ್ತಿಯನ್ನಾಗಿ ಮಾಡುತ್ತದೆ ಎಂದು ಹೇಳುವ ನಿಲುವುಗಳು ಸರಿಯಲ್ಲ. ನಮ್ಮ ದೌರ್ಬಲ್ಯಗಳು ಅಥವಾ ನಮ್ಮ ಸಾಮರ್ಥ್ಯಗಳು ನಮಗೆ ದೊರೆಯುವ ಅವಕಾಶಗಳಿಂದ ಪ್ರಭಾವಿತವಾದಂತಹವುಗಳಾಗಿವೆ. ಆರ್. ಇಂದಿರಾರವರ ಮಾತು ಇದಕ್ಕೆ ಸ್ಪಷ್ಟತೆಯನ್ನು ಕೊಡುತ್ತದೆ. 'ಸ್ತ್ರೀ ಪುರುಷ ಅಸಮಾನತೆಯ ಜೈವಿಕ ಮೂಲ ಸಿದ್ಧಾಂತಗಳನ್ನು ಸ್ತ್ರೀವಾದಿಗಳು ವಿರೋಧಿಸುತ್ತಾರೆ. ಪುರುಷರ ಜೈವಿಕ ರಚನೆ, 'ಪುರುಷತ್ವ' ವನ್ನು ಸೃಷ್ಟಿಸಿದರೆ, ಸ್ತ್ರೀಯರ ಜೈವಿಕ ರಚನೆ 'ಸ್ತ್ರೀತ್ವ'ವನ್ನು ಸೃಷ್ಟಿಸುತ್ತದೆ ಎಂಬ ವಾದ ಹುರುಳಿಲ್ಲದ್ದು.

ಏಕೆಂದರೆ ಪುರುಷತ್ವ ಮತ್ತು ಸ್ತ್ರೀತ್ವ ಎಂಬ ಪರಿಕಲ್ಪನೆಗಳು ಮಾನಸಿಕ ಸ್ಥಿತಿಗಳೇ ಹೊರತು ಸಾರ್ವತ್ರಿಕ ವಾಸ್ತವಗಳಲ್ಲ.'[೨]

ಸ್ತ್ರೀ ಪುರುಷರ ನಡುವಿನ ಭಿನ್ನ ನಿಲುವುಗಳನ್ನು ಅಮೃತಾ ಪ್ರೀತಂ ಅವರ ಕಥನದಲ್ಲಿನ ಹಮೀದಾ – ರಶೀದ, ಮೀನಾ – ಅವಿನಾಶ, ಶೀನಾ – ವೀರೇಂದ್ರರಲ್ಲಿ ನೋಡಬಹುದಾಗಿದೆ. ಕುಟುಂಬ ವ್ಯವಸ್ಥೆ ಸ್ತ್ರೀಯನ್ನು ಮೆದುವಾಗಿಸುತ್ತದೆ. ಇದಕ್ಕೆ ಹಮೀದಾ – ರಶೀದಾನ ಪಾತ್ರಗಳೇ ಸಾಕ್ಷಿಯಾಗಿದೆ. ಹಮೀದಾಳ ಒಪ್ಪಿಗೆ ಇಲ್ಲದೆ ಅವಳನ್ನು ಅವಳ ತವರಿನಿಂದ ಕರೆತಂದು ಬಲವಂತವಾಗಿ ಮದುವೆ ಆಗಿ, ತನ್ನ ಮಗುವಿಗೆ ತಾಯಿಯನ್ನಾಗಿ ಮಾಡುತ್ತಾನೆ. ರಶೀದನು ಅವಳ ಇಷ್ಟಕ್ಕೆ ವಿರುದ್ಧವಾಗಿ ಇಷ್ಟೆಲ್ಲಾ ಮಾಡಿದ್ದೇನೆ ಎಂದು ಕೊರಗಿ, ಅವಳನ್ನು ಯಾವುದಕ್ಕೂ ಕಡಿಮೆ ಇಲ್ಲದಂತೆ ನೋಡಿ ಕೊಳ್ಳುತ್ತಾನೆ. ಕುಟುಂಬ ವ್ಯವಸ್ಥೆಯೇ ಹಾಗೆ ಅಲ್ಲಿ ಇಷ್ಟವಿರುತ್ತದೋ, ಇಲ್ಲವೋ ಒಟ್ಟಾಗಿ ಬಾಳುತ್ತಿರುತ್ತಾರೆ. ಅದು ಕೆಲವೊಮ್ಮೆ ಅನಿವಾರ್ಯವೂ ಆಗಿರುತ್ತದೆ.

ಸ್ತ್ರೀಯ ತಾಯ್ತನ ಅವಳನ್ನು ಇಷ್ಟವಿಲ್ಲದಿದ್ದರೂ ಮೆದುವಾಗಿಸುತ್ತದೆ. ಇದನ್ನು ಇನ್ನಷ್ಟು ಸ್ಪಷ್ಟಗೊಳಿಸುವುದಕ್ಕಾಗಿ ಎಚ್.ಎಸ್. ಶ್ರೀಮತಿ ಅವರ ಮಾತನ್ನು ನೋಡಬೇಕಾಗುತ್ತದೆ. 'ಸ್ತ್ರೀ ಪುರುಷರು ಒಟ್ಟಿಗೆ ಬಾಳಬೇಕಾದ ಕುಟುಂಬ ಎಂಬ ವ್ಯವಸ್ಥೆಯು ಪುರುಷ ನಿರ್ಮಿತ ರಚನೆ ಎಂದು ಎಷ್ಟೇ ವಿವರಿಸಿದರೂ, ಉಳಿದ ರಚನೆಗಳಿಗಿಂತ ಭಿನ್ನ. ಇಲ್ಲಿ ರಕ್ತ ಸಂಬಂಧಗಳಿವೆ. ಇವು ಪ್ರಕೃತಿ ಸಹಜ ಸಂಬಂಧಗಳಾದ್ದರಿಂದ ಇಲ್ಲಿ ಮನೋಲೋಕ ಎಂಬುದಿದೆ ಮನಸ್ಸಿನ ಮಾತಿಗೆ. ಎಂದರೆ ಸ್ತ್ರೀ ಪುರುಷರಲ್ಲಿ ಕೆಲವು ಸಹಜ ಭಿನ್ನತೆಗಳಿವೆ. ಹಲವು ವೇಳೆ ಇವು ಸಾಮರ್ಥ್ಯಗಳಾಗಿ ನಿಂತರೆ, ಮತ್ತೆ ಕೆಲವು ವೇಳೆ ದೌರ್ಬಲ್ಯಗಳಾಗಿ ಉಳಿಯುತ್ತವೆ. ಬಹುಶಃ ಪ್ರಕೃತಿಯು ಸ್ತ್ರೀಗೆ ತಾಯ್ತನದ ಹೊಣೆಗಾರಿಕೆಯನ್ನು ವಹಿಸಿರುವ ಸಂಗತಿಯಿಂದಾಗಿ ರಕ್ತ ಸಂಬಂಧಗಳ ವಿಚಾರದಲ್ಲಿ ಅವಳನ್ನೂ ಹೆಚ್ಚು ಮೆದುವಾಗಿಸಿದೆ.'[೩] ಇಲ್ಲಿಯೂ ಹಮೀದಾಳಿಗೆ ಈ ಕುಟುಂಬ ವ್ಯವಸ್ಥೆಯೇ ಹಿಡಿಸುವುದಿಲ್ಲ. ಆದರೂ ಅನಿವಾರ್ಯವಾಗಿ ಹೊಂದಾಣಿಕೆ ಮಾಡಿಕೊಂಡಿರುವುದರಿಂದ ಅವಳನ್ನು ಈ ಕುಟುಂಬ ವ್ಯವಸ್ಥೆ ಒಪ್ಪುವಂತೆ ಮೆದುವಾಗಿಸುತ್ತದೆ. 'ಇತರರ ನೋವು ಕಷ್ಟಗಳಿಗೆ ಸ್ಪಂದಿಸುತ್ತಿದ್ದ ಹಮೀದಾಳಿಗೆ ತನ್ನ ಗಂಡ ರಶೀದನ ಮೇಲೆ ಪ್ರೀತಿ ಅಂಕುರಿಸಲು ಶುರುವಾಯಿತು. ಇದುವರೆಗೂ ಅವಳ ಜೀವನದಲ್ಲಿ ನಡೆದಿರುವುದೆಲ್ಲ ಸುಳ್ಳು. ತನ್ನ ಈಗಿರುವ ಕುಟುಂಬವಷ್ಟೆ ನಿಜ ಎಂದು ಹಳೆಯದೆಲ್ಲವನ್ನು ಮರೆಯಲು ಯತ್ನಿಸುತ್ತಾಳೆ. ಇಳಿ ಮಧ್ಯಾಹ್ನ ಹಮೀದಾ ನಿಟ್ಟುಸಿರು ಬಿಡುತ್ತಾ ಎದ್ದಳು. ಅವಳು ಬೇರೆಯವರ ದುಃಖವನ್ನು ನೋಡಿದ್ದಳು. ಆಗೆಲ್ಲ ಅವಳಿಗೆ ತನ್ನ ಸ್ವಂತದ ದುಃಖ ಸಣ್ಣದಾಗಿ ಕಂಡಿತ್ತು. ಅವರೆಲ್ಲ ತಾತ್ಕಾಲಿಕ ಬಿಡದಿಗಳಲ್ಲಿ ವಾಸಿಸುವಂತಿದ್ದರು. ಯಾರದ್ದೂ ಮನೆಯಾಗಿರಲಿಲ್ಲ. ತಾರೋಳ ಕಥೆ ಕೇಳಿದ

ನಂತರ ಹಮೀದಾಗೆ ತನ್ನ ಮನೆ ನೆಮ್ಮದಿಯ ತಾಣ ಎನಿಸಿತು. ರಶೀದ ತನ್ನನ್ನು ಅಪಹರಿಸಿ ತಂದ, ಅನ್ಯಾಯ ಮಾಡಿದ ಎಂಬುದನ್ನು ಹಮೀದಾ ಮರೆಯಲೆತ್ನಿಸಿದಳು. ಅವನನ್ನು ತೀವ್ರವಾಗಿ ಪ್ರೀತಿಸಬಯಸಿದಳು. ಅವನು ಅವಳ ಗಂಡ, ಅವಳ ಮಗುವಿನ ತಂದೆ. ಇದು ಮಾತ್ರ ನಿಜ. ಇದನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಉಳಿದಿದ್ದೆಲ್ಲ ಸುಳ್ಳು ಎಂದು ಯೋಚಿಸಿದಳು.'[9] ಸ್ತ್ರೀ ಪುರುಷನ ಭಿನ್ನ ವ್ಯಕ್ತಿತ್ವಗಳು ಮತ್ತು ಮನಸ್ಥಿತಿಗಳಿಂದ ಹೊಂದಾಣಿಕೆಯ ಕೊರತೆಗಳು ಕಾಣಿಸುತ್ತವೆ. ಇದರಲ್ಲೂ ರಶೀದ ತನ್ನ ಮನೆತನದ ದ್ವೇಷಕ್ಕಾಗಿ ಹಮೀದಾಳನ್ನು ಮದುವೆ ಯಾಗಿರುವುದು. ಅವರ ನಡುವೆ ಮನಸ್ತಾಪಗಳು ಹೆಚ್ಚಬೇಕಾಗಿತ್ತು. ಆದರೆ ಅದರ ವಿರುದ್ಧವಾಗಿ ಇವರಲ್ಲಿ ಪ್ರೀತಿಯು ಹೆಚ್ಚಾಯಿತು. ಭಿನ್ನ ವ್ಯಕ್ತಿತ್ವಗಳ ಮುಖಾಮುಖಿಯನ್ನು ಹಮೀದಾ – ರಶೀದರ ಪಾತ್ರಗಳಲ್ಲಿ ನೋಡಬಹುದಾಗಿದೆ.

ಮದುವೆ ಯೋಜನೆಯ ಪರಿಕಲ್ಪನೆಗಳು ಅಮೃತಾ ಪ್ರೀತಂ ಅವರ ಮೂರನೆ ಹೆಣ್ಣು ಕಥೆಯಲ್ಲಿ ಕಾಣುವುದಿಲ್ಲ. ಗಂಡು ಹೆಣ್ಣಿನ ಸಂಬಂಧದ ಅಗತ್ಯತೆಗೆ ಮಾಡಿಕೊಂಡಿರುವ ಈ ವಿವಾಹದ ಪರಿಕಲ್ಪನೆಗಳು ಬೌದ್ಧಿಕತೆಯನ್ನು ಒಳಗೊಂಡಿರುವ ಮನಸ್ಸುಗಳಿಗೆ ಅಗತ್ಯವಾಗು ವುದಿಲ್ಲ. ವಿವಾಹದ ಸಂಬಂಧಗಳಿಗೆ ಹೆಚ್ಚು ಒತ್ತನ್ನು ಕೊಟ್ಟಿರುವ ವ್ಯವಸ್ಥೆಯು ಅದರಿಂದಾಚೆಗಿನ ಸಂಬಂಧಗಳಿಗೆ ಪ್ರೋತ್ಸಾಹ ಕೊಡುವುದಿಲ್ಲ ಹಾಗೂ ಸರಿ ತಪ್ಪುಗಳ ಜಡ್ಡು ಚರ್ಚೆಗಳಿಗೆ ಒಳಗಾಗಿಸುತ್ತದೆ. ಎಚ್.ಎಸ್. ಶ್ರೀಮತಿಯವರು ಮದುವೆ ಬಗ್ಗೆ ತಳೆದಿರುವ ನಿಲುವನ್ನು ನಾವು ನೋಡಬೇಕಾಗುತ್ತದೆ ಹಾಗೂ ಅಮೃತಾರ ಕತೆಯಲ್ಲಿ ಈ ವಿವಾಹೇತರ ಸಂಬಂಧದ ನಿಲುವನ್ನು ಇಲ್ಲಿ ಸಮೀಕರಿಸಬೇಕಾಗುತ್ತದೆ. 'ಮದುವೆ ಎಂಬ ಸಮಾಜ ರಚನೆಯು ಪಿತೃಪ್ರಧಾನ ವ್ಯವಸ್ಥೆಯು ಆರ್ಥಿಕ ಅಧಿಕಾರವನ್ನು ಚಲಾಯಿಸಲು ರೂಪಿಸಿರುವ ತಂತ್ರ. ಇಲ್ಲಿ ಹೆಣ್ಣುಗಳ ಬಿಟ್ಟಿ ದುಡಿಮೆಯನ್ನು ತನ್ನ ಸಂಪಾದನೆಯ ಬಂಡವಾಳವನ್ನಾಗಿಸುವ ಮದುವೆ ಎಂಬ ವ್ಯವಸ್ಥೆಯ ತಂತ್ರಗಳನ್ನು ವಿವರಿಸಲಾಗಿದೆ. ಸಾಮಾಜಿಕ ಚೌಕಟ್ಟುಗಳ ಮೂಲಕ, ತನ್ನ ಅಧಿಕಾರ ಕ್ಷೇತ್ರವನ್ನು ವಿವಿಧ ಗುಂಪುಗಳಾಗಿ ಪ್ರತ್ಯೇಕಿಸಿಕೊಳ್ಳುವ ಮೂಲಕ ಪುರುಷ ಸ್ತ್ರೀ ಮೇಲೆ ಒಡೆತನವನ್ನು ಸ್ಥಾಪಿಸುತ್ತಾನೆ. ಈ ಒಡೆತನ ಕೇವಲ ದೇಹ ಸಂಬಂಧಿ ಎಂದೇನಲ್ಲ.'[10] ವಿವಾಹ ಪರಿಕಲ್ಪನೆಯ ಈ ವ್ಯವಸ್ಥೆಯು ಪುರುಷಾಧಿಕಾರವನ್ನು, ಪಿತೃಪ್ರಧಾನ ವ್ರವಸ್ಥೆಯನ್ನು ಹೇಳುತ್ತದೆ. ಇಲ್ಲಿಯೂ ಮೀನಾ ಹಾಗೂ ಅವಿನಾಶರ ವ್ಯಕ್ತಿತ್ವಗಳು ಭಿನ್ನವಾಗಿವೆ. ಸ್ವತಃ ಅಕ್ಕನ ಮಗನಾದ ಅವಿನಾಶ ಹುಟ್ಟಿದಾಗಿನಿಂದ ತಾಯಿಯ ಮುಖ ನೋಡಿರಲಿಲ್ಲ. ಆದರೆ ಅವರೆಲ್ಲರ ಜಾಗದಲ್ಲಿ ಕೇವಲ ಮೀನಾಳನ್ನು ಮಾತ್ರ ಕಂಡಿದ್ದ. ಮೀನಾ ತನ್ನ ತೊಡೆಯ ಮೇಲಿಟ್ಟುಕೊಂಡು ಸಾಕಿ ಬೆಳೆಸಿ ದೊಡ್ಡವನ್ನಾಗಿದ್ದ ಅವಿನಾಶ್ ಈಗ ಮೂರು ವರ್ಷಗಳ ಹಿಂದೆ ಹುಡುಗನಾಗಿದ್ದವನು. ಈಗ ಮೀನಾಳಿಗಿಂತಲೂ ಸರಿಯಾಗಿ ನಾಲ್ಕು ಅಂಗುಲ ಎತ್ತರಕ್ಕೂ ಬೆಳೆದು ನಿಂತ ಗಂಡಾಗಿದ್ದಾನೆ. ವಿವಾಹದ ಪರಿಕಲ್ಪನೆಗಳಿಗೆ ಈ ಸಂಬಂಧಗಳು ಸಮಂಜಸವಾಗಿರುವುದಿಲ್ಲ. ತನ್ನ ಪ್ರತಿರೂಪವನ್ನು ಈ ಭೂಮಿಗೆ

ತರಬೇಕು ಎಂದು ಕೊರಗುವ ಹೆಣ್ಣಿಗೆ ಈ ಸಂಬಂಧಗಳಲ್ಲಿ ವಿಶ್ವಾಸ ಇರುವುದಿಲ್ಲ. ಮೀನಾಳಿಗೆ ಜಾಗೃತಾವಸ್ಥೆ, ಸುಪ್ತಾವಸ್ಥೆಗಳು ಕಾಡುತ್ತಿರುತ್ತವೆ. ಜಾಗೃತಾವಸ್ಥೆಯಲ್ಲಿ ಅವಿನಾಶ ಒಬ್ಬ ಮುಗ್ಧ ಬಾಲಕ. ಸುಪ್ತಾವಸ್ಥೆಯಲ್ಲಿ ಅವಿನಾಶ ಗಂಡು. ಮೀನಾ ಹೆಣ್ಣು ಅಷ್ಟೆ. ಮೀನಾ ಹೇಳುವ ಹಾಗೆ 'ಅವಳ ಗರ್ಭ ವಾದರೋ ಗಂಡನ್ನು, ಅವನ ಶಾಶ್ವತ ಅಸ್ತಿತ್ವವನ್ನು ಚೀರಿ ಬೇಡುತ್ತಿದೆ.' ತನ್ನ ಶಾಶ್ವತ ಅಸ್ತಿತ್ವಕ್ಕಾಗಿ ಹಂಬಲಿಸುತ್ತಿರುವ ಹೆಣ್ಣು ವಿವಾಹೇತರ ಸಂಬಂಧಕ್ಕೆ ಬಲಿಯಾಗುತ್ತಾಳೆ. ತಾಯಿಯ ಜಾಗದಲ್ಲಿ ನೋಡಿದ ಮೀನಾಳನ್ನು ಆ ಗಂಡು ಅವಳ ಅವಶ್ಯಕತೆಯನ್ನು ಪೂರೈಸುವ ತನ್ನ ವಯಸ್ಸಿಗಿಂತ ದೊಡ್ಡ ವನಾಗುತ್ತಾನೆ. 'ಒಂದು ಹೆಣ್ಣಿನ ಮತ್ತು ಗಂಡಿನ ಬಟ್ಟೆಗಳು ಹಾರಾಡುತ್ತ ಮಂಚದ ಕೆಳಗೆ ಬಿದ್ದು ಬಿಟ್ಟವು ಮತ್ತು ಮಂಚದ ಕಾಲುಗಳ ಹತ್ತಿರ ತಲೆ ತಗ್ಗಿಸಿ ಗುಡ್ಡೆಯ ಹಾಗೆ ಕೂತು ಬಿಟ್ಟವು. ಇದು ಆತ್ಮವು ಆತ್ಮವನ್ನು ಸ್ಪರ್ಶಿಸಿದಂಥ ಶಾಂತ ಕ್ಷಣವಲ್ಲ, ಬದಲಿಗೆ ಒಂದು ಹೆಣ್ಣು ತನ್ನ ಮನಸ್ಸಿನ ಸಂಸ್ಕಾರಗಳ ಮೇಲೆ ಹೆಜ್ಜೆ ಇಟ್ಟು ಅಲಭ್ಯವಾದುದನ್ನು ಹುಡುಕುತ್ತಿರುವಂಥ ಹಾಗೂ ಒಂದು ಗಂಡು ಬಹಳ ಗಾಬರಿಗೊಂಡು ತನ್ನ ವಯಸ್ಸಿಗಿಂತಲೂ ಬಹಳ ದೊಡ್ಡವನಾಗಿಬಿಟ್ಟಂಥ ಪ್ರಳಯದ ಒಂದು ಕ್ಷಣ.'[1] ಎರಡು ಭಿನ್ನ ಮನಸ್ಥಿತಿಗಳ ಮುಖಾ ಮುಖಿಯನ್ನು ಇಲ್ಲಿ ನೋಡಲಾಯಿತು.

ಸಮಾಜದಲ್ಲಿ ಎಂದೂ ಹೆಣ್ಣು ಅಧೀನಳಾಗಿಯೇ ಉಳಿದು ಬಂದಿದ್ದಾಳೆಂಬ ಸಮಸ್ಯೆ ಯನ್ನು, ಈ ಸಮಸ್ಯೆ ಪರಿಹಾರಗೊಳ್ಳಬೇಕೆಂಬ ಚಿಂತನೆಯನ್ನು ಸಮಾಜವಾದಿ ಚಿಂತಕರು ಪ್ರತಿಪಾದಿಸಿದ್ದು ಹತ್ತೊಂಬತ್ತನೆಯ ಶತಮಾನದಲ್ಲಿ. ಅದಕ್ಕೂ ಮುಂಚೆ ಇದು ಒಂದು ಸಮಸ್ಯೆ ಎಂದು ಗುರುತಿಸುವ ಪ್ರಯತ್ನವೂ ನಡೆದಿರಲಿಲ್ಲ. ಎಚ್.ಎಸ್. ಶ್ರೀಮತಿಯವರು ಹೇಳುವ ಹಾಗೆ 'ಈ ಜಗತ್ತಿನಲ್ಲಿ ಸದಾ ಗಂಡನ್ನು ಆಶ್ರಯಿಸಿಯೇ ಬದುಕಬೇಕಾದ ದಾರುಣ ಸ್ಥಿತಿ ಹೆಣ್ಣಿಗೆ ಇದೆ ಎಂಬ ಬಗ್ಗೆ ಈ ಚಿಂತನೆಗಳೇಕೆ ಮೌನವಾಗಿವೆ?'[2] ಅವರ ಪ್ರಶ್ನೆಯು ಸಮಂಜಸವಾಗಿಯೇ ಇದೆ. ಅಮೃತಾರ ಕತೆ 'ರಂಧ್ರಗಳು' ಈ ಸಮಸ್ಯೆಯನ್ನು ಒಳಗೊಳ್ಳುತ್ತದೆ. ಶೀನಾ ಗಂಡನ ಸಾವನ್ನು ಎದುರು ನೋಡುತ್ತಿರುವ ಮಹಿಳೆ. ಅವನ ಹೊರತು ಅವಳಿಗೆ ಜೀವನವೇ ಇಲ್ಲ . ಸಾವು ತನ್ನ ಮನೆಯ ಬಾಗಿಲನ್ನು ತಟ್ಟುತ್ತಿದೆ ಎಂದು ಗೊತ್ತಿದ್ದರೂ ಇನ್ನಷ್ಟು ದಿನಗಳನ್ನು ಬಾಗಿಲು ತೆರೆಯ ದಂತೆ ನೂಕುತ್ತಿದ್ದಾಳೆ. ಗಂಡನ ಹೊರತು ಅವಳಿಗೆ ಬೇರೆ ಲೋಕವೇ ಇಲ್ಲ. 'ವೀರೇಂದ್ರನ ಒಂದು ಸಣ್ಣ ಅಂಶವನ್ನು ತನ್ನ ಗರ್ಭದಲ್ಲೂ ಧರಿಸಬೇಕೆಂದು ಶೀನಾಳ ಮನಸ್ಸು ಆಶಿಸುತ್ತಿತ್ತು. ಆದರೆ ಈಗಂತೂ ತೀರಾ ತಡವಾಗಿ ಬಿಟ್ಟಿತ್ತು. ಈಗಂತೂ ವೀರೇಂದ್ರ ಮದುವೆ ಆಗದೇ ಇದ್ದಿದ್ದರೆ ತುಂಬಾ ಚೆನ್ನಾಗಿರುತ್ತಿತ್ತು ಎಂದು ಡಾಕ್ಟರ್ ಹೇಳಿಬಿಟ್ಟಿದ್ದರು. ಇಂಥ ಹೃದ್ರೋಗಿಗೆ ಶರೀರ ಸ್ವಲ್ಪ ಉದ್ರಿಕ್ತಗೊಂಡರೂ ಅದೇ ಮೃತ್ಯುವಿನ ಅಘಾತವಾಗಿ ಬಿಡಬಹುದು. ಒಂದು ವೇಳೆ ಗೊತ್ತಾಗಿದ್ದರೆ ಎಂದು ಶೀನಾಳ ಮನಸ್ಸಿನಲ್ಲಿ ಆಸೆ ಆಗುತ್ತಿತ್ತು. ಆದರೆ ಈಗ ಎಂಥ ಆಸೆಯಾದರೂ ಕಳೆದುಕೊಳ್ಳಲು ಅರ್ಹವಾದ ಗಳಿಗೆ ಇರಲಿಲ್ಲ. ಈಗೇನಿದ್ದರೂ ವೀರೇಂದ್ರನ ಮೊಗದ

ಕಡೆ ನೋಡುತ್ತಿರುವುದಷ್ಟೇ ಆಗುತ್ತಿತ್ತು. ಶೀನಾ ಎಚ್ಚೆತ್ತಿರುವ ವೀರೇಂದ್ರನನ್ನು ನಿಟ್ಟಿಸಿ ನೋಡುವುದಷ್ಟೇ ಅಲ್ಲದೇ ನಿದ್ರಿಸುತ್ತಿರುವ ವೀರೇಂದ್ರನನ್ನೂ ನಿಟ್ಟಿಸಿ ನೋಡುತ್ತಿದ್ದಳು.’[೮] ಇಲ್ಲಿಯೂ ಸಹ ಶೀನಾ ಹಾಗು ವೀರೇಂದ್ರರ ಪಾತ್ರಗಳಲ್ಲಿ ಭಿನ್ನತೆಯಿರುವುದನ್ನು ಗುರುತಿಸಬಹುದಾಗಿದೆ. ಆಗಲೇ ನೋಡಿದ ರಶೀದ – ಹಮೀದಾ ಹಾಗೂ ಮೀನಾ – ಅವಿನಾಶನ ಪಾತ್ರಗಳಂತೆ ಅಲ್ಲದಿದ್ದರೂ ಸಾಮಾನ್ಯ ಗಂಡ ಹೆಂಡತಿಗೆ ಇರಬೇಕಾದ ಸಮಾನ ಮನಸ್ಥಿತಿಯಲ್ಲಿ ಇಬ್ಬರೂ ಬದುಕನ್ನು ಸಾಗಿಸುತ್ತಿದ್ದಾರೆ. ವಿಭಿನ್ನ ಪಾತ್ರಗಳ, ವಿಭಿನ್ನ ಮನಸ್ಥಿತಿಯ, ವಿಭಿನ್ನ ವ್ಯಕ್ತಿಗಳು ಜೊತೆಗೂಡಿ ಇರಬೇಕಾದ ಸಂಗತಿಗಳಲ್ಲಿನ ಬಿರುಕುಗಳು, ಸಂತೋಷ ಸಂಭ್ರಮಗಳು ಇಲ್ಲಿ ಗೋಚರಿಸುತ್ತವೆ.

ಸ್ತ್ರೀಯರ ನಡುವಿನ ಲೈಂಗಿಕ, ಲೈಂಗಿಕೇತರ ಸಂಬಂಧಗಳ ಬಲದಿಂದ ಸ್ವಂತವಾದ, ಸ್ವತಂತ್ರವಾದ ಬದುಕನ್ನು ಬಾಳುವ ಜವಾಬ್ದಾರಿಯನ್ನು ಹೊತ್ತಿರುತ್ತಾರೆ ಎಂದು ಹೇಳುವ ಲೆಸ್ಬಿಯನ್ ಸ್ತ್ರೀವಾದವನ್ನು ಹಮೀದಾ – ರಶೀದಾ, ಮೀನಾ – ಅವಿನಾಶರ ಪಾತ್ರಗಳಿಂದ ತಿಳಿಯಬಹುದಾಗಿದೆ. ಹಮೀದಾ ಹಾಗೂ ರಶೀದರ ವಿವಾಹ ಸಂಬಂಧಗಳಲ್ಲಿ, ಮೀನಾ ಹಾಗೂ ಅವಿನಾಶರ ವಿವಾಹೇತರ ಸಂಬಂಧಗಳಲ್ಲಿ ಮುಕ್ತತೆ ಇದೆ.

ಟಿಪ್ಪಣಿಗಳು

೧ ಆರ್. ಇಂದಿರಾ, ಸ್ತ್ರೀವಾದ ದಿಕ್ಸೂಚಿ, ಸಮತಾ ಅಧ್ಯಯನ ಕೇಂದ್ರ, ೧೯೯೯, ಪುಟ : ೩೨

೨ ಅದೇ : ಪುಟ : ೮

೩ ಎಚ್.ಎಸ್. ಶ್ರಿಮತಿ, ಚಹರೆ, ಇಳಾ ಪ್ರಕಾಶನ, ಪುಟ : ೩೨

೪ ಅಮೃತಾ ಪ್ರೀತಂ, ಪಿಂಜರ್, ಅನು – ಎಲ್.ಸಿ. ಸುಮಿತ್ರಾ, ಅಂಕಿತ ಪ್ರಕಾಶನ, ೨೦೦೬, ಪುಟ : ೩೭

೫ ಎಚ್.ಎಸ್. ಶ್ರೀಮತಿ, ಚಹರೆ, ಇಳಾ ಪ್ರಕಾಶನ, ಪುಟ : ೩೬

೬ ಅಮೃತಾ ಪ್ರೀತಂ, ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಅನು – ಡಾ. ಆರ್. ಲಕ್ಷ್ಮೀನಾರಾಯಣ, ಭಾವಯಿತ್ರಿ, ಪ್ರಕಾಶನ, ೨೦೧೧, ಪುಟ : ೧೪, ೧೫

೭ ಎಚ್.ಎಸ್. ಶ್ರೀಮತಿ, ಚಹರೆ, ಇಳಾ ಪ್ರಕಾಶನ, ಪುಟ : ೯೧

೮ ಅಮೃತಾ ಪ್ರೀತಂ, ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಅನು – ಡಾ. ಆರ್. ಲಕ್ಷ್ಮೀ ನಾರಾಯಣ, ಭಾವಯಿತ್ರಿ ಪ್ರಕಾಶನ, ೨೦೧೧, ಪುಟ ; ೮೭

ಉ) ಪ್ರೀತಿಯನ್ನು ಹುಡುಕುತ್ತಾ

ಒಮ್ಮೆ ಸಿಕ್ಕಿತ್ತು ಒಂದು ಹನಿ ಪ್ರೀತಿ ಇದರಲ್ಲಿ. ಅದಕ್ಕಾಗಿ ನಾನು ಇಡೀ ಆಯುಷ್ಯದ ಕಹಿಯನ್ನು ಕುಡಿದೆ ಎಂದು ಅಮೃತಾ ಪ್ರೀತಂ ಅಜರ್ ಬೂಜಾನಿನ ಕವಿಗೋಷ್ಠಿಯೊಂದರಲ್ಲಿ ಹೇಳುತ್ತಾರೆ. 'ಪ್ರೀತಿಯೇ ಹಾಗೆ. ಅದು ಒಂದು ಮಧುರ ಅನುಭೂತಿ.' ಅದರ ಹುಡುಕಾಟದಲ್ಲಿ ಸಾವಿರಾರು ಮಂದಿ ಗೆದ್ದಿದ್ದಾರೆ ಹಾಗೂ ಸೋತಿದ್ದಾರೆ. ಪ್ರೀತಿಗಾಗಿ ಪರಿತಪಿಸಿದವರೂ ಇದ್ದಾರೆ. ಪ್ರೀತಿಯನ್ನು ಉಳಿಸಿಕೊಳ್ಳಲಾಗದೆ ನೊಂದವರು, ಬೆಂದವರು ಇದ್ದಾರೆ. ಇಷ್ಟೆಲ್ಲಾ ನಮ್ಮ ಕಣ್ಣ ಮುಂದೆ ಸಾಕ್ಷಿಗಳು ಇರುವಾಗ ಪ್ರೀತಿಗೆ ಅಷ್ಟೊಂದು ಪ್ರಾಮುಖ್ಯತೆ ಇದೆಯೇ? ಎಂದು ಅನಿಸದೇ ಇರಲಾರದು. ಇನ್ನು ಅಮೃತಾ ಪ್ರೀತಂ ಅವರ ಹಲವಾರು ಕಥೆ, ಕಾದಂಬರಿ, ಕವಿತೆಗಳಿಗೆ ಅವರ ಬದುಕಿನಲ್ಲಿ ಅನುಭವಿಸಿದ ಪ್ರೀತಿಯೇ ಸ್ಫೂರ್ತಿ"[1] ಎಂದು ಅವರೇ ಹೇಳುತ್ತಾರೆ. 'ನನಗೆ ಜೀವನ ಒಂದು ಸುದೀರ್ಘ ಯಾತ್ರೆಯ ಹೆಸರು. ಅಕ್ಷರದಿಂದ ಆರಂಭಿಸಿ ಅರ್ಥದವರೆಗಿನ ಯಾತ್ರೆಯ ಹೆಸರು. ಯಾವುದು ವಾಸ್ತವವಾಗಿದೆಯೋ ಅಲ್ಲಿಂದ ಹಿಡಿದು ಯಾವುದು ವಾಸ್ತವವಾಗಬೇಕೋ ಅದರ ಕಲ್ಪನೆ ಮತ್ತು ಅದರಲ್ಲಿಯ ಏಕತೆ ಪಡೆವ ಯಾತ್ರೆಯ ಹೆಸರು. ಅಂತೆಯೇ ಹೇಳಬಯಸುತ್ತೇನೆ. ನನ್ನ ಕತೆಗಳಲ್ಲಿಯ ಎಲ್ಲಾ ಪಾತ್ರಗಳನ್ನು ಬದುಕಿನಿಂದಲೇ ಎತ್ತಿ ಕೊಂಡಿದ್ದೇನೆ. ಆ ಎಲ್ಲ ಪಾತ್ರಗಳು ಯಥಾರ್ತದ ದೂರವನ್ನು ತಲುಪಬಲ್ಲವು' ಎಂದು ತಮ್ಮ ಸೃಜನಶೀಲತೆಗೆ ತಮ್ಮ ಅನುಭವ ವಲಯದ ಜೀವಂತ ವ್ಯಕ್ತಿಗಳೇ ಸ್ಫೂರ್ತಿ ಎಂದು ಬರೆದಿದ್ದಾರೆ ಅಮೃತಾ ಪ್ರೀತಂ ಅವರ ಹಲವಾರು ಕಥೆಗಳಲ್ಲಿ ಪ್ರೀತಿಯನ್ನು ಹುಡುಕುವ ಪಾತ್ರಗಳು ಕಾಣಿಸುತ್ತವೆ. ಗಿಡಮೂಲಿಕೆ ಕಥೆಯಲ್ಲಿನ ಅಂಗೂರಿ, ಮೂರನೇ ಹೆಣ್ಣು ಕತೆಯಲ್ಲಿನ ಮೀನಾ ಒಂದು ನಿಟ್ಟುಸಿರು ಕತೆಯಲ್ಲಿನ ವೀರೋ, ರಂಧ್ರಗಳು ಕತೆಯಲ್ಲಿನ ಶೀನಾ ಹಾಗೂ ಮಿಸೆಸ್ ಕಪೂರ್, ಜನವರಿ ಇಪ್ಪತ್ತೈದು, ಇಪ್ಪತ್ತಾರು ಮತ್ತು ಇಪ್ಪತ್ತೇಳು ಕತೆಯಲ್ಲಿನ ಒಂದು ಹುಡುಗಿ, ಪಿಂಜರ್ ಕಾದಂಬರಿಯಲ್ಲಿನ ಹಮೀದಾ, ತಾರೋ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಪ್ರೀತಿಗಾಗಿ ಹಂಬಲಿಸುವ ಈ ಎಲ್ಲಾ ಪಾತ್ರಗಳ ಚರ್ಚೆಯನ್ನು ಇಲ್ಲಿ ಮಾಡಲಾಗುತ್ತದೆ.

ಮುಗ್ಧ ಹಳ್ಳಿ ಹುಡುಗಿ ಅಂಗೂರಿ ತನ್ನ ವಿಷಮ ದಾಂಪತ್ಯದ ಕಾರಣದಿಂದಾಗಿ ಯಾವುದೇ ಸುಖವನ್ನು ಅನುಭವಿಸಿದವಳಲ್ಲ. ಅತ್ಯಂತ ಸುಂದರಿಯಾದ ಇವಳಿಗೆ ಇನ್ನೊಬ್ಬರನ್ನು ಪ್ರೇಮಿಸುವುದು ಪಾಪದ ಕೆಲಸ ಮಾಡಿದಂತೆ. ಹಳ್ಳಿಯ ಸುಂದರಿಯಾದ ಇವಳನ್ನು ನಿರೂಪಕಿ ತನ್ನದೇ ಪದಗಳಿಂದ ವರ್ಣಿಸುತ್ತಾಳೆ. 'ಗಾಢವಾದ ಶ್ಯಾಮಲ ವರ್ಣದೊಂದಿಗೆ ಅವಳ ಶರೀರದ ಮಾಂಶ ಹೆಣೆದುಕೊಂಡು ಬಿಟ್ಟಿತು. ಹೆಣ್ಣಿನ ಶರೀರವೆಂದರೆ ನಾದಿದ ಹಿಟ್ಟಿನಂತೆ ಎಂದು ಹೇಳುತ್ತಾರೆ. ಕೆಲ ಹೆಂಗಸರು ನಾದಿದ್ದು ಕಡಿಮೆಯಾದ ಹಿಟ್ಟಿನಂತೆ. ಇನ್ನು ಕೆಲವರು ಅತಿಯಾಗಿ ನಾದಿದ ಹಿಟ್ಟಿನಂತೆ ಇರುತ್ತಾರೆ. ಅಂಗೂರಿಯ

ಮುಖ, ಕೈಕಾಲುಗಳು ತುಂಬಿದ ವಕ್ಷಸ್ಥಲ ಇವನ್ನೆಲ್ಲ ನೋಡುತ್ತಲೇ ಇದ್ದೆ. ಅವೆಲ್ಲವು ಹದವಾಗಿ ನಾದಿದ ಮೈದಾ ಹಿಟ್ಟಿನಂತಿದ್ದವು. ಅವಳ ಗಂಡ ಪ್ರಭಾತಿ ಇಂಥ ಹದವಾದ ಹಿಟ್ಟನ್ನು ಬೇಯಿಸಿಕೊಂಡು ಸವಿಯುವ ಅಧಿಕಾರ ವಿಲ್ಲದವನೆಂದು, ಪ್ರಭಾತಿ ಏನಿದ್ದರೂ ಹದವಾಗಿ ನಾದಿದ ಹಿಟ್ಟಿನಂತಿರುವ ಅಂಗೂರಿಯನ್ನು ಭೋಗಿಸುವವನಲ್ಲವೆಂದು ಅನಿಸಿತು.'[2] ಈ ರೀತಿಯ ವಿಷಮ ದಾಂಪತ್ಯದಲ್ಲಿ ಅಂಗೂರಿ ರಾಮ್ ತಾರಾನ ಪ್ರೇಮದಲ್ಲಿ ಬೀಳುತ್ತಾಳೆ. ಪ್ರೀತಿಸುವುದು ತಪ್ಪು ಎಂಬ ಸಂಪ್ರದಾಯದ ನಂಬಿಕೆಯುಳ್ಳ ಅಂಗೂರಿಯು ಸಹ ಪ್ರೀತಿಯ ಪಾಶದಲ್ಲಿ ಸಿಲುಕುತ್ತಾಳೆ. ವಿಷಮ ದಾಂಪತ್ಯದಲ್ಲಿ ಸಿಲುಕಿದ ಅಂಗೂರಿ ಪ್ರೀತಿಯನ್ನು ಇನ್ನೆಲ್ಲೋ ಹುಡುಕುವ ಪಾತ್ರವಾಗಿ ಕಾಣಿಸುತ್ತಾಳೆ.

ಮೂರನೇ ಹೆಣ್ಣು ಕತೆಯಲ್ಲಿ ವಿಧವೆಯಾದ ಮೀನಾಳು ಸಹ ಪ್ರೀತಿಗಾಗಿ ಹಂಬಲಿಸುವ ಪಾತ್ರವಾಗಿ ಕಾಣಿಸುತ್ತಾಳೆ. ಮೀನಾ ಕತ್ತಲೆಯ ಮೋಡಿ, ಬೆಳಕಿನ ಮೋಡಿಯಲ್ಲಿ ಬೇಯುತ್ತಿದ್ದಳು. ಕತ್ತಲೆಯ ಮೋಡಿಯಲ್ಲಿ ತನಗಿಂತ ನಾಲ್ಕು ಅಂಗುಲ ಎತ್ತರಕ್ಕೆ ಬೆಳದು ನಿಂತಿದ್ದ ಅಕ್ಕನ ಮಗ ಅವಿನಾಶ ತನ್ನ ಗಂಡ ಚೆಲುವ ಯೋಧನ ಹಾಗೆ ಕಾಣಿಸುತ್ತಿದ್ದರೆ, ಬೆಳಕಿನ ಮೋಡಿಯಲ್ಲಿ ಅದೇ ಅವಿನಾಶ, ಚಿಕ್ಕಮ್ಮನ ಹಾಗೆ ಮಡಿಲಿನಲ್ಲಿಟ್ಟುಕೊಂಡು ತಾನು ಉಣಬಡಿಸುತ್ತಿದ್ದ ಎರಡೂವರೆ ಮೂರು ತಿಂಗಳಿನ ಮಗುವಿನ ಹಾಗೆ ಕಾಣಿಸುತ್ತಿದ್ದ. ಬೆಳಕಿನ ಮೋಡಿಯಲ್ಲಿ ಚಿಕ್ಕಮ್ಮನ ಹಾಗೆ ಮಡಿಲಲ್ಲಿಟ್ಟುಕೊಂಡ ತನ್ನ ಜಾಗೃತವಾಸ್ಥೆಯಲ್ಲಿ ಅವಿನಾಶನ ಚಹರೆ, ಮುಗ್ಧ ಬಾಲಕನ ನೆನಪು ತಂದರೆ, ಅವಳ ಸುಪ್ತಾವಸ್ಥೆಯಲ್ಲಿ ಅವನು ಒಬ್ಬ ಗಂಡು ಮತ್ತು ತಾನು ಒಬ್ಬ ಹೆಣ್ಣಾಗಿ, ಆ ಹೆಣ್ಣಿನ ಗರ್ಭವಾದರೋ ಗಂಡನ್ನು, ಅವನ ಶಾಶ್ವತ ಅಸ್ತಿತ್ವವನ್ನು ಚೀಲಿ ಬೇಡುತ್ತಿವೆ. ಬೆಳಕು ಕತ್ತಲೆಗಳು ಒಂದರೊಳಗೆ ಒಂದು ಮಿಳಿತವಾಗುತ್ತಿದ್ದಂತೆ ಮೀನಾಳ ಎರಡು ಮನಸ್ಸಿನ ಎರಡೂ ಅವಸ್ಥೆಗಳೂ ಒಂದು ಇನ್ನೊಂದರಲ್ಲಿ ಸೇರಿ ಹೋದವು. 'ಅವಳ ಅಂದರೆ ಒಂದು ಹೆಣ್ಣಿನ ಎರಡೂ ಬಾಹುಗಳು ಮುಂದಕ್ಕೆ ಚಾಚಿ ಒಬ್ಬ ಗಂಡಿನ ಎರಡೂ ಬಾಹುಗಳನ್ನು ಹಿಡಿದುಕೊಂಡು ಬಿಟ್ಟಾಗ ಮಾಂಸಕ್ಕೆ ಮಾಂಸದ ತೀವತ್ರರ ವಾಸನೆ ತಾಕಿತು. ಒಂದು ಹೆಣ್ಣಿನ ಮತ್ತು ಗಂಡಿನ ಬಟ್ಟೆಗಳು ಹಾರಾಡುತ್ತ ಮಂಚದ ಕೆಳಗೆ ಬಿದ್ದು ಬಿಟ್ಟವು ಮತ್ತು ಮಂಚದ ಕಾಲುಗಳ ಹತ್ತಿರ ತಲೆ ತಗ್ಗಿಸಿ ಗುಡ್ಡೆಯ ಹಾಗೆ ಕೂತು ಬಿಟ್ಟವು.'[3] ಈ ಎರಡು ಸಂಬಂಧಗಳ ಮಿಲನ ಸಂಪ್ರದಾಯಸ್ಥ ಮನಸ್ಸುಗಳಿಗೆ ಕಷ್ಟವಾಗಬಹುದು. ಹೆಣ್ಣಿನ ಆ ಅನಿವಾರ್ಯತೆಯನ್ನು ಗಂಡು ನೀಗಿಸುವ ಸಲುವಾಗಿ ತನ್ನ ವಯಸ್ಸಿಗಿಂತಲೂ ಬಹಳ ದೊಡ್ಡವನಾಗಿದ್ದು ಗೋಚರಿಸುತ್ತದೆ. ಪ್ರೀತಿಯನ್ನು ಹುಡುಕುತ್ತಿರುವ ಮೀನಾ ತನ್ನನ್ನು ತನ್ನ ಗಂಡನಂತೆ ಪ್ರೀತಿಸುವ ಹುಡುಗನ ಪ್ರೀತಿಗೆ ಸಿಲುಕುತ್ತಾಳೆ.

'ಒಂದು ನಿಟ್ಟುಸಿರು' ಕತೆಯಲ್ಲಿನ ವೀರೋ ಮುದುಕ ಸರದಾರನಿಂದ ಯಾವ ಪ್ರೀತಿಯನ್ನು ಬಯಸಲು ಸಾಧ್ಯ? ಮುದುಕು ಸರದಾರ ಅವಳ ಯಾವ ಬೇಡಿಕೆಯನ್ನು ಪೂರೈಸಲು ಸಾಧ್ಯ? ಈ

ವಿಷಮ ದಾಂಪತ್ಯದಲ್ಲಿ ವೀರೋ ಒಬ್ಬ ಸುಂದರನಿಗೆ ಮನಸೋಲುತ್ತಾಳೆ. ತವರಿಗೆ ಹೋದ ವೀರೋಳನ್ನು ಊರಿನ ಎಲ್ಲರು ನಿನ್ನ ಗಂಡ ಎಷ್ಟು ಮುದುಕ ಎಂದು ಕೇಳತೊಡಗಿದರು. ಅವರ ಕಾಟದಿಂದ ತಪ್ಪಿಸಿಕೊಳ್ಳಲು ನನ್ನ ಮದುವೆ ಮುದುಕನೊಂದಿಗೆ ನಡೆಯಲಿಲ್ಲ. ನನ್ನ ಸರದಾರನ ಮನೆಯಲ್ಲಿ ಗುಮಾಸ್ತನಾಗಿರುವ ಮದನಸಿಂಹ ಅವನೇ ತನ್ನ ಯಜಮಾನ ಎಂದು ಹೇಳಲು ಶುರು ಮಾಡಿದಳು. ಇಬ್ಬರೂ ಈ ಸುಳ್ಳನೇ ಅಪ್ಪಿಕೊಂಡರು. 'ನಾನು ಐದಾರು ದಿನ ಇಲ್ಲಿದ್ದೆ. ದಿನವೂ ನಗುತ್ತಾ ನಗುತ್ತಾ ಇದ್ದ ಕಾರಣ ನನ್ನ ಮದುವೆ ಅವನ ಜೊತೆನೇ ಆಗಿತ್ತೇ ಹೊರತು, ಬೇರೆ ಇನ್ಯಾರ ಜೊತೆಯಲ್ಲೂ ಅಲ್ಲ ಎಂದೂ ನನಗೂ ಅನ್ನಿಸತೊಡಗಿತು.'[೪] ಪ್ರೀತಿಯನ್ನು ಮದನಸಿಂಹನಲ್ಲಿ ಹುಡುಕುತ್ತಿರುವ ವೀರೋಳಿಗೆ ಅವನೊಂದಿಗೆ ಮದುವೆ ಆಗಿದೆ ಎಂದು ಅನಿಸುತ್ತಿರುತ್ತದೆ. ಮುದುಕ ಸರದಾರ ತನ್ನ ವಂಶೋದ್ಧಾರಕನ ಸಲುವಾಗಿ ವೀರೋಳನ್ನು ಮದುವೆ ಆದದ್ದು. ಆದರೆ ಅದನ್ನು ಕೊಡಲು ಅವನಿಗೆ ಸಾಧ್ಯವಾಗುವುದಿಲ್ಲ. ವೀರೋ ಗಂಡು ಮಗುವಿನ ತಾಯಿಯೂ ಆಗುತ್ತಾಳೆ. ಆದರೆ ಮುದುಕ ಸರದಾರನಿಂದ ಅಲ್ಲ. 'ಸರದಾರನಿಗೇನಾದರೂ ಗೊತ್ತಾಯಿತು ಅಂದರೆ ತನ್ನ ಕೆಲಸ ಹೋಗಿ ಬಿಡುತ್ತೆ ಅಂತ ಅವನಿಗೆ ಹೆದರಿಕೆ. ಅವನ ಕೆಲಸ ಹೋಗೋ ಹಾಗೆ ಮಾಡಿ, ನಾನು ಏನಂತ ಸಂಸಾರಸ್ಥಳಾಗಲಿ? ಅವನು ಎಲ್ಲೇ ಇರಲಿ, ಸಂತೋಷವಾಗಿರಲಿ. ಯೌವನವಂತ ವ್ಯಕ್ತಿ ಹೇಗೆ ಇರುತ್ತಾನೆ ಅಂತ ನಾನು ಒಂದು ಸಲವಂತೂ ನೋಡಿದೆ.'[೫]

ಇಲ್ಲಿಯೂ ವಿವಾಹೇತರ ಸಂಬಂಧಗಳ ಬಗ್ಗೆ ಸಂಪ್ರದಾಯಸ್ಥ ನಂಬಿಕೆಗಳು ತೋರುವ ನಿಲುವು ತಪ್ಪೆಂಬುದು ಸಾಬೀತಾಗುತ್ತದೆ. ಒಂದು ಹೆಣ್ಣಿನ ಆಸೆ ಆಕಾಂಸೆಗಳನ್ನು ತುಂಬಲು ಸಮವಯಸ್ಕನ ಅವಶ್ಯಕತೆ ಇರುತ್ತದೆ. ಇದಕ್ಕೆ ತಡೆಗೋಡೆ ಹಾಕಲು ಯಾರಿಗೂ ಸಾಧ್ಯವಾಗುವುದಿಲ್ಲ. ಹೆಣ್ಣಿನ ಅವಶ್ಯಕತೆ ಗಂಡಿಗೆ, ಗಂಡಿನ ಅವಶ್ಯಕತೆ ಹೆಣ್ಣಿಗೆ ಇದ್ದೇ ಇರುತ್ತದೆ. ಮುದುಕನಿಂದ ಪೂರೈಸಲಾಗದ್ದನ್ನು ವೀರೋ ಮತ್ತೆಲಿಂದಲೋ ಪಡೆಯುತ್ತಾಳೆ. ದಾಂಪತ್ಯದಲ್ಲಿ ದೊರಕದ ಪ್ರೀತಿಯನ್ನು ಇನ್ನೆಲ್ಲಿಯೋ ಹುಡುಕುವ ಪ್ರಯತ್ನ ಮಾಡುತ್ತಾಳೆ. ವೀರೋ ಅದರಲ್ಲಿ ಯಶಸ್ವಿಯೂ ಆಗುತ್ತಾಳೆ.

ರಂಧ್ರಗಳು ಕತೆಯಲ್ಲಿ ಶೀನಾ ಹಾಗೂ ಶ್ರೀಮತಿ ಕಪೂರ್ ಪಾತ್ರಗಳು ಪ್ರೀತಿಗಾಗಿ ಹಂಬಲಿಸುವ ಪಾತ್ರಗಳಾಗಿವೆ. ಶೀನಾ ಹೃದ್ರೋಗಿಯಾದ ಗಂಡನಿಂದ ಯಾವ ಪ್ರೀತಿಯನ್ನು ಬಯಸಲು ಸಾಧ್ಯವಿಲ್ಲ. ಮೃತ್ಯು ತನ್ನ ಗಂಡನಿಗಾಗಿ ಅವಸರ ಮಾಡುತ್ತಿದೆ ಎಂದು ಶೀನಾಗೆ ಗೊತ್ತಿರುತ್ತದೆ. ಅವಳು ಏನೂ ಮಾಡಲು ಸಾಧ್ಯವಿರುವುದಿಲ್ಲ. ಶೀನಾ ಆ ಗಂಡನಿಗೆ ಕೊನೆಗಾಲದ ಎಲ್ಲ ನೆಮ್ಮದಿಯನ್ನು ಕೊಡುತ್ತಿದ್ದಳು. 'ಶೀನಾ ನರ್ಸರಿಯಿಂದ ದಿನವೂ ಒಂದು ಸಣ್ಣ ಗಿಡ ಕೊಂಡು ತಂದು ಬೆಳಿಗ್ಗೆ ವೀರೇಂದ್ರನ ಕೈಗಳಿಂದ ಅದನ್ನು ತೋಟದಲ್ಲಿ ಹಾಕಿಸುತ್ತಿದ್ದಳು.'[೬] ಶೀನಾಳ ಹೃದಯ ಆರೋಗ್ಯವಂತ ಮನುಷ್ಯನನ್ನು

ಬಯಸುತ್ತಿತ್ತು. ಆದರೆ ಆಸೆ ಪಟ್ಟರೂ ಆಸೆ ಈಡೇರದ ಕಾಯಕ ಅವಳದಾಗಿತ್ತು. ಇಂಥ ಹೃದ್ರೋಗಿಗೆ ಶರೀರ ಸ್ವಲ್ಪ ಉದ್ರಿಕ್ತಗೊಂಡರೂ ಅದೇ ಮೃತ್ಯುವಿನ ಆಘಾತವಾಗಿ ಬಿಡಬಹುದು. 'ಒಂದು ವೇಳೆ ಗೊತ್ತಿದ್ದರೆ ಎಂದು ಶೀನಾಳ ಮನಸ್ಸಿನಲ್ಲಿ ಆಸೆ ಆಗುತ್ತಿತ್ತು. ಆದರೆ ಈಗ ಎಂಥ ಆಸೆಯಾದರೂ, ಕಳೆದುಕೊಳ್ಳಲು ಅರ್ಹವಾದ ಗಳಿಗೆ ಇರಲಿಲ್ಲ. ಈಗೇನಿದ್ದರೂ ವೀರೇಂದ್ರನ ಮೊಗದ ಕಡೆ ನೋಡುತ್ತಿರುವದಷ್ಟೇ ಆಗುತ್ತಿತ್ತು. ಶೀನಾ ಎಚ್ಚೆತ್ತಿರುವ ವೀರೇಂದ್ರನನ್ನು ನಿಟ್ಟಿಸಿ ನೋಡುವುದಷ್ಟೆ ಅಲ್ಲದೆ, ನಿದ್ರಿಸುತ್ತಿರುವ ವೀರೇಂದ್ರನನ್ನು ನಿಟ್ಟಿಸಿ ನೋಡುತ್ತಿದ್ದಳು.'[೭] ಶೀನಾ ಹೃದ್ರೋಗಿಯಾದ ಪತಿಯಿಂದ ಯಾವುದೇ ಪ್ರೀತಿಯನ್ನು ಬಯಸಲು ಸಾಧ್ಯವಾಗುತ್ತಿರಲಿಲ್ಲ. ಒಂದು ಕಡೆ ಶೀನಾಳ ಪ್ರೀತಿಯ ಹುಡುಕಾಟ ಇದಾದರೆ ಇನ್ನೊಂದು ಕಡೆ ಶೀನಾಳ ಗೆಳತಿ ಶ್ರೀಮತಿ ಕಪೂರಳು ಸಹ ತನ್ನ ವಿಷಮ ದಾಂಪತ್ಯದಿಂದ ಪ್ರೀತಿಯನ್ನು ಅರಸುತ್ತಿದ್ದಾಳೆ. ಶ್ರೀಮತಿ ಕಪೂರಳ ಗಂಡನಿಗೆ ದಿನವೂ ಜಗಳವಾಡುವುದೇ ಕಾಯಕವಾಗಿರುತ್ತದೆ. ಜಗಳದ ಕಾರಣ ಅವನು ಇನ್ನೊಬ್ಬಳ ಜೊತೆ ಸಂಬಂಧ ಬೆಳೆಸಿ ರುವುದಾಗಿದೆ. ಈ ಇಬ್ಬರೂ ಗೆಳತಿಯರಿಗೂ ಗೊತ್ತಿದೆ ತಮ್ಮ ಜೀವನ ಅಷ್ಟೊಂದು ಸುಖ ವಾಗಿಲ್ಲವೆಂದು. ಆದರೂ ಇವರಲ್ಲಿ ಅಸೂಯೆಯೂ ಇದೆ. ತನಗಿಂತ ಅವಳ ಜೀವನವೇ ಸ್ವಲ್ಪ ವಾಸಿ ಎಂದು. ಇಬ್ಬರು ಹೆಣ್ಣುಗಳ ನಿವೇದನೆ, ಅವರ ದುಃಖ ಹೇಳುವುದು ಅಷ್ಟು ಸುಲಭವಿಲ್ಲ. 'ಈ ಹೆಣ್ಣು ಎಷ್ಟೊಂದು ಅದೃಷ್ಟಶಾಲಿ! ಇವಳ ಗಂಡ ತನ್ನ ಕೊನೆಯ ಉಸಿರಿನವರೆಗೂ ಇವಳ ಪತಿಯೇ ಆಗಿರುತ್ತಾನೆ. ಅವನು ಸತ್ತರೂ ಇವಳ ಪಾಲಿಗೆ ಬದುಕಿಯೇ ಇರುತ್ತಾನೆ. ಈಕೆ ಅವನ ಒಂದೊಂದು ನೆನಪಲ್ಲೂ ಮತ್ತೆ ಬದುಕುತ್ತಾಳೆ. ಅವನು ಹಾಕಿದ ಗಿಡಗಳಲ್ಲಿ ಹೂವು ಮೂಡಿದಾಗ ಇವಳಿಗೆ ಪ್ರತಿ ಎಲೆಯಲ್ಲೂ ಪ್ರತಿಯೊಂದು ಬಣ್ಣದಲ್ಲೂ ತನ್ನ ಪತಿಯ ಸುವಾಸನೆ ತೇಲಿ ಬರುತ್ತದೆ.

ಕಣ್ಣು ತುಂಬ ನೀರು ತುಂಬಿಕೊಂಡ ಶೀನಾ, ಹೋಗುತ್ತಿರುವ ಶ್ರೀಮತಿ ಕಪೂರಳ ಬೆನ್ನಿನ ಕಡೆ ನೋಡುತ್ತ, ನನಗಿಂತಲೂ ಈಕೆಯ ಅದೃಷ್ಟ ತುಂಬ ಚೆನ್ನಾಗಿದೆ. ಈಕೆಯ ಗಂಡ ಮನೆಗೆ ವಾಪಸ್ ಬಂದಾಗ ಅವನೊಂದಿಗೆ ಜಗಳ ಆಡಬಹುದು. ಅವನೆದುರು ಅಳಬಹುದು? ಆದರೆ ನಾನು ಯಾರ ಜೊತೆ ಜಗಳ ಆಡಲಿ? ಯಾರ ಮುಂದೆ ಅಳಲಿ? ಎಂದುಕೊಂಡಳು.'[೮] ಇಬ್ಬರೂ ವಿಷಮ ದಾಂಪತ್ಯದ ನಡುವೆಯೂ ಅರೆಸುತ್ತಿರುವುದು ಪ್ರೀತಿಗಾಗಿ. ಆದರೆ ಅವರ ಪಾಲಿಗೆ ಪ್ರೀತಿ ಕಾಣಿಸದ ಮಾಯಾ ಜಿಂಕೆಯಾಗಿದೆ.

ಜನವರಿ ೨೫, ೨೬, ೨೭ ಕತೆಯಲ್ಲಿ ಪ್ರೀತಿಗಾಗಿ ಪರಿತಪಿಸುವ ಒಂದು ಹುಡುಗಿ ಇದೆ. ಕತೆಯಲ್ಲಿ ಅವಳ ಹೆಸರು ಎಲ್ಲೂ ಗೋಚರವಾಗುವುದಿಲ್ಲ. ಆ ಹುಡುಗಿ ಒಬ್ಬ ಕವಿಯನ್ನು, ಈಗಾಗಲೇ ಮದುವೆಯಾಗಿರುವ ವ್ಯಕ್ತಿಯನ್ನು ಪ್ರೀತಿಸುತ್ತಾಳೆ. ದೆಹಲಿಯಲ್ಲಿ ಕವಿಯ ಗೆಳೆಯನ ಮನೆಯಲ್ಲಿ ಕವಿ

ಸಮ್ಮೇಳನದಲ್ಲಿ ಭಾಗವಹಿಸುವ ಸಲುವಾಗಿ ಬಂದಿರುತ್ತಾರೆ. ಅವರು ಉಳಿದುಕೊಂಡಿರುವ ದಿನಗಳು ಜನವರಿ ೨೫, ೨೬, ೨೭. ಕೆಲವು ದಿನಗಳ ನಂತರ ಕವಿ ತೀರಿಕೊಳ್ಳುತ್ತಾನೆ. ಪ್ರೀತಿ ಇಲ್ಲಿ ವಿಚಿತ್ರವಾಗಿ ಗೋಚರಿಸುತ್ತದೆ. ಅವಳು ಪ್ರತಿ ವರ್ಷವೂ ಈ ಮೂರು ದಿನಗಳಲ್ಲಿ ಪ್ರಜ್ಞೆಯಲ್ಲಿ ನಿಸ್ತೇಜವಾಗಿ, ಜೀವರಹಿತವಾಗಿರುತ್ತಾಳೆ. 'ಮತ್ತೆ ಮುಂದಿನ ಜನವರಿ ಇಪ್ಪತ್ತೈದನೇ ತಾರೀಕು ಬಂದಾಗ ನನ್ನ ಹೆಸರಿಗೆ ಆ ಹುಡುಗಿಯ ಶೋಕಭರಿತ ಪತ್ರ ಬಂದಿತು. ಅದರಲ್ಲಿ ಆಕೆ ಯಾವ ಕೊಠಡಿಯಲ್ಲಿ ಹಿಂದಿನ ವರ್ಷ ಅವರಿಬ್ಬರೂ ಉಳಿದು ಕೊಂಡಿದ್ದರೋ ಆ ಕೊಠಡಿಯನ್ನು ಪ್ರವೇಶಿಸಲು ಬೇರೆ ಯಾರಿಗೂ ನಾನು ಬಿಡಕೂಡದು ಎಂದು ಕೋರಿದ್ದಳು. ಅವಳು ಪತ್ರದೊಂದಿಗೆ ಲಕೋಟೆಯಲ್ಲಿ ಎರಡು ಚೆಂಡು ಹೂವನ್ನು ಕಳಿಸಿ, ನಾನು ಆ ಹೂಗಳನ್ನು ಆ ಕೊಠಡಿಯಲ್ಲಿ ಅವಳ ಪ್ರಣಯ ಶಯ್ಯೆಯಾಗಿದ್ದ ಆ ಮಂಚದ ಮೇಲೆ ಇಟ್ಟುಬಿಡಬೇಕೆಂದು ತಿಳಿಸಿದ್ದಳು. ಅವರಿಬ್ಬರ ಆತ್ಮಗಳು ಮೂರು ದಿನಗಳ ಕಾಲ ಆ ಕೊಠಡಿಯಲ್ಲಿರುತ್ತವೆಂದೂ ಬರೆದಿದ್ದಳು.'[೯] ಈ ರೀತಿಯ ಘಟನೆಗಳು ನಡೆಯಲು ಸಾಧ್ಯವೋ, ಇಲ್ಲವೋ ಗೊತ್ತಿಲ್ಲ. ಮನೋವೈಜ್ಞಾನಿಕ ನೆಲೆಯಲ್ಲಿ ಇದಕ್ಕೆ ಉತ್ತರ ಕಂಡುಕೊಳ್ಳಬೇಕಾಗುತ್ತದೆ. ಹುಡುಗಿಯ ಪ್ರಿಯಕರ, ಕವಿಯ ಗೆಳೆಯನೂ ಆಗಿರುವ ಹುಡುಗಿಯ ಮನೆಯವರು, ಹುಡುಗಿಗೆ ನಿಜ ಜಗತ್ತಿನ ಮನವರಿಕೆ ಮಾಡಿಕೊಡಲು ಪ್ರಯತ್ನ ಪಡುತ್ತಾರೆ. ಹುಡುಗಿಗೆ ಪ್ರೀತಿಯನ್ನು ಬಿಟ್ಟು ಮಿಕ್ಕೆಲ್ಲ ವಿಚಾರಗಳು ಹಿಡಿಸದಾಗಿರುತ್ತದೆ. ಪ್ರೀತಿಯ ವಿಚಾರಗಳು ಕೆಲವು ವೇಳೆ ಸ್ಪಷ್ಟವಾಗಿಯೂ ಕೆಲವು ವೇಳೆ ಗೋಜಲು ಗೋಜಲಾಗಿಯೂ ಕಾಣಿಸುತ್ತದೆ.

'ಒಂದು ದಿನ ಅವಳಿಗೆ ಹೇಳಿದೆ. ನೀನು ಹೇಳುತ್ತಿರುವುದು ಸರಿ. ಪೂರ್ಣ ಮೂರು ದಿನ ಅವನ ಆತ್ಮ ನಿನ್ನ ಆತ್ಮದೊಂದಿಗೆ ನಿನ್ನ ಆತ್ಮ ಅವನ ಆತ್ಮನೊಂದಿಗೆ ಇರುತ್ತದೆ. ಆದರೆ ವರ್ಷದ ಬಾಕಿ ಮುನ್ನೂರ ಅರವತ್ತೆರಡು ದಿನ? ಆ ಮುನ್ನೂರಾ ಅರವತ್ತೆರಡು ದಿನಗಳ ಸಲುವಾಗಿ ಮದುವೆ ಮಾಡಿಕೊಳ್ಳುವ ಬಹಳ ದಿಟ್ಟ ಹೃದಯದ ಹೆಣ್ಣಂತೂ ಅವಳಾಗಿದ್ದಳು. ಯಾರು ವರ್ಷದ ಮುನ್ನೂರಾ ಅರವತ್ತೆರಡು ದಿನಕ್ಕೆ ನನ್ನನ್ನು ಮದುವೆಯಾಗಬಯಸುತ್ತಾನೋ ಅಂಥ ವ್ಯಕ್ತಿಯನ್ನು ನಾನು ಮದುವೆಯಾಗುತ್ತೀನಿ ಅಂತ ಹೇಳಿ ನಮ್ಮ ತಂದೆ ತಾಯಿಗಳನ್ನು ಒಪ್ಪಿಸಿ ಎಂದು ಹೇಳಿದಳು.'[೧೦] ಪ್ರೀತಿಯನ್ನು ಹೇಗೆಲ್ಲಾ ಹುಡುಕುತ್ತಾರೆ ಎಂದು ಇದರಿಂದ ತಿಳಿಯುತ್ತದೆ. ಪ್ರೀತಿಗಾಗಿ ತನ್ನ ಜೀವವನ್ನೇ ತೇಯುತ್ತಿರುವ ಪ್ರೀತಿ ಬಿಟ್ಟು ಅದರ ಹೊರತಾಗಿ ಏನೂ ಕಾಣದ ಪಾತ್ರವಾಗಿ ಈ ಹುಡುಗಿಯ ಪಾತ್ರ ಗೋಚರಿಸುತ್ತದೆ.

ಇನ್ನು ಪಿಂಜರ್ ಕಾದಂಬರಿಯಲ್ಲಿ ಹಮೀದಾ ಹಾಗೂ ತಾರೋಳ ಪಾತ್ರಗಳು ಪ್ರೀತಿಗಾಗಿ ಹಂಬಲಿಸುವ ಪಾತ್ರಗಳಾಗಿ ಕಾಣಿಸುತ್ತವೆ. ಹಮೀದಾ ತನಗೆ ಇಷ್ಟವಿಲ್ಲದೆಯೇ ರಶೀದನ ಜೊತೆಯಲ್ಲಿ

ಇರುತ್ತಾಳೆ. ತನ್ನ ಒಪ್ಪಿಗೆ ಇಲ್ಲದೆ ಪುರೋಳನ್ನು ಹಮೀದಾಳಾಗಿ ಮಾಡಿರುತ್ತಾನೆ. ಅವಳು ಹಗಲು ಹಮೀದಾ, ರಾತ್ರಿ ಪುರೋ ಆಗಿರುತ್ತಿದ್ದಳು. ವಾಸ್ತವದಲ್ಲಿ ಅವಳು ಹಮೀದಾಳೂ ಪುರೋನೂ ಆಗಿರಲಿಲ್ಲ. ಅವಳು ಕೇವಲ ಅಸ್ಥಿಪಂಜರವಾಗಿದ್ದಳು. ಇಂತಹ ಹಮೀದಾಳನ್ನು ರಶೀದ ಕೆಲವೇ ವರ್ಷಗಳಲ್ಲಿ ತನ್ನ ಮೇಲೆ ಪ್ರೀತಿ ಹುಟ್ಟುವಂತೆ ಮಾಡುತ್ತಾನೆ. ಇದಕ್ಕೆ ತಾನು ನೋಡಿದ ಅನುಭವಿಸಿದ ಘಟನೆಗಳು ಸಾಕ್ಷಿ ಆಗಿರಬಹುದು. ಅವಳು ತನ್ನ ನೆಮ್ಮದಿಯ ಜೀವನದ ಬಗ್ಗೆ ನಿಟ್ಟುಸಿರು ಬಿಟ್ಟು ತನ್ನ ನೋವನ್ನು ಮರೆಯಲೆತ್ನಿಸುತ್ತಾಳೆ.

ತಾರೋಳ ಕಥೆ ಕೇಳಿದ ನಂತರ ಹಮೀದಾಗೆ ತನ್ನ ಮನೆ, ನೆಮ್ಮದಿಯ ತಾಣ ಎನಿಸಿತು. 'ರಶೀದ ತನ್ನನ್ನು ಅಪಹರಿಸಿ ತಂದು ಅನ್ಯಾಯ ಮಾಡಿದ ಎಂಬುದನ್ನು ಹಮೀದ ಮರೆಯಲೆತ್ನಿಸಿದಳು. ಅವನನ್ನು ತೀವ್ರವಾಗಿ ಪ್ರೀತಿಸಬಯಸಿದಳು. ಅವನು ಅವಳ ಗಂಡ, ಅವಳ ಮಗನ ತಂದೆ. ಇದು ಮಾತ್ರ ನಿಜ ಎಂಬುದನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಉಳಿದದ್ದೆಲ್ಲ ಸುಳ್ಳು ಎಂದು ಯೋಚಿಸಿದಳು.'[೧೧] ಇಷ್ಟಲ್ಲದೇ ದೇಶ ವಿಭಜನೆಯ ಸಂದರ್ಭದಲ್ಲಿ ತನ್ನ ತವರಿನ ಎಲ್ಲರೂ ಇಂಡಿಯಾಗೆ ಮರಳಿ ವಾಪಸ್ಸು ಹೋಗುವಾಗ ಪುರೋಳ ತಮ್ಮ ಇಂಡಿಯಾಗೆ ಮರಳುವ ಕೊನೆಯ ಅವಕಾಶವನ್ನು ಕೊಡುತ್ತಾನೆ. ಆದರೆ ಅವಳು ಹೋಗಲು ತಯಾರಿ ರುವುದಿಲ್ಲ. ಪ್ರೇಮದ ಅಲೆಯಲಿ ತೇಲುತ್ತಿರುವುದರಿಂದ ಮರಳಿ ಇಂಡಿಯಾಗೆ ಹೋಗುವ ಪ್ರಯತ್ನವನ್ನು ಅವಳು ಮಾಡುವುದಿಲ್ಲ. 'ಲಾಜೋ ತರಹ ಇನ್ನೂ ನೂರಾರು ಹೆಂಗಸರಂತೆ ಅವಳೂ ಹೋಗಬಹುದಾಗಿತ್ತು. ಆದರೆ ಅವಳು ತನ್ನ ತಮ್ಮನ ತೋಳುಗಳಿಂದ ಬಿಡಿಸಿಕೊಂಡು, ರಶೀದ ನಿಂತಲ್ಲಿಗೆ ತಿರುಗಿ ಬಂದಳು. ತನ್ನ ಮಗನನ್ನು ಮಡಿಲಿಗೆಳೆದು ತಬ್ಬಿಕೊಂಡಳು. ಲಾಜೋ ಮನೆಗೆ ಮರಳಿ ಬಂದಾಗ ಪುರೋ ಕೂಡ ಮರಳಿ ಮನೆಗೆ ಬಂದಿದ್ದಾಳೆಂದೇ ಭಾವಿಸಿ ನನ್ನ ಮನೆ ಈಗ ಪಾಕಿಸ್ತಾನದಲ್ಲಿ'[೧೨] ಎಂದು ತಮ್ಮನನ್ನು ಉದ್ದೇಶಿಸಿ ಹೇಳಿದಳು. ಕೊನೆಗೂ ಅವಳು ರಶೀದನಲ್ಲಿ ಪ್ರೀತಿಯನ್ನು ಬಯಸುತ್ತಾಳೆ. ತನಗೆ ಏನೇ ಅನ್ಯಾಯ ಆದರೂ ಅದನ್ನು ಮರೆಯಲೆತ್ನಿಸುತ್ತಾಳೆ. ರಶೀದನ ಹೊರತಾಗಿ ಅವಳಿಗೆ ಜೀವನ ಶೂನ್ಯವಾಗಿ ಗೋಚರಿಸುತ್ತದೆ.

ತಾರೋಳದ್ದು ಸಹ ಪ್ರೀತಿಗಾಗಿ ಹಂಬಲಿಸುವ ಪಾತ್ರವಾಗಿ ನಮಗೆ ಕಾಣಿಸುತ್ತದೆ. ತಾರೋಳದ್ದು ಸಹ ವಿಷಮ ದಾಂಪತ್ಯ. ಗಂಡ ಇನ್ನೊಬ್ಬಳ ಜೊತೆ ಸಂಬಂಧ ಬೆಳೆಸಿರುತ್ತಾನೆ. ತಾರೋಳಿಗೆ ಮೂರ್ಛೆ ರೋಗವಿತ್ತು. ಪ್ರತಿ ಸಲವು ಅವಳು ತವರಿನಿಂದ ಗಂಡನ ಮನೆಗೆ ಮರಳಿ ಹೋಗಬೇಕಾದ ಸಂದರ್ಭದಲ್ಲಿ ಮೂರ್ಛೆರೋಗ ಅವಳನ್ನು ಬಾಧಿಸುತ್ತಿರುತ್ತದೆ.

ಪ್ರತಿ ಸಲ ತವರಿಗೆ ಬರುವಾಗ ಅವಳು ಮೊದಲಿದ್ದುದಕ್ಕಿಂತ ಕೃಶಳಾಗಿರುತ್ತಿದ್ದಳು. ಯಾರೂ ಅವಳ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡುವುದಿಲ್ಲ. ತಾರೋ ತಾನು ಗಂಡನ ಜೊತೆ ಯಾವ ರೀತಿ ಎರಡು ವರ್ಷ ಬದುಕಿದಳು ಎನ್ನುವುದರ ಬಗ್ಗೆ ಹೇಳುತ್ತಾಳೆ. ಇದು ಅತ್ಯಂತ ಹೃದ್ರಾವಕವಾಗಿದ್ದರೂ ಹಲವಾರು ಹೆಣ್ಣು ಮಕ್ಕಳು ತಾರೋಳಂತೆಯೇ ಬದುಕಿನ ಬಂಡಿಯನ್ನು ನೂಕುತ್ತಿದ್ದಾರೆ. 'ಪೂರ್ತಿ ಎರಡು ವರ್ಷ ನನ್ನ ದೇಹವನ್ನು ಒಂದು ಹಿಡಿ ಅನ್ನ ಎರಡು ಜೊತೆ ಬಟ್ಟೆಗಾಗಿ ಮಾರಿಕೊಂಡೆ. ಒಬ್ಬ ವೇಶ್ಯೆ, ಬೀದಿ ಸೂಳೆಯಂತೆ. ತಾರೋ ಮುಷ್ಟಿ ಬಿಗಿದಳು. ಅವಳ ಕಣ್ಣುಗುಡ್ಡೆಗಳು ಗಿರಿ ಗಿರಿ ತಿರುಗಿ, ದೇಹ ಬಿಲ್ಲಿನಂತೆ ಸೆಟೆದು, ಕೊರಡಿನಂತಾಯಿತು.'[೧೩] ತವರಿನಿಂದಲೂ ಪ್ರೀತಿ ಸಿಗುತ್ತಿಲ್ಲ. ಅದಕ್ಕಾಗಿ ಅವಳು ಇಷ್ಟೊಂದು ಕೃಶಳಾಗಿದ್ದಾಳೆ. ಮಗಳನ್ನು ಗಂಡನಿಗೆ ಒಪ್ಪಿಸಿದ ಮೇಲೆ ತವರಿನ ಜವಾಬ್ದಾರಿ ಮುಗಿಯುತ್ತದಂತೆ. ಹಾಗಾಗಿ ತಾರೋಳ ನೋವನ್ನು ಅರ್ಥ ಮಾಡಿಕೊಳ್ಳಲು ಯಾರು ಇಲ್ಲ. ಅವಳ ಮೊರೆಯನ್ನು ದೇವರು ಕೇಳುತ್ತಿಲ್ಲ. 'ನನ್ನ ಬಾಯಿ ಮಾತ್ರ ಹೊಲೆಯಲ್ಪಟ್ಟಿದೆ. ನನ್ನ ಕಾಲುಗಳಿಗೆ ಮಾತ್ರ ಸಂಕೋಲೆ ತೊಡಿಸಿದ್ದಾರೆ. ಈ ಪ್ರಪಂಚದಲ್ಲಿ ನ್ಯಾಯವೆಂಬುದೇ ಇಲ್ಲ. ಯಾವ ದೇವರೂ ಇಲ್ಲ. ಅವನು ಮನಸ್ಸಿಗೆ ಬಂದದ್ದನ್ನು ಮಾಡ್ತಾನೆ. ಅವನನ್ನು ತಡೆಯಲು ಯಾವ ದೇವರೂ ಇಲ್ಲ. ದೇವರ ಸಂಕೋಲೆ ನನ್ನ ಕಾಲಿಗೆ ಮಾತ್ರ ಇರುವುದು'[೧೪] ತಾರೋಳಿಗೆ ಮತ್ತೆ ಮೂರ್ಛೆ ಬಂದಿತು. ಪ್ರೀತಿಗಾಗಿ ಹಂಬಲಿಸುವ ತಾರೋ ತನಗೆ ತಾನೇ ಯೋಚಿಸಿ, ಕೃಶಳಾಗಿ ಈ ರೋಗವನ್ನು ತಂದುಕೊಂಡಂತೆ ಇದೆ. ಎಲ್ಲಿಂದಲೂ ಅವಳಿಗೆ ಪ್ರೀತಿ ದೊರೆಯುತ್ತಿಲ್ಲ. ತವರಿನಲ್ಲಾದರೂ ಅವಳಿಗೆ ಪ್ರೀತಿ ದೊರೆತಿದ್ದರೆ ಈ ರೋಗ ವಾಸಿಯಾಗುತಿತ್ತೋ ಏನೋ. ಪ್ರೀತಿಗಾಗಿ ತನ್ನ ಜೀವನವನ್ನು ಕಳೆದುಕೊಳ್ಳಲು ಹೊರಟಿದ್ದಾಳೆ ತಾರೋ.

ಒಟ್ಟಾರೆಯಾಗಿ ಪ್ರೀತಿಗಾಗಿ ಪರತಪಿಸುವ, ಪ್ರೀತಿಯನ್ನು ಹುಡುಕುವ, ಪ್ರೀತಿಗಾಗಿ ಹೋರಾಡುವ ಪಾತ್ರಗಳಾಗಿ ಮೀನಾ, ವೀರೋ, ಶೀನಾ, ಮಿಸೆಸ್ ಕಪೂರ್, ಹಮೀದಾ, ತಾರೋ, ಜನವರಿ ೨೫, ೨೬, ೨೭ ಕಥೆಯಲ್ಲಿನ ನಿರೂಪಕ ಗೆಳೆಯನ ಪತ್ನಿ ಕಾಣಿಸುತ್ತಾರೆ. ಪ್ರೀತಿಯ ಮಧುರ ಅನುಭೂತಿಯನ್ನು ಪಡೆದವರು ಇದಾರೆ. ಸೋತು ನಿರಾಸೆಯನ್ನು ಅನುಭವಿಸಿದವರು ಇದ್ದಾರೆ. ಇನ್ನು ಪ್ರೀತಿಯನ್ನು ಹುಡುಕುತ್ತಾ ಇರುವವರೂ ಇದ್ದಾರೆ.

ಟಿಪ್ಪಣಿಗಳು

೧ ಅಮೃತಾ ಪ್ರೀತಂ, ಪಿಂಜರ್, ಅನು – ಎಲ್.ಸಿ. ಸುಮಿತ್ರಾ, ಅಂಕಿತ ಪ್ರಕಾಶನ, ೨೦೦೬, ಪುಟ : ೯೦

೨ ಅಮೃತಾ ಪ್ರೀತಂ, ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಅನು – ಡಾ. ಆರ್. ಲಕ್ಷ್ಮೀನಾರಾಯಣ, ಭಾವಯಿತ್ರಿ ಪ್ರಕಾಶನ, ೨೦೧೧, ಪುಟ : ೪

೩ ಅದೇ ಪುಟ : ೧೪, ೧೫

೪ ಅದೇ ಪುಟ : ೨೮

೫ ಅದೇ ಪುಟ : ೨೯

೬ ಅದೇ ಪುಟ : ೮೭

೭ ಅದೇ ಪುಟ : ೮೭

೮ ಅದೇ ಪುಟ : ೯೦

೯ ಅದೇ ಪುಟ : ೧೧೦

೧೦ ಅದೇ ಪುಟ : ೧೧೨

೧೧ ಅಮೃತಾ ಪ್ರೀತಂ, ಪಿಂಜರ್, ಅನು – ಎಲ್.ಸಿ. ಸುಮಿತ್ರಾ, ಅಂಕಿತ ಪ್ರಕಾಶನ, ೨೦೦೬, ಪುಟ : ೩೭

೧೨ ಅದೇ ಪುಟ : ೮೧

೧೩ ಅದೇ ಪುಟ : ೩೫

೧೪ ಅದೇ ಪುಟ : ೩೬

ಊ) ದೇಶ ವಿಭಜನೆ ಸಂದರ್ಭ

ದೇಶ ವಿಭಜನೆಯಲ್ಲಿ ಸಾವಿರಾರು ಹಿಂದೂಗಳ, ಮುಸ್ಲಿಮರ ಮಾರಣ ಹೋಮ ನಡೆದಿದೆ. ಸಾವಿರಾರು ಹಿಂದೂ ಹೆಣ್ಣುಗಳು, ಮುಸ್ಲಿಂ ಹೆಣ್ಣುಗಳು ದೌರ್ಜನ್ಯಕ್ಕೆ ಒಳಗಾದರು. ದೇಶ ವಿಭಜನೆಯಲ್ಲಿ ನೊಂದಿದ್ದ ಅಮೃತಾರಿಗೆ ಬರವಣಿಗೆಯ ರೂಪ ಸಿಕ್ಕಿತು. ಅದರ ಸೃಷ್ಟಿಯೇ ಪಿಂಜರ್ ಕಾದಂಬರಿ. ಸಾವಿರಾರು ಹೆಣ್ಣುಗಳು ದೈಹಿಕ, ಮಾನಸಿಕ ಹಿಂಸೆಗಳಿಗೆ, ಅತ್ಯಾಚಾರ, ದೌರ್ಜನ್ಯ, ಶೋಷಣೆಗಳಿಗೆ ಒಳಗಾದರು. ಹಿಂದೂಗಳು ಮುಸ್ಲಿಮರನ್ನು ನಂಬದೇ ಹೋದರು. ಮುಸ್ಲಿಮರು ಹಿಂದೂಗಳಿಗೆ ಭಯ ಪಡಲು ಶುರುಮಾಡಿದರು. ಎರಡೂ ಜನಾಂಗದವರು ಭಯದ ವಾತಾವರಣದಲ್ಲೇ ಬದುಕಿದರು. ಜಾತಿಯ ಭೂತ ಅವರಲ್ಲಿ ಎಷ್ಟು ಮನೆಮಾಡಿತು ಎಂದರೆ ಯಾವ ಜಾತಿಗೆ ಸೇರಿದ್ದಳೋ ಗೊತ್ತಿರದ ಒಬ್ಬ ಹುಚ್ಚಿಯ ಮಗುವನ್ನು ಉದ್ದೇಶಿಸಿ ಸಂಘರ್ಷಗಳು ನಡೆದವು. ಹುಚ್ಚಿಯ ಮಗುವನ್ನು ಹಮೀದಾ ಶ್ರದ್ದೆಯಿಂದ ತನ್ನ ಮಗುವಿನಂತೆ ಸಾಕುತ್ತಿರುತ್ತಾಳೆ. ಅವಳಿಗೆ ಗೊತ್ತಿರುವುದಿಲ್ಲ ಮುಂದೊಂದು ದಿನ ಈ ಘಟನೆಯು ಮತೀಯ ಸಂಘರ್ಷಗಳಿಗೆ ಕಾರಣವಾಗುತ್ತದೆಂದು. ಹಮೀದಾಳ ಗಂಡ ರಶೀದನು ಈ ಮಗುವನ್ನು ಸಾಕಲು ಒಪ್ಪಿರುತ್ತಾನೆ. ಆದರೆ ಸುತ್ತಲಿನ ದ್ವೇಷದ ಕಣ್ಣುಗಳು ಅವನನ್ನು ಸುತ್ತುತ್ತಿರುವುದು ಅವನಿಗೆ ಗೊತ್ತಿರುತ್ತದೆ. ಈ ವಾತಾವರಣದಲ್ಲಿ ಕಲ್ಲಿದ್ದಲಿನ ಹೊಗೆಯಂತೆ ದ್ವೇಷ ದಟ್ಟವಾಗಿತ್ತು. ರಶೀದ ಎದುರಾದಾಗಲೆಲ್ಲಾ ಜನ ಅವನನ್ನು ಸಿಟ್ಟಿನಿಂದ ನೋಡಿದರು. ಅವನು ಅದನ್ನು ಗಮನಿಸಿದ್ದ. ಆದರೆ ಹೆಂಡತಿಗೆ ಹೇಳಿದ ಎಲ್ಲರ ವಿರೋಧವನ್ನು ಕಟ್ಟಿಕೊಂಡು ಆ ಮಗುವನ್ನು ಸಾಕುವುದು ಬೇಡ ಅಂತ.

ರಶೀದ ಮಗುವಿನ ವಿಷಯ ಪ್ರಸ್ತಾಪಿಸಿದಾಗಲೆಲ್ಲಾ ಹಮೀದಾಳ ಹೃದಯ ಕುಗ್ಗಿ ಹೋಗುತ್ತಿತ್ತು. ಎಲುಬಿನ ಗೂಡಾಗಿದ್ದ ಮಗುವಿಗೆ ಎದೆ ಹಾಲು ಕುಡಿಸಿ ಅವಳು ಪೋಷಿಸಿದ್ದಳು. ಊರಿನ ಜನಗಳಿಗೆ ಈ ಸುದ್ದಿ ಸಹಿಸದಾಯಿತು. 'ಒಂದು ಚಿಕ್ಕ ಬೆರಣಿ ಚೂರಿಗೆ ತಾಗಿದ ಬೆಂಕಿಯಿಂದ ದೊಡ್ಡ ಬಣವೆ ಹತ್ತಿಕೊಂಡು ಉರಿಯುವಂತೆ ಒಂದು ಸುದ್ದಿ ಹಳ್ಳಿಯಲ್ಲಿ ಹಬ್ಬಿತು. ಆ ಹುಚ್ಚಿ ಹಿಂದೂ ಆಗಿದ್ದಳು. ಅವಳ ಮಗುವನ್ನು ಮುಸ್ಲಿಮರು ಅಪಹರಿಸಿದ್ದಾರೆ. ಹಿಂದೂಗಳ ಎದುರಿಗೆ ಹಿಂದು ಮಗುವೊಂದು ಮುಸ್ಲಿಂ ಆಗಿ ಪರಿವರ್ತನೆ ಆಗುತ್ತಿದೆ.'[1] ಹಿಂದೂ ಮುಖಂಡರು ಸಭೆ ಸೇರಿದರು. ಆ ಹುಚ್ಚಿಯ ಕೈಮೇಲೆ ಓಂ ಎಂದು ಹಚ್ಚೆ ಹಾಕಿದ್ದನ್ನು ನೋಡಿದ್ದರಿಂದ ಆಕೆ ಹಿಂದೂ ಎಂದು ತೀರ್ಮಾನಿಸಿದರು. ಈಗ ಹಿಂದೂ ಮಗುವೊಂದು ಮುಸ್ಲಿಂ ಆಗಿ ಪರಿವರ್ತನೆ ಆಗುತ್ತಿದೆ ಎಂದು ಅವರ ವಾದ. ಹಿಂದೂ ಮುಖಂಡರ ಪ್ರಕಾರ ಇದು ಧರ್ಮದ ಪ್ರಶ್ನೆಯಾಗಿದೆ. ಇದನ್ನು ಹೀಗೆ ಬಿಟ್ಟರೆ ನಾಳೆ ಎಲ್ಲಾ ಹಿಂದೂಗಳು ಮುಸ್ಲಿಮರಾಗಬೇಕಾಗುತ್ತದೆ ಎಂಬುದು ಅವರ ಭಯವಾಗಿದೆ.

ಎರಡು ಧರ್ಮಗಳ ಪ್ರಶ್ನೆ? ಧರ್ಮವು ತುಂಬಾ ಆಳವಾಗಿ ಬೇರು ಬಿಟ್ಟಿರುವುದರಿಂದ ಕದಲಿಸುವುದಕ್ಕೂ ಸಾದ್ಯವಿಲ್ಲ. ಆ ಹುಚ್ಚಿ ಹಿಂದೂಗಳ ಮನೆಯ ಅನ್ನ ತಿಂದಂತೆ ಮುಸ್ಲಿಮರ ಮನೆಯ ಊಟವನ್ನು ತಿನ್ನುತ್ತಿದ್ದಳು. ಅವಳಿಗೆ ಕಾಡದ ಜಾತಿಯು ಅವಳ ಸಾವಿನ ನಂತರ ಊರಿನ ಜನಕ್ಕೆ ಧರ್ಮ ಜಿಜ್ಞಾಸೆಯ ಪ್ರಶ್ನೆಯಾಗಿದೆ. ಮುಂದೆ ಜಾತಿಯ ಪ್ರಶ್ನೆಯು ಮುಂದಕ್ಕೆ ಹೋಗಿ ಹಮೀದಾ ಹಾಗೂ ಮಗುವನ್ನು ದೂರ ಮಾಡಿತು. ಮಗು ಹಾಲು ಕುಡಿಯದೆ ಅಪರಿಚಿತರ ಮಧ್ಯೆ ಸಾವಿನ ಹಂತ ತಲುಪಿತು.

ಆದರೆ ಹಿಂದೂಗಳು ಇದನ್ನು ನೋಡಿಯು ಸುಮ್ಮನಿದ್ದರು. ಜಾತಿ ರಾಜಕಾರಣ ಮಾಡಿ ಮಗುವನ್ನು ಬೇರೆ ಮಾಡಿದರೆ ಹೊರತು ಮಗುವಿನ ನೆನಪು ಅದರ ಮುಸ್ಲಿಂ ಅಮ್ಮನಿಂದ ಬೇರೆ ಮಾಡಲಾಗಲಿಲ್ಲ. ಅದರ ಅಮ್ಮನಿಗೂ ಮಗುವಿನ ಚಿಂತೆಯು ಕಾಡುತ್ತಿದೆ. 'ಹಮೀದಾ ಗೋಡೆಗೆ ತಲೆ ಚಚ್ಚಿಕೊಂಡು ಕಣ್ಣೀರು ಸುರಿಸಿದಳು. ಅವಳ ಎದೆ ಹಾಲಿನಿಂದ ಬಿಗಿದು ನೋಯುತ್ತಿತ್ತು. ಮಗುವನ್ನು ಹಾಲು ಬಿಡಿಸಿ, ಬಿಡಲಾಗಿತ್ತು. ಅವಳ ಹಾಲಿನಿಂದ ಬಿಗಿದು ನೋಯುವ ಎದೆಗೂ, ಹಸಿವಿನಿಂದ ಅಳುವ ಮಗುವಿನ ತುಟಿಗಳಿಗೂ ನಡುವೆ ಆಳವಾದ ಕಂದಕ ಬಾಯ್ದರೆದಿತ್ತು.'[೨] ಈ ಘಟನೆಯು ಹಿಂದೂ ಮುಸ್ಲಿಮರ ಕಿತ್ತಾಟಗಳಿಗೆ ಸಾಕ್ಷಿಯಾಗಿತ್ತು. ಬಿಡಿಸಿದ ಹಳಸಿನ ತೊಳೆಯಂತೆ ಪಂಜಾಬಿನ ಹಿಂದೂ, ಮುಸ್ಲಿಂ, ಸಿಖ್ ಜನರು ಬೇರೆ ಬೇರೆಯಾದರು. 'ರಸ್ತೆಯ ಮೇಲೆ ಧೂಳಿನ ಮೋಡ ಕವಿದಂತೆ ವದಂತಿಗಳು ಹಬ್ಬಲು ಶುರುವಾಯಿತು. ನೂರಾರು ಜನ ಕೊಲ್ಲಲ್ಪಟ್ಟಿದ್ದಾರೆಂಬ ಸುದ್ದಿಯಾಯಿತು. ಮನೆಗಳು ಸಾಲು ಸಾಲಾಗಿ ಹೊತ್ತಿ ಉರಿದವು. ನೆರೆಹೊರೆಯವರು ಪರಸ್ಪರ ಕತ್ತು ಕೊಯ್ದುಕೊಂಡರು ಎಂದು ಊರಿನ ಜನ ಮಾತಾಡಲು ಶುರುಮಾಡಿದರು. ಯಾರ ಆಸ್ತಿಗಾಗಲಿ, ಜೀವಕ್ಕಾಲಿ ಅಲ್ಲಿ ಭದ್ರತೆಯಿರಲಿಲ್ಲ. ಗಂಡಸರು ಉಕ್ಕಿನ ಕತ್ತಿಗಳನ್ನು, ಆಯುಧಗಳನ್ನು ಚೂಪುಗೊಳಿಸುವುದನ್ನು ನೋಡುವುದಕ್ಕೆ ಮಕ್ಕಳು ಸಾಕ್ಷಿಯಾದರು. ಲಕ್ಷಾಂತರ ಮುಸ್ಲಿಮರ ಮಾತು ಇದಾಗಿತ್ತು. ನಾವಿನ್ನು ಸ್ವತಂತ್ರರು, ನಮಗೆ ನಮ್ಮದೇ ಸರಕಾರ ಸಿಗಲಿದೆ. ಹಿಂದೂಗಳ ಒಂದು ರಕ್ತದ ಹನಿಯೂ ನಮ್ಮ ದೇಶದಲ್ಲಿರ ಬಾರದು ಎಂಬ ಮಾತುಗಳು ಮಾರುಕಟ್ಟೆಯಲ್ಲಿ ಕೇಳಿ ಬರುತ್ತಿದ್ದವು.'[೩] ಇದು ಊರಿನಲ್ಲಿ ನಡೆಯುತ್ತಿದ್ದ ಘಟನೆಗಳ ಮಾತು ಅಷ್ಟೆ ಆಗುತ್ತಿರಲಿಲ್ಲ. ಪಟ್ಟಣಗಳು ಇದಕ್ಕೆ ಹೊರತಾಗಿರಲಿಲ್ಲ. ಇಲ್ಲಿನ ಜನ ಪಟ್ಟಣಗಳಲ್ಲಿ ನಡೆಯುತ್ತಿದ್ದ ಕ್ರೌರ್ಯವನ್ನು ಮಾತಾಡುತ್ತಿದ್ದರು. ರಸ್ತೆಗಳಲ್ಲಿ ರಕ್ತದ ಓಕುಳಿಯೇ ಹರಿಯಿತು. ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದ ಹೆಣಗಳಿಗೆ ಸಂಸ್ಕಾರ ಮಾಡುವವರು ಯಾರೂ ಇರಲಿಲ್ಲ. ಕೊಳೆತ ಹೆಣಗಳ ವಾಸನೆ ಸಾಂಕ್ರಾಮಿಕ ಕಾಯಿಲೆಗಳಿಗೆ ಕಾರಣವಾಯಿತು. ಕೆಲವು ಪಟ್ಟಣಗಳಲ್ಲಿ ಹಿಂದೂ ವಲಯ ಮುಸ್ಲಿಂ ವಲಯಗಳ ನಡುವೆ ತಡೆಗೋಡೆಗಳು ನಿರ್ಮಾಣವಾದವು. ಗಡಿದಾಟಿ ಬಂದ ಮುಸ್ಲಿಮರ ಕುರಿತು ರೋಚಕ ಸುದ್ದಿಗಳು ಬಂದವು. ಹಲವರು ಇಂಡಿಯಾದಲ್ಲಿ

ಸತ್ತಿದ್ದರು. ಎಷ್ಟೋ ಹೆಣಗಳು ದಾಂಪತ್ಯದಲ್ಲಿ ಬಿದ್ದಿದ್ದವು. ಕೆಲವರು ಗಡಿದಾಟಿ ಬಂದ ಮೇಲೂ ತಮ್ಮ ದೇಹದ ಮೇಲಾದ ಗಾಯಗಳಿಗೆ ಬಲಿಯಾದರು. ಊರಿನ ಹೆಣ್ಣು ಮಕ್ಕಳ ಸ್ಥಿತಿ ಚಿಂತಾಜನಕವಾಯಿತು. 'ಹಿಂದೂ ಹುಡುಗಿಯರನ್ನು ಮುಸ್ಲಿಮರು, ಮುಸ್ಲಿಂ ಹುಡುಗಿಯರನ್ನು ಹಿಂದೂಗಳೂ ಅಪಹರಿಸಿದ ವಿಷಯ ಕೇಳಿ ಹಮೀದಾಳ ಕಿವಿಗೆ ಕೊಳ್ಳಿ ಇಟ್ಟಂತಾಯಿತು. ಕೆಲವು ಒತ್ತಾಯದಿಂದ ವಿವಾಹಕ್ಕೆ ಒಳಗಾದರು. ಕೆಲವರ ಕೊಲೆಯಾಯಿತು. ಕೆಲವರನ್ನು ಬೆತ್ತಲೆಗೊಳಿಸಿ ರಸ್ತೆಯಲ್ಲಿ ಮೆರವಣಿಗೆ ಮಾಡಿದರು.'[೪] ಈ ಘಟನೆಗಳು ನೈಜ ಘಟನೆಗಳಾಗಿರುವುದರಿಂದ ಈ ಸಂದರ್ಭದಲ್ಲಿ ಎಷ್ಟೋ ಮಹಿಳೆಯರು ದೌರ್ಜನ್ಯ, ಹಿಂಸೆಗಳಿಗೆ ಬಲಿಯಾಗಿದ್ದಾರೆ. ದೇಶ ವಿಭಜನೆಯ ಕಾಲದಲ್ಲಿ ಅಮೃತಾ ಪ್ರೀತಂ ಅನುಭವಿಸಿದ ನೋವು, ಅವರ ಹಲವು ಕತೆ, ಕವಿತೆ, ಕಾದಂಬರಿಗಳ ವಸ್ತುವಾಯಿತು. ಈಗಾಗಲೇ ಹೇಳಿದಂತೆ ಪಿಂಜರ್ ಕಾದಂಬರಿಯ ವಸ್ತುವು ದೇಶ ವಿಭಜನೆಯಲ್ಲಿ ನೋವನ್ನು ಅನುಭವಿಸಿದ ಕೆಲವು ಮಹಿಳೆಯರ ಕತೆಯಾಗಿದೆ. ಅಸ್ಥಿಪಂಜರ ಗಳಾಗಿ ಬದುಕಿದ ಹಲವು ಹೆಣ್ಣುಗಳ ನೋವಿನ ಕತೆಯಾಗಿದೆ. ವಿಭಜನೆಯ ನೋವು, ದುಃಖ, ಸಂಕಟದ ಸಮಯದಲ್ಲಿ ತಾತ್ಕಾಲಿಕವಾಗಿ ಡೆಹ್ರಾಡೂನಲ್ಲಿ ಆಶ್ರಯ ಪಡೆದಿದ್ದ ಅಮೃತಾ, ವಸತಿ ಹುಡುಕಲು ದೆಹಲಿಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ ಸಂತ್ರಸ್ತರ ದುಃಖವನ್ನು ನೋಡಿ ಅವರಿಗೆ ಚಾರಣ ಕವಿ ವಾರಿಸ್ ಶಾನ 'ಹೀರ್ ರಾಂಚ್' ಕವಿತೆಯ ನೆನಪಾಗಿ 'ವಾರಿಸ್ ಶಾಹ್ ಸೆ' ಕವಿತೆ ಬರೆದರು.

'ಎದ್ದೇಳು ವಾರಿಸ್ ಶಾಹ್ ಸಮಾಧಿಯ ಯಾವ
ಮೂಲೆಯಿಂದಲಾದರು ಮಾತಾಡು
ಪ್ರೇಮಗಾಥೆಯ ಹೊಸ ಪುಟಗಳನ್ನು ತೆರೆದು ಹಾಡು
ಪಂಜಾಬಿನ ಪುತ್ರಿಯೊಬ್ಬಳು ಅತ್ತಳಂದು
ನೀನವಳ ದುಃಖದ ಸುದೀರ್ಘ ಕತೆ ಬರೆದೆ
ಇಂದಾದರೋ ಲಕ್ಷಾಂತರ ಪುತ್ರಿಯರು ಅಳುತ್ತಿದ್ದಾರೆ
ನಿನ್ನೊಡನೆ ಅವರು ರೋದಿಸಿ ಹೇಳುತ್ತಿದ್ದಾರೆ.
ನೊಂದವರ ನೋವನ್ನು ನೆನೆಯಬಲ್ಲವನೇ ಎದ್ದೇಳು
ನಿನ್ನ ಪಂಜಾಬ ಹೇಗಿದೆ ಈಗ ಬಂದು ನೋಡು
ಪ್ರತಿಯೊಂದು ಲತೆಗಳಲ್ಲೂ ಶವಗಳು ನೇತಾಡುತ್ತಿವೆ ಈಗ
ಈನಾಬ ನದಿಯಲ್ಲಿ ನೀರಲ್ಲ ರಕ್ತ ಹರಿಯುತ್ತಿದೆ ಈಗ.....
ಏಳು ಎದ್ದೇಳು ವಾರಿಸ್ ಸಮಾಧಿಯಿಂದಲೇ ಉಸಿರು
ನಿನ್ನೊಡನೆ ಹೇಳುತ್ತಿರುವೆ ಒಲವಿನ ಹೊಸ ಪುಟಗಳನ್ನು ತೆರೆದು ತೋರಿಸು....'[೫]

ಅಮೃತಾ ಸ್ವತಃ ಅವರೇ ಹೇಳುವ ಹಾಗೆ 'ಸ್ವಂತದ ನೋವು ಇತರರ ನೋವನ್ನು ನೋಡುವ ದೃಷ್ಟಿಯನ್ನು ನೀಡುತ್ತದೆ. ಆಕೆ ತನ್ನ ನೋವಿನಲ್ಲಿ ಸಮಗ್ರ ಮಾನವ ಕುಲದ ನೋವನ್ನು ಶಾಮೀಲು ಮಾಡಿಕೊಂಡಳು ಹಾಗೂ ತನ್ನ ನೋವಷ್ಟೇ ಅಲ್ಲ ಜಗತ್ತಿನ ನೋವನ್ನೊಳಗೊಂಡ ಕವನಗಳನ್ನು ಬರೆದಳು.'[1]

ಹಮೀದಾಳ ಊರು ಚಾತ್ತೋದಲ್ಲಿ ರಕ್ತಪಾತ ಶುರುವಾಯಿತು. ಹಿಂದೂಗಳು ಓಡಿ ಹೋಗಿ ತಲೆಮರೆಸಿಕೊಂಡರು. ಆದರೆ ಕೆಲವರು ತುಂಬಾ ದೂರ ಹೋಗುವುದರೊಳಗೆ ಕೊಲ್ಲಲ್ಪಟ್ಟರು. ಹಲವಾರು ಹಿಂದೂಗಳು ಒಂದೇ ಮನೆಯಲ್ಲಿ ರಕ್ಷಣೆಗಾಗಿ ಸೇರಿಕೊಂಡರು. ಪಂಜರದೊಳಗಣ ಪ್ರಾಣಿಗಳಂತೆ ಬಚ್ಚಿಟ್ಟುಕೊಳ್ಳಲು. ಮುಸ್ಲಿಮರು ಮಾತ್ರ ಸ್ವತಂತ್ರವಾಗಿ ಓಡಾಡುತ್ತಿದ್ದರು. ಊರು ಬಿಟ್ಟು ಹೋದ ಹಿಂದೂಗಳ ಮನೆಯ ಬಾಗಿಲು ಮುರಿದು ಆಕ್ರಮಿಸಿಕೊಂಡರು. ರಕ್ತಪಾತ ಮುಗಿಲೆತ್ತರಕ್ಕೆ ಮುಟ್ಟಿತು. ಹಿಂದೂಗಳು ಆಶ್ರಯ ಪಡೆದ ಮನೆಯನ್ನು ಮುಸ್ಲಿಮರು ಆಕ್ರಮಣ ಮಾಡಿದರು. ಸೀಮೆ ಎಣ್ಣೆ ಸುರಿದು ಮನೆಗಳಿಗೆ ಬೆಂಕಿ ಹಚ್ಚಿದರು. ಜ್ವಾಲೆ ಮುಗಿಲೆತ್ತರಕ್ಕೆ ಆಕ್ರಂದನ ಮಾಡುತ್ತಿದ್ದು, ಈ ಆಕ್ರಂದನದ ಮಧ್ಯೆ ಒಳಗೇ ಬಂಧಿಗಳಾದ ಸ್ತ್ರೀಯರ, ಪುರುಷರ ಆಕ್ರಂದನ ಯಾರಿಗೂ ಮುಟ್ಟ ದಾಯಿತು. 'ಮೂರು ದೇಹಗಳು ವಿಪರೀತವಾಗಿ ಸುಟ್ಟಿದ್ದವು. ಮೇಣದಂತೆ ಕೊಬ್ಬು ಅವರ ದೇಹದಿಂದ ಇಳಿಯುತ್ತಿತ್ತು. ಮೂಳೆಗಳು ಬೆಳ್ಳಗೆ ಕಾಣುತ್ತಿದ್ದವು. ಉಳಿದವರೆಲ್ಲ ಟ್ರಕ್‌ನಲ್ಲಿ ಕುಳಿತಾಗ ಈ ಮೂವರ ಮೃತದೇಹಗಳು ರಸ್ತೆಯಲ್ಲಿ ಬಿದ್ದಿದ್ದವು. ಅವರ ಸಂಸ್ಕಾರಕ್ಕೆ ಸಮಯವಿರಲಿಲ್ಲ. ಅವರ ಬಂಧುಗಳ ವಿರೋಧದ ನಡುವೆಯೇ ಟ್ರಕ್ ಅಲ್ಲಿಂದ ಹೊರಟಿತು. ಊರು ಹಾಳು ಬಿದ್ದಂತೆ ಕಾಣಿಸುತ್ತಿತ್ತು.'[2]

ಊರಿನಲ್ಲಿದ್ದ ಮುಸ್ಲಿಮೇತರರು ಎಂದರೆ ಆ ಮೂರು ದೇಹಗಳು ಮಾತ್ರ. ಎರಡು ದಿನಗಳಲ್ಲಿ ಬೀದಿನಾಯಿ, ಕಾಗೆಗಳು ಆ ಹೆಣಗಳನ್ನು ತಿಂದು ಮುಗಿಸಿದವು. ಉರಿದು ಹೋದ ಮನೆಯ ಎದುರಿಗೆ ಅಸ್ಥಿಪಂಜರಗಳು ಮಾತ್ರ ಉಳಿದವು. ಇವುಗಳ ಮಧ್ಯೆ ಹಮೀದಾ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯ ಗಳನ್ನು ಕಣ್ಣಾರೆ ನೋಡುತ್ತಾಳೆ. ಹತ್ತು ಹನ್ನೆರಡು ಗೂಂಡಾಗಳು ಹುಡುಗಿಯೊಬ್ಬಳನ್ನು ತಳ್ಳಾಡುತ್ತಿದ್ದರು. ಅವಳ ಮೈಮೇಲೆ ನೂಲೆಳೆಯೂ ಇರಲಿಲ್ಲ. ತಮಟೆ ಬಾರಿಸಿಕೊಂಡು ಅವರೆಲ್ಲ ಕುಣಿಯುತ್ತಿದ್ದರು. ಹೆಣ್ಣಾಗಿ ಹುಟ್ಟುವುದೇ ಒಂದು ಅಪರಾಧ ಎಂದು ಅವಳು ಭಾವಿಸಿದಳು. ಹೆಣ್ಣಿನ ದೌರ್ಜನ್ಯ ಸಾವಿರಾರು ವರ್ಷಗಳಿಂದಲೂ ನಡೆಯುತ್ತಿದೆ. ಈ ರೀತಿಯ ಮತೀಯ ಸಂಘರ್ಷಗಳಲ್ಲಿ ಅದು ತನ್ನ ವಿಶ್ವರೂಪ ವನ್ನು ತೋರಿಸುತ್ತದೆ. ಇವುಗಳ ಮಧ್ಯೆ ನಿರಾಶ್ರಿತರ ಶಿಬಿರಗಳಲ್ಲೂ ಶೋಷಣೆ ಯಾವುದೇ ಅಡ್ಡಿಯಿಲ್ಲ ದಂತೆ ಸಾಗುತ್ತದೆ. ನಿರಾಶ್ರಿತರ ಆಶ್ರಯ ತಾಣಗಳು ಸುಲಿಗೆಗಳ, ದೌರ್ಜನ್ಯಗಳ ಪರಾಕಾಷ್ಠೆಗಳಾಗಿ ಹೊರಹೊಮ್ಮುತ್ತವೆ. ಕತ್ತಲೆಯಾದ ಮೇಲೆ ಹಮೀದಾ ಆ ಹುಡುಗಿಯನ್ನು ಮನೆಗೆ ಕರೆ ತಂದಳು. ಪಕ್ಕದ

ಹಳ್ಳಿಯಲ್ಲಿದ್ದ ನಿರಾಶ್ರಿತರ ಶಿಬಿರದಿಂದ ಅವಳು ಬಂದಿದ್ದಳು. ಅಲ್ಲಿದ್ದ ಇತರರಂತೆ ಅವಳೂ ಇಂಡಿಯಾಕ್ಕೆ ಹೋಗುವುದನ್ನು ನಿರೀಕ್ಷಿಸುತ್ತಿದ್ದಳು. ಪಾಕಿಸ್ತಾನಿ ಸೈನಿಕರು ಕ್ಯಾಂಪಿನ ಕಾವಲುಗಾರರಾಗಿದ್ದರು. ರಾತ್ರಿಯ ಸಮಯದಲ್ಲಿ ದುರುಳರೂ, ಗೂಂಡಾಗಳೂ, ಕ್ಯಾಂಪಿನ ಒಳನುಗ್ಗಿ ತಮ್ಮ ಮನಸ್ಸಿಗೆ ಬಂದ ಹೆಣ್ಣುಗಳನ್ನು ಒತ್ತೊಯುತ್ತಿದ್ದರು. ಮರುದಿನ ಬೆಳಿಗ್ಗೆ ಅವರನ್ನು ಕ್ಯಾಂಪ್‌ಗೆ ಮರಳಿ ಬಿಡುತ್ತಿದ್ದರು. ಈ ಹುಡುಗಿ ಕಳೆದ ಒಂಭತ್ತು ದಿನಗಳಿಂದಲೂ ಬೇರೆ ಬೇರೆಯವರ ಜೊತೆ ಒತ್ತಾಯ ಪೂರ್ವಕವಾಗಿ ದಿನ ಕಳೆಯಬೇಕಾಗಿ ಬಂದಿತ್ತು. ಅಪಹರಣಕಾರರಿಂದ ತಪ್ಪಿಸಿಕೊಂಡ ಅವಳು ಕಬ್ಬಿನಗದ್ದೆಯಲ್ಲಿ ಬಚ್ಚಿಟ್ಟುಕೊಂಡಿದ್ದಳು.'[೮]

ಇದರ ಮಧ್ಯೆ ಹಮೀದಾಳ ನೋವಿನ ಮಾತು ಯಾವ ದೇವರಿಗೂ ಕೇಳಿಸುವುದಿಲ್ಲ. ಮತ್ತೆ ಮತ್ತೆ ಹೆಣ್ಣಿನ ಮೇಲೆ ಒತ್ತಡದ ಬದುಕು ಹಾಗೆ ಮುಂದುವರೆಯುತ್ತದೆ. ಅವಳೇ ಹೇಳುವ ಹಾಗೆ ಹೊಂಬಣ್ಣದ ಕಾಳು ಬೆಳೆಯಲು ಭೂಮಿ ಮನುಷ್ಯರಕ್ತದಿಂದ ನೆನೆಯಲೇಬೇಕೆ? ಕೊಳೆತು ನಾರುವ ಹೆಣಗಳಿಂದ ಕಲುಷಿತವಾದ ಭೂಮಿಯಲ್ಲೇ ಸುಗಂಧಿತ ಜೋಳ ಬೆಳೆಯುವುದೇ? ಅವಮಾನಕ್ಕೆ ಒಳಗಾದ ಸೋದರಿಯರ ಹೊಟ್ಟೆಯಲ್ಲಿ ಜನಿಸಿದ ಮಕ್ಕಳೇ ದಾಳಿಕೋರರಿಗೆ ಆಹಾರವಾಗಬೇಕೆ? ಹಲವಾರು ಹೆಣ್ಣುಗಳ ಆಕ್ರಂದನ ಕೇಳಿದ ಹಮೀದಾಳಿಗೆ ಸ್ವತಃ ತನ್ನ ತಂಗಿ ಲಾಜೋಳು ಮುಸ್ಲಿಮರಿಂದ ಅಪಹರಣಕ್ಕೆ ಒಳಗಾಗಿದ್ದಾಳೆಂದು ಗೊತ್ತಾಗುತ್ತದೆ. ಲಾಜೋಳ ಅತ್ತೆ ಹಾಗೂ ಗಂಡ ಹಮೀದಾಳನ್ನು ಬೇಡಿಕೊಳ್ಳುತ್ತಾರೆ ಲಾಜೋಳನ್ನು ಕಾಪಾಡುವಂತೆ. ಅವಳ ಮನಸ್ಸಿನಲ್ಲಿ ಏಳುವ ಪ್ರಶ್ನೆ ಒಂದೇ ಆಗಿರುತ್ತದೆ. ನನ್ನ ತಂದೆ ತಾಯಿ, ಅತ್ತೆ, ಗಂಡ, ಯಾರೂ ಧರ್ಮವನ್ನು ದಾಟಲಾಗಲಿಲ್ಲ. ಈಗೇಕೆ ಇಷ್ಟೊಂದು ಉದಾರಿಗಳಾಗಿದ್ದಾರೆ? ಅವಳ ನೋವು ರೋಷಕ್ಕೆ ತಿರುಗಿತ್ತು. 'ಹಮೀದಾಳ ಮನಸ್ಸನ್ನು ಒಂದು ಬಗೆಯ ರೋಷ ಆವರಿಸಿತ್ತು. ಅವಳ ಅಪಹರಣವಾದಾಗ ಧರ್ಮ ಒಂದು ದಾಟಲಾರದ ತಡೆಯಾಗಿತ್ತು. ಅವಳ ತಂದೆ ತಾಯಿ ಯರಾಗಲೀ ಭಾವೀ ಅತ್ತೆ ಮಾವಂದಿರಾಗಲೀ ಮರಳಿ ಅವಳನ್ನು ಸ್ವೀಕರಿಸಲು ಸಿದ್ಧರಿರಲಿಲ್ಲ. ಆದರೆ ಈಗ ಅದೇ ಧರ್ಮ ಈ ವಿಷಯದಲ್ಲಿ ಉದಾರವಾಗಿಟ್ಟಿದೆ.'[೯] ಲಾಜೋಳನ್ನು ಹಮೀದಾ ರಕ್ಷಿಸಿದಳು. ಆದರೆ ಲಾಜೋಳ ಮನಸ್ಸಿನಲ್ಲಿ ಸುಳಿಯುತ್ತಿರುವ ನೂರಾರು ಪ್ರಶ್ನೆಗಳಿಗೆ ಹಮೀದಾ ಉತ್ತರಿಸಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಈಗಾಗಲೇ ಅಪಹರಿಸಿದ ಹೆಣ್ಣನ್ನು ಕುಟುಂಬದವರು ಸೇರಿಸಿಕೊಳ್ಳುತ್ತಾರೆಂಬ ಕಲ್ಪನೆ ಎಂಜಲು ಎಲೆಯ ಮೇಲೆ ಬಡಿಸಿದ ಭೋಜನವಾಗಿತ್ತು. ಹಿಂದೂ ಮುಸ್ಲಿಮರ ಮತೀಯ ಸಂಘರ್ಷಗಳಿಂದ ಅಪಹರಣ, ಕೊಲೆ, ಸುಲಿಗೆ, ಅತ್ಯಾಚಾರಗಳು ನಡಿದಿವೆ. ಇನ್ನು ಮುಂದೆ ಹಾಗೆ ಬಲಿಯಾದವರ ಪಾಡೇನು? ಅವರನ್ನು ಕುಟುಂಬ ಸ್ವೀಕರಿಸುತ್ತದೆಯೇ? ಇದಕ್ಕೆ ಹಮೀದಾ ಕೊಡುವ ಉತ್ತರ – 'ಈಗ ಯಾರೂ ಇನ್ನೊಬ್ಬರನ್ನು ವ್ಯಂಗ್ಯ ಮಾಡುವಂತಿಲ್ಲ. ಆ ಜನ ತಮ್ಮ ಅಪಹೃತ ಹೆಣ್ಣು ಮಕ್ಕಳು ಸೋದರಿಯರನ್ನು ಮರಳಿ ಮನೆಗೆ

ಸೇರಿಸಿಕೊಳ್ಳುತ್ತಿದ್ದಾರೆ. ರಶೀದ ನನಗೆ ಹೇಳಿದ ಪ್ರಕಾರ ಗಂಡಸರು ತಮ್ಮ ಹೆಂಡತಿಯರನ್ನು ಹುಡುಕಲು ಇಂಡಿಯಾದ ಗಡಿಯೊಳಗೆ ಪ್ರವೇಶಿಸಿ ಮರಳಿ ಅವರನ್ನು ಕರೆ ತಂದಿದ್ದಾರೆ. ಕೆಲವರು ಆ ಮೇಲೆ ಹುಟ್ಟಿದ ಮಕ್ಕಳ ಜೊತೆಗೆ ಹೆಂಡತಿಯರನ್ನು ಮರಳಿ ಸ್ವೀಕರಿಸಿದ್ದಾರೆ.'[೧೦] ಆ ಜನರು ಉದಾರಿಗಳಾಗಿ ವರ್ತಿಸುತ್ತಿದ್ದಾರೆ. ಇದು ಅವರಿಗೆ ಅನಿವಾರ್ಯವೂ ಆಗಿರಬಹುದು. ಲಾಜೋಳನ್ನು ಅವಳ ಕುಟುಂಬ ಸ್ವೀಕರಿಸಲು ತಯಾರಿರುತ್ತದೆ. ಅವಳ ತಮ್ಮ ಅವಳಿಗೆ ಮರಳಿ ತವರಿಗೆ ಮರಳುವ ಅವಕಾಶವನ್ನು ಕಲ್ಪಿಸು ತ್ತಾನೆ. ನಾನು ಹಿಂದೂ ಎಂದು ಅವಳು ಒಂದು ಮಾತು ಹೇಳಿದರೆ, ಅವಳು ಇಂಡಿಯಾಗೆ ಹೋಗಬಹುದಾಗಿತ್ತು. ಹಮೀದಾಗೆ ತವರಿಗಿಂತ ಗಂಡನ ಜೊತೆಯೇ ಈಗ ಸುಂದರವಾಗಿದೆ. ಆದ್ದರಿಂದ ಅವಳು ಪಾಕಿಸ್ತಾನದಲ್ಲಿಯೇ ಉಳಿಯುತ್ತಾಳೆ. ಮತೀಯ ಸಂಘರ್ಷಗಳಲ್ಲಿ ನೂರಾರು ಮಹಿಳೆಯರು ಅಸ್ಥಿಪಂಜರದಂತೆ ಬದುಕು ಸವೆಸಿದ್ದರು. ದೇಶ ವಿಭಜನೆಯ ಸಂದರ್ಭದಲ್ಲಿ ಈ ಹೆಣ್ಣುಗಳ ಗೋಳು ಯಾರಿಗೂ ಕೇಳದಾಯಿತು. ಈ ಗೋಳನ್ನು ಅಮೃತ ತಮ್ಮ ಕೃತಿಯಲ್ಲಿ ನಿರೂಪಿಸಿ, ಹಲವಾರು ಹೆಣ್ಣು ಮಕ್ಕಳ ಸ್ಥಿತಿ ಅಸ್ಥಿಪಂಜರದಂತೆ ಅಲ್ಲ ಅವರಿಗೆ ಅವರದ್ದೇ ಆದ ಬದುಕಿರುತ್ತದೆ ಎಂದು ತೋರಿಸಿಕೊಟ್ಟಿದ್ದಾರೆ.

ಹಿಂದೂ ಮುಸ್ಲಿಮರು ಒಬ್ಬರಿಗೊಬ್ಬರು ನಡೆಸುವ ದೌರ್ಜನ್ಯವನ್ನು ಕಣ್ಣಾರೆ ನೋಡಿರುವ ಲೇಖಕಿ ಹಿಂದೂ ಧರ್ಮದವರಾಗಿ ಅವರು ಅನುಭವಿಸಿದ ನೋವನ್ನು, ಸಾವಿರಾರು ಹೆಣ್ಣುಗಳ ನೋವನ್ನು, ಪಂಜಾಬಿನ ಜನರ ನೋವನ್ನು, ತಮ್ಮ ನೋವನ್ನು ವಾರಿಸ್ ಕವಿಗೆ ಪತ್ರವಾಗಿ ಸೆರೆ ಹಿಡಿಯುತ್ತಾರೆ. ಈ ಸಂಘರ್ಷಗಳಲ್ಲಿ ನೀರಂತೆ ರಕ್ತ ಹರಿಯುತ್ತದೆ. ಇದನ್ನು ನಿಲ್ಲಿಸಲಾದರೂ ಸಮಾಧಿಯಿಂದ ಎದ್ದು ಬಾ ಎಂದು ಕೇಳುತ್ತಾಳೆ. ಅವರು ಧರ್ಮಗಳ ಹೊರತಾಗಿ ಎರಡು ಪ್ರೀತಿಯ ಹುಡುಕಾಟವನ್ನು ನಡೆಸುತ್ತಾರೆ. ಒಂದು ಧರ್ಮಗಳ ಗೋಜಿಗೆ ಅಂಟದೆ ಸಾಹಿರ್ ಎಂಬ ಮುಸ್ಲಿಂ ಕವಿಯ ಪ್ರೀತಿಗಾಗಿ ಹಾತೊರೆಯುತ್ತಾರೆ. ಅವರಿಗೆ ಮುಸ್ಲಿಂ ಕವಿ ಇಮ್ರೋಜ್‌ರ ಪ್ರೀತಿ ಲಭಿಸುತ್ತದೆ. ಎರಡನೆಯದು ವಿಶ್ವ ಪ್ರೀತಿ. ಇಡೀ ವಿಶ್ವ ಯಾವುದೇ ರಕ್ತಪಾತವಿಲ್ಲದೆ ಸಂತೋಷದಿಂದ ಬಾಳಬೇಕೆಂದು ಹಾತೊರೆಯುತ್ತಾರೆ. ಈ ಎಲ್ಲಾ ಕಾರಣಗಳಿಂದಾಗಿ ಅವರ ಬದುಕು ಹಾಗೂ ಅವರ ಸಾಹಿತ್ಯದ ಘನತೆ ಹೆಚ್ಚಿದೆ ಎಂದು ಹೇಳಬಹುದಾಗಿದೆ. 'ಅಮೃತಾ ಪ್ರೀತಂ ಅವರ ಕಥನದಲ್ಲಿ ಸ್ತ್ರೀ ಅಸ್ಮಿತೆ' ಈ ಅಧ್ಯಯನವು ಸಾಗರದಿಂದ ಹೊರತೆಗೆದ ಒಂದು ಚಿಪ್ಪಿನಲ್ಲಿರುವ ಮುತ್ತಾಗಿದೆ. ಇನ್ನೂ ಸಾಗರದಿಂದ ಹೊರತೆಗೆಯಬೇಕಾದ ಮುತ್ತಿನ ರಾಶಿ ಸಾಕಷ್ಟಿದೆ. ಈರಾಶಿಯನ್ನು ಹೊರತರುವ ಯುವ ಚೈತನ್ಯಕ್ಕೆ ಈ ಅಧ್ಯಯನವು ಒಂದು ದಾರಿ ದೀಪವಾಗಿದೆ.

ಟಿಪ್ಪಣಿಗಳು

೧ ಅಮೃತಾ ಪ್ರೀತಂ, ಪಿಂಜರ್, ಅನು - ಎಲ್.ಸಿ. ಸುಮಿತ್ರಾ, ಅಂಕಿತ ಪ್ರಕಾಶನ, ೨೦೦೬, ಪುಟ : ೪೧

೨ ಅದೇ ಪುಟ : ೪೭

೩ ಅದೇ ಪುಟ : ೫೬

೪ ಅದೇ ಪುಟ : ೫೬

೫ ಅದೇ ಪುಟ : ೮೪

೬ ಅಮೃತಾ ಪ್ರೀತಂ, ರಸೀದಿ ಟಿಕೇಟು, ಅನು - ಹಸನ್ ನಯೀಂ ಸುರಕೋಡ, ಲೋಹಿಯಾ ಪ್ರಕಾಶನ, ೨೦೦೪, ಪುಟ : ೪೫

೭ ಅಮೃತಾ ಪ್ರೀತಂ, ಪಿಂಜರ್, ಅನು - ಎಲ್.ಸಿ. ಸುಮಿತ್ರಾ, ಅಂಕಿತ ಪ್ರಕಾಶನ, ೨೦೦೬, ಪುಟ : ೫೭

೮ ಅದೇ ಪುಟ : ೫೮

೯ ಅದೇ ಪುಟ : ೬೫

೧೦ ಅದೇ ಪುಟ ; ೭೬

ಉಪಸಂಹಾರ

ಅಮೃತಾ ಪ್ರೀತಂ ಅವರು ತಮ್ಮ ಕೃತಿಗಳಲ್ಲಿ ಸಂಪ್ರದಾಯಸ್ಥ ನಿಯಮಗಳನ್ನು ಮೀರಿ, ಸ್ತ್ರೀಯರ ಮನಸ್ಸಿಂದ, ಕಣ್ಣಿನಿಂದ, ಹೃದಯದಿಂದ ಬದುಕನ್ನು ಚಿತ್ರಿಸಿದ್ದಾರೆ. ಇವರ ಸಾಹಿತ್ಯದಲ್ಲಿ ನನಗೆ ಹೆಚ್ಚು ಕಾಡಿರುವ ಕೃತಿಗಳೆಂದರೆ ಸುನೇರಿ, ಪಿಂಜರ್ ಹಾಗೂ ಒಂದು ನಿಟ್ಟುಸಿರು. ಹಲವಾರು ಹೆಣ್ಣುಗಳ ನೋವನ್ನು ಪಿಂಜರ್ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಈ ಹೆಣ್ಣು ಮಕ್ಕಳು ಅಸ್ಥಿಪಂಜರಗಳಾಗಿ ಬದುಕನ್ನು ನೂಕುತ್ತಿರುತ್ತಾರೆ. ಅವರಿಗೆ ಅವರದ್ದೇ ಆದ ಹೆಸರು ಇಲ್ಲ, ಅಸ್ತಿತ್ವವೂ ಇಲ್ಲ. ಹೆಣ್ಣುಗಳ ಶೋಷಣೆಯನ್ನು ನಡು ರಸ್ತೆಯಲ್ಲಿಯೇ ಅವರ ಸಂಬಂಧಿಕರ ಎದುರಿನಲ್ಲೇ ಮಾಡಿದರೂ ಕೇಳುವ ಧೈರ್ಯ ಯಾರೂ ಮಾಡುವುದಿಲ್ಲ. ಹಿಂದೂ ಹೆಣ್ಣುಗಳ ಶೋಷಣೆಯನ್ನು ಮುಸ್ಲಿಮರು, ಮುಸ್ಲಿಂ ಹೆಣ್ಣು ಮಕ್ಕಳ ಶೋಷಣೆಯನ್ನು ಹಿಂದೂಗಳು ಸರದಿಯಂತೆ ಮಾಡುತ್ತಾರೆ. ಜಾತಿ ಎಷ್ಟು ಪ್ರಬಲವಾಗಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಜಾತಿಯು ಹೆಣ್ಣುಗಳ ಶೋಷಣೆಯ ಖಜಾನೆಯಾಗುತ್ತದೆ.

ಒಂದು ನಿಟ್ಟುಸಿರು ಕಥೆಯು ಇನ್ನೊಂದು ಹೆಣ್ಣಿನ ನೋವಿನ ಕಥಾನಕವಾಗಿದೆ. ಬಸಿರಾಗಿರುವ ಹೆಂಡತಿ ತವರಿಗೆ ಹೋದರೆ, ಆಸ್ತಿಯ ಆಸೆಯಿಂದ ಹೆಣ್ಣು ಮಗು ಹುಟ್ಟಿದರೂ ಗಂಡು ಮಗುವನ್ನು ತೋರಿಸಬಹುದೇನೋ ಎಂದು ಯೋಚಿಸುವ ಮುದುಕ ಸರದಾರನಿಗೆ ತನ್ನ ಚಿಕ್ಕವಯಸ್ಸಿನ ಹೆಂಡತಿ ಬಸಿರಾಗುವುದಕ್ಕೆ ಕಾರಣ ತಾನಲ್ಲ ಎಂದು ಗೊತ್ತಾಗುವುದೇ ಇಲ್ಲ. ವೀರೋಳ ವಿಷಮ ದಾಂಪತ್ಯದಲ್ಲಿ ಅವಳು ಬೇರೆಡೆಯೇ ಪ್ರೀತಿಯನ್ನು ಅರಸುತ್ತಾಳೆ.

ಅಮೃತಾ ಪ್ರೀತಂ ಅವರ ಕಥನದ ಹಲವು ಪಾತ್ರಗಳನ್ನು ವಿವಿಧ ಸ್ತ್ರೀವಾದಗಳೊಂದಿಗೆ ಸಮೀಕರಿಸಲಾಗಿದೆ. ನನಗೆ ಈ ಅಧ್ಯಯನದಲ್ಲಿ ಹೆಚ್ಚು ಕಾಡಿದ ಅಧ್ಯಾಯ ಹೆಣ್ಣು–ದೇಹ–ಮನಸ್ಸು. ಇದರಲ್ಲಿ ಕೆಲವು ಪಾತ್ರಗಳ ಮೂಲಕ ಹೆಣ್ಣು ಸಂಪೂರ್ಣವಾಗಿ ದೇಹ, ಮನಸ್ಸುಗಳಲ್ಲಿ ಬೇರೆಯಾಗಿರುತ್ತಾಳೆಂದು ಚರ್ಚಿಸಲಾಗಿದೆ. ಅದರೊಂದಿಗೆ ಮನೋವಿಶ್ಲೇಷಣಾತ್ಮಕ ನೆಲೆಯಲ್ಲಿ ವೈಜ್ಞಾನಿಕವಾಗಿ ಹಲವು ವಾದಗಳನ್ನು ಚರ್ಚಿಸಲಾಯಿತು.

ಮೂರನೇ ಹೆಣ್ಣು ಕಥೆಯಲ್ಲಿನ ಮೀನಾ ತನ್ನ ಅಕ್ಕನ ಮಗನನ್ನು ಬಯಸುವುದು ಅನಿವಾರ್ಯವಾಗಿತ್ತು. ಸಂಪ್ರದಾಯ ಮನಸ್ಸುಗಳಿಗೆ ಈ ವಿವಾಹೇತರ ಸಂಬಂಧಗಳು ಕಲ್ಪನೆಗೂ ಅಸಾಧ್ಯವಾದದ್ದು. ಮೀನಾಳ ಅನಿವಾರ್ಯತೆಯನ್ನು ಅವಳ ಇಚ್ಛೆಯಂತೆ ಪೂರೈಸಿದ ಪಾತ್ರವಾಗಿ, ಅವಿನಾಶನ ಪಾತ್ರವು ಗಟ್ಟಿತನ ಪಡೆದಿದೆ. ಮೀನಾಳ ಅವಶ್ಯಕತೆಯನ್ನು, ಅನಿವಾರ್ಯತೆಯನ್ನು ಅವಿನಾಶ ತುಂಬುವ ಪ್ರಯತ್ನ ಮಾಡುತ್ತಾನೆ. ಒಟ್ಟಾರೆಯಾಗಿ ಅಮೃತಾ ಪ್ರೀತಂ ಅವರ ಕಥನಗಳು ಒಂದಕ್ಕಿಂತ ಒಂದು ಭಿನ್ನವಾಗಿದ್ದು,

ಸಾಹಿತ್ಯದ ಘನತೆಯನ್ನು ಹೆಚ್ಚಿಸಿವೆ. 'ಅಮೃತಾ ಪ್ರೀತಂ ಅವರ ಕಥನದಲ್ಲಿ ಸ್ತ್ರೀ ಅಸ್ಮಿತೆ' ಈ ಅಧ್ಯಯನ ಯುವಚೈತನ್ಯಗಳು ಅಮೃತಾ ಪ್ರೀತಂರ ಸಾಹಿತ್ಯ ಅಧ್ಯಯನದಲ್ಲಿ ತೊಡಗಲು ಪ್ರೇರಣೆ ನೀಡಲೆಂದು ಆಶಿಸುತ್ತೇನೆ. ಈ ಅಧ್ಯಯನವು ವಿಶಾಲವಾದ ಸಾಗರದ ಒಂದು ಚಿಪ್ಪಿನ ಮುತ್ತಾಗಿದೆಯಷ್ಟೆ, ಇನ್ನೂ ಅಮೃತಾ ಪ್ರೀತಂರ ಕಾವ್ಯ ಸಾಗರದಿಂದ ಹೊರತೆಗೆಯಬೇಕಾದ ಮುತ್ತಿನ ರಾಶಿಯು ಸಾಕಷ್ಟಿದೆ. ಈ ರಾಶಿಯನ್ನು ಹೊರತರುವ ಯುವ ಚೈತನ್ಯಗಳಿಗೆ ಈ ಅಧ್ಯಯನವು ದಾರಿದೀಪವಾಗಲಿ.

ಪರಾಮರ್ಶನ ಗ್ರಂಥಗಳು

೧ ವಿಜಯದಬ್ಬೆ, ನಾರಿ ; ದಾರಿ – ದಿಗಂತ, ರಚನಾ ಪ್ರಕಾಶನ, ೧೯೯೭

೨ ಬಿ.ಎನ್. ಸುಮಿತ್ರಾಬಾಯಿ, ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೯

೩ ಸಂ. ಎನ್. ಮನುಚಕ್ರವರ್ತಿ, ಭಾರತೀಯ ಸ್ತ್ರೀವಾದ, ಅಕ್ಷರ ಪ್ರಕಾಶನ, ೧೯೯೩

೪ ಎಚ್.ಎಸ್. ಶ್ರೀಮತಿ, ಸ್ತ್ರೀವಾದ, ಹಂಪಿ ಕನ್ನಡ ವಿಶ್ವವಿದ್ಯಾಲಯ, ಪ್ರಸಾರಂಗ, ೨೦೦೩

೫ ಬಿ.ಆರ್. ಕವಿತಾ ರೈ, ಮಹಿಳೆ, ಅಸ್ತಿತ್ವದ ಸಂಕಥನ, ಸಿ.ವಿ.ಜಿ. ಪಬ್ಲಿಕೇಷನ್ಸ್, ೨೦೦೫

೬ ಮಂಗಳಾ ಪ್ರಿಯದರ್ಶಿನಿ, ಮಹಿಳಾ ಅಧ್ಯಯನ, ಹಂಪಿ ಕನ್ನಡ ವಿಶ್ವವಿದ್ಯಾಲಯ, ೨೦೦೭

೭ ಅಮೃತಾ ಪ್ರೀತಂ, ಕಾಡಿನ ಬೇರು, ಅನು – ಶಾಂತರಸ ಹೆಂಬೇರಾಳು, ಲೋಹಿಯ ಪ್ರಕಾಶನ, ೨೦೦೬

೮ ಸಂ. ಹರಭಜನ್ ಸಿಂಗ್, ಪಂಜಾಬಿ ಕಥೆಗಳು, ಅನು – ಗೌರೀಶ ಕಾಯ್ಕಿಣಿ, ನ್ಯಾಷನಲ್ ಬುಕ್ ಟ್ರಸ್ಟ್, ೧೯೯೦

೯ ಅಮೃತಾ ಪ್ರೀತಂ, ಸುನೇರಿ, ಅನು – ಹಾ.ಮಾ.ನಾ. ಐಬಿಎಚ್ ಪ್ರಕಾಶನ, ೧೯೮೬

೧೦ ಅಮೃತಾ ಪ್ರೀತಂ, ನುಡಿಯ ನೆರಳು, ಅನು – ಶೈಲಜಾ ಉಡುಚಣ.

೧೧ ಅಮೃತಾ ಪ್ರೀತಂ, ರಸೀದಿ ಟಿಕೆಟು, ಅನು – ಹಸನ್ ನಯೀಂ ಸುರಕೋಡ, ಲೋಹಿಯ ಪ್ರಕಾಶನ, ೨೦೦೪

೧೨ ಮಹಾಶ್ವೇತಾದೇವಿ, ರುಡಾಲಿ, ಅನು – ಎಚ್.ಎಸ್. ಶ್ರೀಮತಿ, ಅಂಕಿತ ಪ್ರಕಾಶನ, ೨೦೦೫

೧೩ ಮಹಾಶ್ವೇತಾದೇವಿ, ದ್ರೋಪ್ದಿ ಇತರ ಕತೆಗಳು, ಅನು – ಎಚ್.ಎಸ್. ಶ್ರೀಮತಿ, ಬೆಳ್ಳಿ ಚುಕ್ಕಿ ಪುಸ್ತಕಾಲಯ, ೧೯೯೬

೧೪ ಇಂದಿರಾ ಗೋಸ್ವಾಮಿ, ಅಹಿರಾನ್, ಅನು – ಕುಮಾರಪ್ಪ, ಕಣ್ವ ಪ್ರತಿಷ್ಠಾನ, ೨೦೧೧

೧೫ ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ ಪ್ರಸಾರಂಗ, ೨೦೦೪